ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಸೆಪ್ಟೆಂಬರ್ 5, 2007 ರೂ.10/-



ಭೂ ಕಬಳಿಕೆ

ಮಾತೆಯ ಕ್ಯಾತೆ




ರಾಹುಲ್‌ಗಾಂಧಿಗೇ ಗಾಳ!

ಮ್ಮನೂರು ಡಕಾಯಿತಿ
ರಂಗಿ ಲಿಂಕ್?

ಯಾವ ಕರಾವಳಿ ಚೆಡ್ಡಿಗೆ
ಇಸುಬು ಸುಪಾರಿ

ರಾಘವೇಶನ
ಅರಣ್ಯ ಸ್ವಾಹ



ರಾಜಶೇಖರನ್-ಯಡ್ಡಿ ರಹಸ್ಯ ಭೇಟಿ





ಕಟ್ಟಾ ಭಾರೀ ಬಂಗಲೆ ನೆಟ್ಟ

1947 ಮತ್ತು 123!!!

ಚಾರ್ವಾಕ

- ಶಿವಸುಂದರ್-

ಭಾರತವು ಅಮೆರಿಕದೊಂದಿಗೆ ಮಾಡಿಕೊಂಡಿರುವ ಅಣುಬಂಧದ ಒಪ್ಪಂದ ಇದೀಗ ಎಡಪಕ್ಷಗಳ ತೀವ್ರ ಆಕ್ರೋಶಕ್ಕೆ ಗುರಿಯಾಗಿದೆ. ಕೇಂದ್ರದಲ್ಲಿ ಸರ್ಕಾರದ ಸ್ಥಿರತೆಯನ್ನೂ ಪ್ರಶ್ನೆಗೆ ಗುರಿ ಮಾಡಿದೆ. ಎಡಪಕ್ಷಗಳ ನಿರ್ಣಾಯಕ ಬೆಂಬಲದೊಂದಿಗೆ ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಎಡಪಕ್ಷಗಳು ಕೇಂದ್ರ ಸರ್ಕಾರದ ನೀತಿಯೊಂದರ ವಿರುದ್ಧ ಖಚಿತ ಮತ್ತು ನಿರ್ಣಾಯಕ(?) ವಿರೋಧವನ್ನು ಪ್ರಕಟಿಸಿವೆ. ಆದರೆ ಎಡಪಕ್ಷಗಳ ರಾಜಕೀಯ ವರ್ತನೆಗಳನ್ನು ಹತ್ತಿರದಿಂದ ಗಮನಿಸುತ್ತಿರುವವರಿಗೆ ಈ ವಿರೋಧ ನಿರ್ಣಾಯಕವಾದ ತಾರ್ಕಿಕ ಅಂತ್ಯ ಮುಟ್ಟುತ್ತದೆಯೇ ಅಥವಾ ಈ ಮೊದಲಿನಂತೆ ಕೇವಲ ಬೊಗಳುವ ಆದರೆ ಕಚ್ಚದ ಕಾವಲು ನಾಯಿಯ ಅರಚಾಟವಾಗಿ ಕೊನೆಗೊಳ್ಳುತ್ತದೆಯೇ ಎಂಬ ಆತಂಕ ಮಾತ್ರ ಇದ್ದೇ ಇದೆ.


ಆದೇನೇ ಇದ್ದರೂ ಭಾರತ ಸರ್ಕಾರ ಅಮೆರಿಕದೊಂದಿಗೆ ಮಾಡಿಕೊಂಡಿರುವ ಅಣುಬಂಧದ ಒಪ್ಪಂದ ಮಾತ್ರ ಭಾರತದ ಸಾರ್ವಭೌಮತೆ, ಸ್ವಾತಂತ್ರ್ಯ ಮತ್ತು ವಿಶ್ವಶಾಂತಿಯ ಧ್ಯೇಯಗಳ ಮೇಲೆ ದೀರ್ಘಕಾಲೀನ ಪರಿಣಾಮ ಬೀರುವುದಂತೂ ಸತ್ಯ. ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದಮೇಲೆ 2005ರ ಜುಲೈನಲ್ಲಿ ಭಾರತದ ನಾಗರಿಕ ಪರಮಾಣು ಯೋಜನೆಗಳಿಗೆ ಅಮೆರಿಕವು ಇಂಧನವನ್ನು ಪೂರೈಸುವ ಒಪ್ಪಂದಕ್ಕೆ ಎರಡೂ ದೇಶಗಳು ಸಹಿ ಹಾಕಿದವು. ಇದು ಈವರೆಗೆ ಅಮೆರಿಕವು ಅಣು ಇಂಧನ ಸರಬರಾಜಿನ ಬಗ್ಗೆ ಮತ್ತು ತನ್ನ ಆಣತಿ ಇಲ್ಲದೆ ಅಣ್ವಸ್ತ್ರ ಸ್ಫೋಟ ಮಾಡಿದ ರಾಷ್ಟ್ರವೊಂದರ ಜೊತೆ ನಡೆದುಕೊಳ್ಳುತ್ತಿದ್ದ ರೀತಿಗೆ ಅತ್ಯಂತ ವ್ಯತಿರಿಕ್ತವಾಗಿದೆ.

ಏಕೆಂದರೆ ಭಾರತವು 1974ರಲ್ಲಿ ತನ್ನ ಅಣ್ವಸ್ತ್ರ ಸಾಮರ್ಥ್ಯವನ್ನು ಬಹಿರಂಗಪಡಿಸಲು ಪೋಖ್ರಾನ್‌ನಲ್ಲಿ ಮೊದಲ ಬಾರಿ ಅಣ್ವಸ್ತ್ರ ಸಿಡಿಸಿದಾಗ ಅಮೆರಿಕ ಕೂಡಲೇ ಮುಂಬೈನಲ್ಲಿರುವ ತಾರಾಪುರ್ ಅಣುಶಕ್ತಿ ಸ್ಥಾವರಕ್ಕೆ ಸರಬರಾಜು ಮಾಡುತ್ತಿದ್ದ ಅಣು ಇಂಧನವನ್ನು ನಿಲ್ಲಿಸಿತು. ಆಗ ಭಾರತ ಸೋವಿಯತ್ ರಷ್ಯಾದೊಂದಿಗೆ ಸೈನಿಕ ಒಪ್ಪಂದವನ್ನು ಮಾಡಿಕೊಂಡು ಅದರೆಡೆ ವಾಲಿದ್ದರಿಂದ ವಿಶ್ವದ ಶಾಂತಿಗೆ ಭಂಗ ತಂದ ಆರೋಪ ಹೊರಿಸಿ 90ರ ದಶಕದವರೆಗೂ ಭಾರತವನ್ನು ಅಪರಾಧಿ ಸ್ಥಾನದಲ್ಲೇ ನಿಲ್ಲಿಸಿ ಏಕಾಂಗಿಗೊಳಿಸುವ ಪ್ರಯತ್ನವನ್ನು ಮುಂದುವರೆಸಿತು.

ಅದೇರೀತಿ ವಾಜಪೇಯಿ ಸರ್ಕಾರ 1999ರಲ್ಲಿ ಎರಡನೇ ಬಾರಿ ಪೋಖ್ರಾನ್‌ನಲ್ಲಿ ಅಣುಸ್ಫೋಟ ಮಾಡಿದಾಗಲೂ ಅಮೆರಿಕ ಭಾರತದ ವಿರುದ್ಧ ಕ್ರಮಗಳನ್ನು ತೆಗೆದುಕೊಂಡಿತಾದರೂ ಬಹಳ ಬೇಗನೇ ಅವನ್ನೆಲ್ಲಾ ತೆಗೆದುಹಾಕಿತು ಕೂಡಾ! 1974ರಲ್ಲಿ ಭಾರತ ಅಣುಸ್ಫೋಟ ಮಾಡಿದಾಗ ಭಾರತದ ರೀತಿ ನಾಗರಿಕ ಅಣುಶಕ್ತಿಯನ್ನು ಸೈನಿಕ ಬಳಕೆ ಮಾಡಿಕೊಳ್ಳುವ ದೇಶಗಳಿಗೆ ಅಣು ಇಂಧನ ಸರಬರಾಜು ಮಾಡದಂತೆ ತಡೆಗಟ್ಟಲು 1975ರಲ್ಲಿ ನ್ಯೂಕ್ಲಿಯರ್ ಸಪ್ಲೈ ಗ್ರೂಪ್ (NSG)ಯನ್ನು ಅಮೆರಿಕದ ಮುಂದಾಳತ್ವದಲ್ಲಿ ಸ್ಥಾಪಿಸಲಾಯಿತು. ಅದೇರೀತಿ ಪ್ರಪಂಚದಲ್ಲಿ 1967ಕ್ಕೆ ಮುಂಚೆ ಅಣ್ವಸ್ತ್ರ ಹೊಂದಿದ್ದ ಐದು ರಾಷ್ಟ್ರಗಳನ್ನು ಬಿಟ್ಟರೆ ಬೇರೆ ಯಾವುದೇ ದೇಶವು ಹೊಸದಾಗಿ ಅಣ್ವಸ್ತ್ರ ತಯಾರಿಸಬಾರದೆಂಬ ಅಣ್ವಸ್ತ್ರ ಪ್ರಸರಣ ನಿಷೇಧ ಒಪ್ಪಂದವನ್ನು ಮಾಡಿಕೊಳ್ಳಲಾಯಿತು.

ಈಗ ಇಸ್ರೇಲ್ ಅನ್ನು ಬಿಟ್ಟರೆ ಅಮೆರಿಕ ಇತಿಹಾಸದಲ್ಲೇ ಪ್ರಥಮ ಬಾರಿಗೆ ಭಾರತಕ್ಕೆ ವಿಶೇಷ ಮಾನ್ಯತೆ ಮತ್ತು ರಿಯಾಯಿತಿಗಳನ್ನು ತೋರಿಸಲು ಮುಂದಾಗಿದೆ. ಭಾರತವು ಬಹಿರಂಗವಾಗಿ ತನ್ನ ಅಣ್ವಸ್ತ್ರ ಯೋಜನೆಯನ್ನು ಪ್ರಕಟಿಸಿದ್ದರೂ ಅಮೆರಿಕ ಭಾರತಕ್ಕೆ ಅಣು ಇಂಧನ ಸರಬರಾಜು ಮಾಡಲು ಮುಂದಾಗುತ್ತಿರುವುದೇಕೆ? ಈ ರೀತಿ ಅಣ್ವಸ್ತ್ರ ಹೊಂದಿರುವ ದೇಶಗಳೊಡನೆ ಯಾವ ರೀತಿ ಸಂಬಂಧ ಇರಬೇಕೆಂಬುದನ್ನು ಅಮೆರಿಕ ದೇಶದ 1954ರ ಅಣ್ವಸ್ತ್ರ ಪ್ರಸರಣ ನಿಷೇಧ ಕಾಯಿದೆಯ 123ನೇ ಕಲಮು ವಿಷದಪಡಿಸುತ್ತದೆ. ಈಗ ಭಾರತದೊಡನೆ ವಿಶೇಷ ಸಂಬಂಧವನ್ನು ಹೊಂದುವ ಸಲುವಾಗಿಯೇ ಅಮೆರಿಕ ತನ್ನ ಈ 123ನೇ ಕಲಮಿಗೆ ತಿದ್ದುಪಡಿ ತರಲೂ ಸಹ ಮುಂದಾಗಿದೆ. ಅದಕ್ಕೆ ಯಾವ ಬಗೆಯ ತಿದ್ದುಪಡಿಯನ್ನು ತರಬೇಕೆಂದು ಸಂಸದ ಹೈಡ್ ಒಂದು ಮಸೂದೆಯನ್ನು ಪ್ರಸ್ತಾಪಿಸಿ ಅದು ಒಪ್ಪಿತವಾಗಿದೆ.

ಅದರರ್ಥ ಅಮೆರಿಕ ಭಾರತಕ್ಕೆ ಸಮಾನ ಸ್ಥಾನಮಾನ ಕೊಟ್ಟುಬಿಟ್ಟಿತೆಂದೇನೂ ಅಲ್ಲ. ಅಂಥ ಸ್ಥಾನಮಾನವನ್ನು ಇಸ್ರೇಲಿಗಿರಲಿ ತನ್ನ ನೆಚ್ಚಿನ ಭಂಟ ಇಂಗ್ಲೆಂಡಿಗೂ ಕೊಡುವುದಿಲ್ಲ. ಸಹಜವಾಗಿಯೇ ಅದರಲ್ಲಿ ಭಾರತದ ನಾಗರಿಕ ಪರಮಾಣು ಯೋಜನೆ ಸೈನಿಕ ಬಳಕೆ ಆಗದಂತೆ ಭಾರತದೊಳಗೆ ಬಂದು ಉಸ್ತುವಾರಿ ನಡೆಸುವಂಥ ಕಲಮುಗಳಿವೆ. ಉದಾಹರಣೆಗೆ ಅಮೆರಿಕದ ನೇತೃತ್ವದಲ್ಲಿರುವ ಆಂತರರಾಷ್ಟ್ರೀಯ ಅಣುಶಕ್ತಿ ಏಜೆನ್ಸಿಯು ಪ್ರತಿ ವರ್ಷ ಭಾರತದ ಅಣುಶಕ್ತಿ ಸ್ಥಾವರಗಳನ್ನು ಪರಿಶೀಲಿಸುವ ಅಧಿಕಾರವನ್ನು ಪಡೆಯುತ್ತದೆ. ಅದೇ ರೀತಿ ಪ್ರತಿ ವರ್ಷ ಅಮೆರಿಕದ ಅಧ್ಯಕ್ಷ ಅಮೆರಿಕದ ಸಂಸತ್ತಿಗೆ ಭಾರತವು ಅಮೆರಿಕದ ಆಸಕ್ತಿಗೆ ವಿರುದ್ಧವಾಗಿ ಅಮೆರಿಕದ ಅಣು ಇಂಧನ ಸಹಾಯವನ್ನು ದುರ್ಬಳಕೆ ಮಾಡಿಕೊಳ್ಳುತ್ತಿಲ್ಲ ಎಂದು ವರದಿ ನೀಡಬೇಕು ಮತ್ತು ಅದಕ್ಕೆ ಮುಂಚೆ ಭಾರತದ ಎಲ್ಲಾ ನೀತಿಗಳು ಅಮೆರಿಕದ ರಾಷ್ಟ್ರೀಯ ಹಿತಾಸಕ್ತಿಯಲ್ಲೇ ಇದೆ ಎಂದು ಭಾರತ ಸರ್ಕಾರ ಮನವರಿಕೆ ಮಾಡಿಕೊಡಬೇಕು. ಹಾಗಿದ್ದಲ್ಲಿ ಮಾತ್ರ ಈ ಒಪ್ಪಂದ ಪ್ರತಿವರ್ಷ ನವೀಕರಣಗೊಳ್ಳುತ್ತವೆ. ಹೈಡ್ ಮಸೂದೆಯು ಇನ್ನೂ ಒಂದು ಹೆಜ್ಜೆಮುಂದೆ ಹೋಗಿ ಭಾರತದ ವಿದೇಶಾಂಗ ನೀತಿ - ಅದರಲ್ಲೂ ಅದರ ಇರಾನ್ ನೀತಿ ಮತ್ತು ಇರಾನ್-ಪಾಕಿಸ್ತಾನ-ಭಾರತ ಗ್ಯಾಸ್ ಪೈಪ್‌ಲೈನ್ ನೀತಿ - ಇತ್ಯಾದಿಗಳ ಬಗೆಗೆ ತೀರ್ಮಾನ ತೆಗೆದುಕೊಳ್ಳುವಾಗ ಅಮೆರಿಕದ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡಿರಬೇಕು ಎಂದು ತಾಕೀತು ಮಾಡುತ್ತದೆ. ಅಷ್ಟೇ ಅಲ್ಲದೆ ವಿಶ್ವದಲ್ಲಿ ಶಾಂತಿ ಕಾಪಾಡಿಕೊಳ್ಳಲು ಅಂದರೆ ಅಮೆರಿಕದ ಹಿತಾಸಕ್ತಿಯನ್ನು ಕಾಪಾಡಿಕೊಳ್ಳಲು ಅಮೆರಿಕದೊಂದಿಗೆ ಕೈಜೋಡಿಸಬೇಕೆಂದು ಸಹ ಆದೇಶಿಸುತ್ತದೆ. ಅಂದರೆ ಅದು ಇಂದು ಮತ್ತು ಮುಂದೆ ಇರಾಕ್, ಇರಾನ್ ಇನ್ನಿತ್ಯಾದಿ ದೇಶಗಳ ಮೇಲೆ ಮಾಡುತ್ತಿರುವ ಮತ್ತು ಮಾಡಲಿರುವ ಎಲ್ಲಾ ಆಕ್ರಮಣಕಾರಿ ಯುದ್ಧಗಳಿಗೂ ಭಾರತ ಕೈಗೂಡಿಸಬೇಕು ಮತ್ತು ಜೂನಿಯರ್ ಪಾರ್ಟ್ನರ್ ಆಗಬೇಕು ಎಂದರ್ಥ. ಅಂದರೆ ಹೆಚ್ಚುಕಡಿಮೆ ಬ್ರಿಟಿಷ್ ವಸಾಹತುಶಾಹಿ ಕಾಲದ ಸಹಾಯಕ ಸೈನ್ಯ ಪದ್ಧತಿಯ ತರ! ಅಂದರೆ ಅಮೆರಿಕ ಭಾರತಕ್ಕೆ 'ಸಹಾಯ' ಮಾಡುತ್ತಿರುವುದು ತನ್ನ ರಾಷ್ಟ್ರೀಯ ಹಿತಾಸಕ್ತಿಯಿಂದಲೇ ವಿನಃ ಭಾರತದ ಹಿತಾಸಕ್ತಿಯಿಂದಲ್ಲ. ಅಷ್ಟು ಮಾತ್ರವಲ್ಲದೆ ಈವರೆಗೆ ಸವಾಲಿಲ್ಲದ ಸಾಮ್ರಾಟನಂತಿದ್ದ ಅಮೆರಿಕಕ್ಕೆ ಏಷಿಯ ಪ್ರಾಂತ್ಯದಲ್ಲಿ ಚೀನಾ, ರಷ್ಯಾ ನಿಧಾನಕ್ಕೆ ಆರ್ಥಿಕ ಮತ್ತು ಸೈನಿಕ ಕ್ಷೇತ್ರದಲ್ಲಿ ಸವಾಲು ಎಸೆಯುತ್ತಿವೆ. ರಷ್ಯಾ ಸೈನಿಕವಾಗಿ ಸರಿಸಾಟಿ ಹೊಂದಿರುವ ಸಾಮರ್ಥ್ಯ ಹೊಂದಿದ್ದರೆ ಚೀನಾದ ಆರ್ಥಿಕ ಪ್ರಗತಿ ಅಮೆರಿಕದ ನಿದ್ದೆಗೆಡಿಸಿದೆ. ಅದೇರೀತಿ ಐರೋಪ್ಯ ಒಕ್ಕೂಟ ಸಹ ಈ ಪ್ರಾಂತ್ಯದಲ್ಲಿ ತನ್ನ ಆರ್ಥಿಕಬಲ ಹೆಚ್ಚಿಸಿಕೊಳ್ಳುತ್ತಾ ಅಮೆರಿಕದ ಏಕಾಧಿಪತ್ಯಕ್ಕೆ ಸವಾಲೊಡ್ಡಿವೆ. ಹೀಗಾಗಿ ಇವೆಲ್ಲವನ್ನು ಯಶಸ್ವಿಯಾಗಿ ನಿಭಾಯಿಸಲು ಅರಬ್ ದೇಶಗಳಲ್ಲಿ ಇಸ್ರೇಲ್ ಇದ್ದಂತೆ ಇಡೀ ಏಷ್ಯಾ ಪ್ರಾಂತ್ಯದಲ್ಲೂ ನೆಚ್ಚಿನ ಭಂಟನೊಬ್ಬನ ಅಗತ್ಯ ಅಮೆರಿಕಕ್ಕಿದೆ. ಈವರೆಗೆ ಆ ಪಾತ್ರವನ್ನು ಭಾರತದ ಅನುಪಸ್ಥಿತಿಯಲ್ಲಿ ಪಾಕಿಸ್ತಾನ ವಹಿಸುತ್ತಿತ್ತು, ಈಗ ಭಾರತದ ಆಳುವ ವರ್ಗಗಳು ಅಂದರೆ ಟಾಟಾ, ಅಂಬಾನಿಯಂಥವರು ಅಮೆರಿಕದ ಹಡಗೇರಿ ಅಮೆರಿಕ ತಿಂದು ಬಿಟ್ಟ ಎಂಜಲನ್ನು ಕಬಳಿಸುವ ಕನಸು ಕಾಣುತ್ತಿರುವುದರಿಂದ ಭಾರತ ಸರ್ಕಾರ ಆ ಸಾಮಂತನ ಪಾತ್ರವನ್ನು ವಹಿಸಲು ಮುಂದೆ ಬಂದಿದೆ.



ಭಾರತವನ್ನು ಈ ರೀತಿ ಬಳಸಿಕೊಳ್ಳಬೇಕೆಂಬುದು ಅಮೆರಿಕ ಸಾಮ್ರಾಜ್ಯಶಾಹಿಗಳ ಬಹಳ ದಿನದ ವ್ಯೂಹವಾಗಿದ್ದರೂ ಅದು ಈವರೆಗೆ ಕೂಡಿಬಂದಿರಲಿಲ್ಲ. ಭಾರತದ ಆಳುವ ವರ್ಗಗಳು ಅಮೆರಿಕ ಮತ್ತು ರಷ್ಯಾದ ನಡುವೆ ಶೀತಲಸಮರ ನಡೆಯುತ್ತಿದ್ದ ವೇಳೆಯಲ್ಲಿ ಅಲಿಪ್ತ ನೀತಿಯ ಹೆಸರಲ್ಲಿ ಇಬ್ಬರಿಂದಲೂ ದೂರವಿರುತ್ತಾ ಅದರೆ ಅದೇ ಸಮಯದಲ್ಲಿ ಇಬ್ಬರಿಗೂ ನಮ್ಮ ದೇಶವನ್ನು ಲೂಟಿ ಹೊಡೆಯಲು ಅವಕಾಶವನ್ನು ಕಲ್ಪಿಸುತ್ತಾ ದೇಶವನ್ನು ಒತ್ತೆಯಿಟ್ಟು ತಾವು ಕೊಬ್ಬಿದ್ದರು. ಆದರೆ ರಷ್ಯಾ ಕುಸಿದು ಜಗತ್ತಿಗೆ ಅಮೆರಿಕ ಮಾತ್ರ ಸಾಮ್ರಾಟನಾದ ಸ್ಥಿತಿ ಬಂದೊಡನೆ ಭಾರತದ ಆಳುವ ವರ್ಗಗಳು ಅಮೆರಿಕದ ಚೇಲಾಗಿರಿ ಪ್ರಾರಂಭಿಸಿದವು. ಅದೇ ಸಂದರ್ಭದಲ್ಲಿ ಅಮೆರಿಕ ನೇತೃತ್ವದಲ್ಲಿ ಸಾಮ್ರಾಜ್ಯಶಾಹಿ ದೇಶಗಳು ಜಾಗತೀಕರಣ ಹೆಸರಲ್ಲಿ ಭಾರತದಂಥ ದೇಶಗಳ ಮೇಲೆ ಆರ್ಥಿಕ ಆಕ್ರಮಣ ನಡೆಸಿ ಅವುಗಳು ತಮ್ಮ ಮೇಲೆ ಶಾಶ್ವತ ಪರಾವಲಂಬನೆ ಹೊಂದಿರುವಂತೆ ಆರ್ಥಿಕತೆಯನ್ನು ಪುನರ್ ರಚಿಸುತ್ತಾ ಅವುಗಳನ್ನು ನವವಸಾಹತು ಮಾಡಿಕೊಳ್ಳುವ ಹುನ್ನಾರವನ್ನು ಪ್ರಾರಂಭಿಸಿವೆ.

ಈ ಆಕ್ರಮಣಕ್ಕೆ ಬಲಿಯಾದ ದೇಶಗಳ ಆರ್ಥಿಕ ಸಾರ್ವಭೌಮತೆಯನ್ನು ಬಹಳ ಹಿಂದೆಯೇ ಅಮೆರಿಕ ನೇತೃತ್ವದ ಸಾಮ್ರಾಜ್ಯಶಾಹಿ ನಾಶ ಮಾಡಿದೆ. ಇನ್ನೂ ಆರ್ಥಿಕ ಪರಾವಲಂಬನೆಯಿಲ್ಲದ ದೇಶವೊಂದರ ರಾಜಕೀಯ ಸಾರ್ವಭೌಮತೆ ಹೆಚ್ಚೆಂದರೆ ಸಾಮ್ರಾಜ್ಯಶಾಹಿಗಳ ಹುನ್ನಾರದ ವಿರುದ್ಧ ತಮ್ಮ ಭಿನ್ನ ಮತವನ್ನು ದಾಖಲಿಸುವಷ್ಟಿರುತ್ತದೆಯೇ ವಿನಃ ಅದರ ವಿರುದ್ಧ ಸಮರ ಸಾರುವಷ್ಟಲ್ಲ. ಅಷ್ಟು ಮಾತ್ರವಲ್ಲದೆ ಆ ದೇಶದ ಆಳುವ ವರ್ಗಗಳೆ ಈ ಕಾಲಘಟ್ಟದಲ್ಲಿ ಸಾಮ್ರಾಜ್ಯಶಾಹಿಗಳ ದಲ್ಲಾಳಿಗಳಾಗಿ ಬಿಟ್ಟಿರುವಾಗ ಮತ್ತು ಅಲ್ಲಿನ ಶೋಷಿತ ಜನತೆ ರಾಜಕೀಯವಾಗಿ ಸಂಘಟಿತವಾಗಿಲ್ಲದಿರುವಾಗ ಅಂಥ ದೇಶವೊಂದರ ಸಾರ್ವಭೌಮತೆ ಎಷ್ಟಿರಲು ಸಾಧ್ಯ?

ಮಾತ್ರವಲ್ಲದೆ ಆರ್ಥಿಕ ಸಾರ್ವಭೌಮತೆ ಹರಾಜು ಮಾಡುವ ನೀತಿಗಳನ್ನು ತಾವೇ ಮುಂದೆ ನಿಂತು ಜಾರಿಗೆ ತರುತ್ತಿರುವ ಪಕ್ಷಗಳು ಸೈನಿಕ ಮತ್ತು ವ್ಯೂಹತಾಂತ್ರಿಕ ಸಾರ್ವಭೌಮತೆಯ ಬಗ್ಗೆ ಮಾತ್ರ ಹೇಗೆ ರಾಜಿರಹಿತವಾಗಿ ಹೋರಾಡಲು ಸಾಧ್ಯ. ಅದು ಒಂದು ಹಾಸ್ಯಾಸ್ಪದ ವಿಪರ್ಯಾಸವಾಗಿಯಷ್ಟೇ ಕಾಣಲು ಸಾಧ್ಯ. ಸಂಸದೀಯ ಎಡಪಕ್ಷಗಳು ಎದುರಿಸುತ್ತಿರುವುದು ಈ ರಾಜಕೀಯ ಬಿಕ್ಕಟ್ಟನ್ನೇ!!

ಆದೇನೇ ಇದ್ದರೂ ಈ 123 ನೀತಿಯಿಂದ ಅಣ್ವಸ್ತ್ರ ಮತ್ತು ಅಣು ಇಂಧನ ಸರಬರಾಜು ಮಾಡುವ ಅಮೆರಿಕದ ಕಂಪನಿಗಳಿಗೆ ಮತ್ತು ಇಲ್ಲಿ ಅಣುಶಕ್ತಿ ಖಾಸಗೀಕರಣಗೊಂಡರೆ ಆ ಮಾರುಕಟ್ಟೆಯನ್ನು ಕಬಳಿಸಲು ತುದಿಗಾಲಲ್ಲಿ ನಿಂತಿರುವ ಟಾಟಾ, ಅಂಬಾನಿಯಂಥ ದೊಡ್ಡ ದಲ್ಲಾಳಿ ಬಂಡವಾಳಿಗರಿಗೆ ಅನುಕೂಲವಾಗುತ್ತದೆ ಅಷ್ಟೆ. ಏಕೆಂದರೆ ಈ ಅಣುಶಕ್ತಿ ಭಾರತದ ವಿದ್ಯುತ್ ಅಗತ್ಯವನ್ನು ಶಾಶ್ವತವಾಗಿ ನಿವಾರಿಸುವುದಿಲ್ಲ. ಬದಲಿಗೆ ಆದರ ಆಯಸ್ಸು ಮುಗಿದ ನಂತರ ನಮ್ಮ ಆರ್ಥಿಕತೆಗೇ ದೊಡ್ಡ ಸಮಸ್ಯೆಯಾಗುತ್ತವೆ. ಅದೇರೀತಿ ಅಮೆರಿಕದ ಪರೋಕ್ಷ ಬೆಂಬಲದೊಂದಿಗೆ ಭಾರತದ ಅಣ್ವಸ್ತ್ರ ಸಾಮರ್ಥ್ಯ ಹೆಚ್ಚುತ್ತದೆ. ಅದಕ್ಕಾಗಿ ಭಾರತದ ಆರ್ಥಿಕ ಸಂಪನ್ಮೂಲಗಳು ಈ ದೇಶದ ಬಡತನ ನಿವಾರಿಸುವ ಬದಲು ಚೆದರಿಸುವ ಬಾಂಬುಗಳ ತಯಾರಿಕೆಗೆ ವ್ಯಯವಾಗುತ್ತದೆ. ಅಷ್ಟು ಮಾತ್ರವಲ್ಲದೆ ಸುತ್ತಮುತ್ತಲಿನ ದೇಶಗಳ ಮೇಲೆ ಅಮೆರಿಕ ಮಾಡುವ ಸುಲಿಗೆಗೆ ನಮ್ಮ ಸೈನಿಕರ ಪ್ರಾಣ ಪಣವಾಗುತ್ತದೆ.

ಆದರೆ ಇದೂ ಸಹ ಜಾಗತೀಕರಣದಂತೆ ನವ ಸಾಮ್ರಾಜ್ಯಶಾಹಿ ಕುತಂತ್ರಗಳ ಪ್ಯಾಕೇಜುಗಳಲ್ಲಿ ಒಂದು. ದೇಶದ ಸ್ವಾತಂತ್ರ್ಯ ಮತ್ತು ಸಾರ್ವಭೌಮತೆ ಉಳಿಸಬೇಕೆಂದರೆ ಸಾಮ್ರಾಜ್ಯಶಾಹಿಯನ್ನು ಇಡಿಯಾಗಿಯೇ ವಿರೋಧಿಸಬೇಕು. ಹೆಡೆಯ ಜೊತೆ ಸ್ನೇಹವನ್ನು ಇಟ್ಟುಕೊಂಡು ಬಾಲದ ಜೊತೆ ಯುದ್ಧ ಮಾಡಿದರೆ ಪ್ರಯೋಜನವಾದೀತೇ???

■

No Comments

"ನಮ್ಮ ಹೇಳಿಕೆಗಳಲ್ಲೆಲ್ಲೂ ನಾವು ಬೆಂಬಲ ವಾಪ... ಪಡೆಯುತ್ತೇವೆ ಎಂಬ ಪದವನ್ನು ಬಳಸಿಲ್ಲ."

- ಪ್ರಕಾಶ್ ಕಾರಟ...



"ನಂದಗುಡಿ ಎಸ್‌ಇಜೆಡ್‌ಗೆ ಸರ್ಕಾರ ನೀಡಿರುವುದು ತಾತ್ವಿಕ ಒಪ್ಪಿಗೆಯಲ್ಲ. ತತ್ವಭ್ರಷ್ಟ ಒಪ್ಪಿಗೆ!"

- ಮೇಧಾ ಪಾಟ್ಕರ್



"ನಾನೇನೂ ಪಾಂಚಜನ್ಯ ಊದುವುದಿಲ್ಲ... ಕಹಳೆ ಊದುತ್ತೇನೆ."

- ದೇವೇಗೌ...

"ಮುಖ್ಯಮಂತ್ರಿ ಪದವಿಗೇರ... ಪ್ರಾಮಾಣಿಕತೆ ಬೇಕಾಗಿಲ್ಲ."

- ವಾಟಾಳ್ ನಾಗರಾಜ...

ನಂಬಿದ್ರೆನಂಬಿ ಬಿಟ್ರೆಬಿ...



"ರಾಜ್ಯದ ಮುಖ್ಯಮಂತ್ರಿಯಾಗಿ... ಉಳಿದ ಅವಧಿಗೂ ಕುಮಾರಸ್ವಾಮಿಯೇ ಮುಂದುವರೆಯಲಿ..."

-ತೇಜಸ್ವಿನಿ(ಶ್ರೀರಮೇಶ್)ಗೌಡ(!!...

"ನಾನು ಹೋಮ ಹವನ ನಡೆ... ತ್ತಿರುವುದು ಲೋಕ ಕಲ್ಯಾಣಕ್ಕಾಗಿ."

- ದೇವೇಗೌ...

"ಮುಖ್ಯಮಂತ್ರಿ ಕುಮಾರಸ್ವಾಮಿಯವರ ಆಸ್ತಿ ಕೇವ... 9 ಕೋಟಿ ಮಾತ್ರ."

- ಪತ್ರಿಕಾ ವರ...

ಡಬಲ್ ಸ್ಟಾಂಡರ್ಡ್ಸ್

"ಕ್ಷುಲ್ಲಕ ನೆಪವೊಡ್ಡಿ ಅಪರಾಧಿಗಳನ್ನು ಬಿಡುಗ... ಮಾಡುವುದರಿಂದ ನ್ಯಾಯಾಂಗದ ಮೇಲಿನ ವಿಶ್ವಾಸ... ಧಕ್ಕೆ ತಗಲುತ್ತದೆ."

"ಸಂಜಯದತ್‌ಗೆ ಶಿಕ್ಷೆ ಘೋಷಿಸುವ ವೇಳೆಯ... ಅವರಿಗೆ ಶಿಕ್ಷೆಯ ಆದೇಶದ ಪ್ರತಿ ನೀಡಿರಲಿಲ್ಲವಾದ್ದರಿಂ... ಸಂಜಯದತ್ ಅಲ್ಲಿಯತನಕ ಜಾಮೀನು ಪಡೆಯಲ... ಅರ್ಹರು."

-ಒಂದೇ ವಿಷಯದ ಬಗ್ಗೆ ಸುಪ್ರೀಂಕೋರ್ಟು... ನೀಡಿರುವ ವಿಭಿನ್ನ ಆದೇಶಗಳ...

ವಾರದ ಸತ್ಯ

"ನಕ್ಸಲರ ಹೆಸರಿನಲ್ಲಿ ದರೋಡೆ ನಡೆಸಿ ಇದೀ... ಬಂಧನಕ್ಕೊಳಗಾಗಿರುವ ಪ್ರಮುಖ ಆರೋ... ತಲ್ಲೂರಂಗಡಿ ಶಿವರಾಮಾಚಾರಿ ಬಿಜೆಪಿ ಶಾಸಕ ಆರ... ಜ್ಞಾನೇಂದ್ರನ ಬಲಗೈ ಬಂಟನಾಗಿದ್ದಾನೆ."

- ಮಣಿ ಹೆಗಡೆ, ಜೆಡಿಎಸ್ ಪ್ರಧಾನ ಕಾರ್ಯದರ್ಶಿ...

ಸಂಗತಿ ಒಂದೇ, ಸತ್ಯಗಳು ಎರಡು!

"123 ಅಣುಬಂಧ ಒಪ್ಪಂದದಿಂದ ನಮ್ಮ ಮತ... ಅಮೆರಿಕದ ಸಂಬಂಧಗಳು ಪರಿವರ್ತನೆಗೊಳ್ಳುತ್ತ... ಇವು ಇನ್ನಿತರ ವಿದ್ಯಮಾನಗಳಿಗೂ ದಾರಿ ಮಾಡಿಕೊ... ಲಿವೆ. ಆದರೆ ಅದರರ್ಥ ನಾವು ಅಮೆರಿಕದ ಯಾ... ಮಾನ್ಯಕ್ಕೆ ಒಳಪಡುತ್ತೇವೆಂದೇನೂ ಅಲ್ಲ."

- ಭಾರತದ ಪ್ರಧಾನಿಯ ಸಲಹೆಗಾರ ನಾರಾಯಣನ...

"ವಾಸ್ತವವಾಗಿ ಈ ಒಪ್ಪಂದದಿಂದ ಭಾರತವು ಅಮೆರಿ... ದೊಡನೆ ಇನ್ನಷ್ಟು ನಿಕಟವಾದ ಸೈನಿಕ ಸಂಬಂಧವನ... ಸಾಧಿಸುತ್ತದೆ. ಇನ್ನಷ್ಟು ಜಂಟಿ ಸೈನಿಕ ಕವಾಯತು... ತರಬೇತಿ ಮತ್ತು ಶಸ್ತ್ರಾಸ್ತ್ರಗಳ ಮಾರಾಟಗಳು ನಡೆಯಲಿ... ಮಾತ್ರವಲ್ಲ, ಭಾರತ ಮತ್ತು ಅಮೆರಿಕದ ನಡುವೆ ದೀರ್ಘ... ಕಾಲೀನ ವ್ಯೂಹತಾಂತ್ರಿಕ ಮೈತ್ರಿಯೂ ಸಂಭವಿಸಲಿದೆ."

- ಅಮೆರಿಕದ ಕಾರ್ಯದರ್ಶಿ ನಿಕೊಲಸ್ ಬರ್ನ್ಸ್...

ವಾರದ ವಿವೇಕ

ಬೇಕಿರುವುದು ರಾಮಸೇತು ಅಲ್ಲ- ಗ್ರಾಮಸೇತು

"ದೇಶಾದ್ಯಂತ ಶ್ರೀರಾಮಸೇತುಗಾಗಿ ಹೋರಾ... ನಡೆಯುತ್ತಿದೆ. ವಿಚಿತ್ರವೆಂದರೆ ಇಂದಿಗೂ ನಮ್ಮ ದೇಶ... ಸಹಸ್ರಾರು ಹಳ್ಳಿಗಳು ಮಾಮೂಲಿ ಸೇತುವೆಯ ಭಾಗ್ಯವ... ಕಂಡಿಲ್ಲ. ಲಕ್ಷಾಂತರ ಹಳ್ಳಿಗಳು ರಸ್ತೆ ಸೇತುವೆಗಳಿಲ್ಲ... ನಾಗರಿಕ ಸಂಪರ್ಕದಿಂದ ವಂಚಿತವಾಗಿವೆ. ಆದ... ಇವುಗಳಿಗಾಗಿ ಇಷ್ಟರವರೆಗೆ ಯಾರೂ ಹೋರಾಡಿದವ... ಆದರೆ ಆಧಾರ ಸಾಕ್ಷಿಗಳಿಲ್ಲದ ಪುರಾಣದ ಸೇತುವ... ಹೋರಾಟ ನಡೆಸಲಾಗುತ್ತಿದೆ."

- ರವಿಕಾಂತ ಬ...

ವಾರ್ತಾ ಭಾರತಿಯ ಓದುಗರ ಅಂಕಣದ ಪತ್ರದ...

ಭಾರತ ಇವತ್ತು ತನ್ನ ಹಳ್ಳಿಗಳಲ್ಲಿ ಸಾಯುತ್ತಿದೆ ಎಂದು ಖ್ಯಾತ ಲೇಖಕಿ ಅರುಂಧತಿ ರಾಯ್‌ರವರು ಹೇಳಿರುವ ಹಿನ್ನಲೆಯಲ್ಲಿ ಗ್ರಾಮೀಣ ಬದುಕನ್ನು ಕುರಿತಂತೆ ಹೇಳಿಕೆಗಳನ್ನು ನೀಡುತ್ತಿದ್ದೇವೆ.

ಸಾಮಾನ್ಯ ದಶರತನ ಅಸಮಾನ್ಯ ಸಾಧನೆ ನೆನೆದು

"ಹಿಂದಿ ಚೀನಿ ಭಾಯ್ ಭಾಯ್" ಎಂದು ಜಪಿಸುತ್ತಿದ್ದ ಅಂದಿನ ಪ್ರಧಾನಿ ಜವಾಹರಲಾಲ್ ನೆಹರುಗೆ ಆಘಾತವಾಗಿತ್ತು. ಚೈನಾದ ಸೈನಿಕರು ಭಾರತದ ಮೇಲೆ ದಾಳಿ ಇಟ್ಟು ಲಡಾಕ್ ಸೇರಿದಂತೆ ಇತರೆ ಪ್ರದೇಶಗಳನ್ನು ವಶಪಡಿಸಿಕೊಂಡಿದ್ದರು. ಸಾವಿರಾರು ಭಾರತದ ಸೈನಿಕರು ಸತ್ತರು, ಯುದ್ಧ ಕೈದಿಗಳಾದರು, ನಾಪತ್ತೆಯಾದರು.

ಆದರೆ ದಶರತ್ ಮಾಂಜ್ಹಿ ಬದುಕಿನಲ್ಲಿ ಬೇರೆಯದೇ ಆದ ದುರಂತ ಸಂಭವಿಸಿತ್ತು. ಅನಾರೋಗ್ಯದಿಂದ ತತ್ತರಿಸುತ್ತಿದ್ದ ತನ್ನ ಪತ್ನಿ ಫಾಗುಣಿಯನ್ನು ಆತ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದಾಗಲೇ ಆಕೆ ಸಾವನ್ನಪ್ಪಿದ್ದಳು. ತನ್ನ ಹಳ್ಳಿ ಗೆಲೋರ್‌ನಿಂದ ಹತ್ತಿರದ ಪಟ್ಟಣ ವಾಜಿರ್‌ಗಂಜ್ ಬಹಳ ದೂರವೇನಿರಲಿಲ್ಲ. ಹಕ್ಕಿಯಂತೆ ಹಾರಿದರೆ ಕೇವಲ ಆರು ಕಿಲೋಮೀಟರ್‌ಗಳು. ಆದರೆ ಗೆಲೋರ್ ಮತ್ತು ವಾಜಿರ್‌ಗಂಜ್ ನಡುವೆ ಗೆಲೋರ್ ಘಟ್ಟ ಎಂಬ ಬೆಟ್ಟದ ಸಾಲಿತ್ತು. ಎಲ್ಲರೂ ಅದನ್ನು ಸುತ್ತಿ ಬಳಸಿ ವಾಜಿರ್‌ಗಂಜ್ ತಲುಪಬೇಕಾದರೆ 50 ಕಿಲೋಮೀಟರ್ ಕ್ರಮಿಸಬೇಕಾಗಿತ್ತು.

ನೆಹರು ಪ್ರಕಾರ ತನಗಾದ ಮುಖಭಂಗಕ್ಕೆ, ಸ್ವತಂತ್ರ ಭಾರತಕ್ಕಾದ ಅವಮಾನಕ್ಕೆ ಚೀನಿಯರೇ ಕಾರಣರಾಗಿದ್ದರೆ, ದಶರತ್‌ನ ಜೀವದಲ್ಲಿ ಆ ಬಂಡೆಯೇ ತನ್ನ ಹೆಂಡತಿಯ ಸಾವಿಗೆ, ತನ್ನ ದುಃಖಕ್ಕೆ ಕಾರಣವಾಗಿತ್ತು.

ದೂರದ ದೆಹಲಿಯಲ್ಲಿ ನೆಹರು ಕೊನೆಯುಸಿರೆಳೆದರು. ಲಾಲ್‌ಬಹದ್ದೂರ್ ಶಾಸ್ತ್ರಿ ಪ್ರಧಾನಿಯಾದರು, ಹಿಂದಿ ಹೇರಿಕೆಯ ವಿರುದ್ಧ ತಮಿಳುನಾಡಿನಲ್ಲಿ ಪ್ರತಿಭಟನೆಗಳು ಪ್ರಾರಂಭವಾದವು, ಲೋಹಿಯಾರವರು 'ಗುಂಗಿ ಗುಡಿಯಾ' ಎಂದು ಬಣ್ಣಿಸಿದ್ದ ಇಂದಿರಾ ಗಾಂಧಿ ಪ್ರಧಾನಿ ಪಟ್ಟಕ್ಕೇರಿದರು.

ಇದ್ಯಾವುದೂ ದಶರತ್‌ನ ಬದುಕನ್ನು ತಟ್ಟಲೇ ಇಲ್ಲ. ಅದಕ್ಕೂ, ತನಗೂ ಸಂಬಂಧವೇ ಇಲ್ಲ ಎಂಬಂತಿದ್ದ. ಪ್ರತಿದಿನ ತನ್ನ ಹೆಂಡತಿಯ ಸಾವಿಗೆ ಕಾರಣವಾಗಿದ್ದ ಆ ಬೆಟ್ಟ ಅವನನ್ನು ಅಣಕಿಸುತ್ತಿತ್ತು, ನನಗೆ ನೀನೇನು ಮಾಡಬಲ್ಲೆ ಎಂದು ಸವಾಲು ಹಾಕುತ್ತಿತ್ತು. ದಶರತ್‌ನ ಪುಟ್ಟ ಹಳ್ಳಿಯ ಜನ ವಿಧಿ ಇಲ್ಲದೆ ಆ ಬೆಟ್ಟದ ಸುತ್ತ ಕ್ರಮಿಸುತ್ತಾ ಓಡಾಡುತ್ತಾ ತಮ್ಮ ಜೀವನ ಸಾಗಿಸುತ್ತಿದ್ದರು.

ಆದೊಂದು ದಿನ ದಶರತ್ ಒಂದು ನಿರ್ಧಾರಕ್ಕೆ ಬಂದ. ತನ್ನ ಪ್ರೀತಿಯ ಫಾಗುಣಿಯ ಸಾವಿಗೆ ಕಾರಣವಾಗಿದ್ದು, ತನ್ನ ಹಳ್ಳಿಯ ಜನರ ಅಪಾರ ಶ್ರಮ ಮತ್ತು ಸಮಯವನ್ನು ಪೋಲು ಮಾಡುತ್ತಿದ್ದ ಆ ಬೆಟ್ಟದ ಸವಾಲನ್ನು ಸ್ವೀಕರಿಸಿದ. ಭೂಮಾಲೀಕರ ಜಮೀನುಗಳಲ್ಲಿ ಕೂಲಿಯಾಳಾಗಿ ತನ್ನ ಒಪ್ಪತ್ತಿನ ಊಟಕ್ಕಾಗಿ ದುಡಿಯುತ್ತಿದ್ದ ದಶರತ್ ಆ ದಿನದಿಂದ ಪ್ರತಿ ಮುಂಜಾನೆ ಬೆಟ್ಟವನ್ನೇರುತ್ತಿದ್ದ. ತನ್ನ ಉಳಿ ಮತ್ತು ಸುತ್ತಿಗೆಯಿಂದ ಬೆಟ್ಟವನ್ನು ಕೆತ್ತಲಾರಂಭಿಸಿದ.

ಇವನಿಗೆ ಹುಚ್ಚು ಹಿಡಿದಿದೆ ಎಂದು ಗೆಲೋರ್‌ನ ಜನ ನಕ್ಕರು, ಲೇವಡಿ ಮಾಡಿದರು. ಆದರೆ ದಶರತ್ ತಲೆ ಕೆಡಿಸಿಕೊಳ್ಳಲಿಲ್ಲ. ಪ್ರತಿದಿನ ಬೆಟ್ಟವನ್ನು ಕೆತ್ತುವುದರಲ್ಲೇ ತಲ್ಲೀನನಾದ. ಅತ್ತ ದಶರತ್ ಬೆಟ್ಟವನ್ನು ಪಳಗಿಸುವುದರಲ್ಲಿ ತೊಡಗಿದ್ದರೆ ಇತ್ತ ಭಾರತವನ್ನೇ ಪಳಗಿಸುವಲ್ಲಿ ನೂರಾರು ನಾಯಕರು ತೊಡಗಿದ್ದರು. ಕಾಂಗ್ರೆಸ್ ಪಕ್ಷ ಇಬ್ಭಾಗವಾಯಿತು, ಬ್ಯಾಂಕುಗಳು ರಾಷ್ಟ್ರೀಕೃತಗೊಂಡವು, ಭಾರತದ ನೆರವಿನಿಂದ ಪಾಕಿಸ್ತಾನ ವಿಭಜನೆಗೊಂಡು ಬಾಂಗ್ಲಾದೇಶ ಜನಿಸಿತು, ಪಾಕಿಸ್ತಾನದೊಂದಿಗೆ ಭಾರತ ಮತ್ತೊಂದು ಯುದ್ಧದಲ್ಲಿ ತೊಡಗಿತು. 'ಬಾಬಿ' ಸಿನಿಮಾದಲ್ಲಿ ಬಿಕಿನಿ ತೊಟ್ಟ ಡಿಂಪಲ್ ಕಪಾಡಿಯಾ ಬಗ್ಗೆ ಯುವಕರು ಹುಚ್ಚೆದ್ದರು....

ದಶರತ್ ಬೆಟ್ಟವನ್ನು ಪ್ರತಿದಿನ ಕೆತ್ತುತ್ತಲೇ ಹೋದ...

ಭಾರತ ಪ್ರಥಮ ಬಾರಿಗೆ ಅಣುಬಾಂಬ್ ಅನ್ನು ಸ್ಫೋಟಿಸಿತು, ತನ್ನ ವಿರುದ್ಧ ಜಯಪ್ರಕಾಶ್ ನಾರಾಯಣ ಮತ್ತು ಇತರರು ಬಂಡಾಯ ಎದ್ದಿದ್ದನ್ನು ಸಹಿಸಲಾರದೆ ಇಂದಿರಾಗಾಂಧಿ ದೇಶದ ಮೇಲೆ ತುರ್ತುಪರಿಸ್ಥಿತಿಯನ್ನು ಹೇರಿದರು. ಕಾಶ್ಮೀರ ಹತ್ತಿ ಉರಿಯಲಾರಂಭಿಸಿತು, ರಾಜಕಾರಣಿಗಳು ಭ್ರಷ್ಟಾಚಾರದಲ್ಲಿ ತೊಡಗಿದರು, ಚುನಾವಣೆಗಳಲ್ಲಿ ಇಂದಿರಾಗಾಂಧಿ ಸೋತು ಮನೆ ಸೇರಿದರು...

ದಶರತ್ ಬೆಟ್ಟವನ್ನು ಇನ್ನೂ ಕೆತ್ತುತ್ತಲೇ ಇದ್ದ....

ಅಲ್ಲೊಂದು ಭೂಕಂಪ, ಇಲ್ಲೊಂದು ನೆರೆ, ಮತ್ತಿನ್ನೆಲ್ಲೋ ಮಾನವ ನಿರ್ಮಿತ ದುರಂತಗಳು ಸಂಭವಿಸಿ ನೂರಾರು, ಸಾವಿರಾರು ಜನ ಸತ್ತರು. ರಾಜಕಾರಣಿಗಳು ಅಧಿಕಾರಕ್ಕಾಗಿ ಕಿತ್ತಾಡಲಾರಂಭಿಸಿದರು. ಇಂದಿರಾ ವಿರೋಧಿ ಬಣದಲ್ಲೇ ಬಿರುಕುಗಳು ಮೂಡಿ ಮೊರಾರ್ಜಿ ದೇಸಾಯಿಯವರನ್ನು ಪ್ರಧಾನಿ ಪದವಿಯಿಂದ ಕೆಳಗಿಳಿಸಿ, ಚರಣ್‌ಸಿಂಗ್ ಆ ಸ್ಥಾನಕ್ಕೆ ಏರಿದರು.

ದಶರತ್ ಕೆತ್ತುತ್ತಿದ್ದ ಬಂಡೆಗಳಲ್ಲೂ ಬಿರುಕುಗಳು ಕಾಣಿಸಿಕೊಳ್ಳಲಾರಂಭಿಸಿದವು. ಆತ ಕೆತ್ತುತ್ತಲೇ ಸಾಗಿದ....

ರೈಲು ದುರಂತಗಳು, ರಸ್ತೆ ಅಪಘಾತಗಳು ಸಂಭವಿಸಿ ಜನರನ್ನು ಬಲಿತೆಗೆದುಕೊಳ್ಳುತ್ತಲೇ ಇದ್ದವು. ಅಸ್ಸಾಮಿನಲ್ಲಿ ಬುಡಕಟ್ಟು ಜನರ ಹೋರಾಟ ಪ್ರಾರಂಭವಾಗಿ ಉಗ್ರರೂಪವನ್ನು ತಾಳಿತು. ಅದೇ ಹೊತ್ತಿಗೆ ಭಿಂದ್ರನ್‌ವಾಲೆ ಎಂಬಾತ ಪಂಜಾಬಿನಲ್ಲಿ ಬೆಂಕಿ ಉಗುಳಲಾರಂಭಿಸಿದ. ಖಾಲಿಸ್ತಾನಕ್ಕಾಗಿನ ಕೂಗು ಜೋರಾಗತೊಡಗಿತು. ಕೊನೆಗೆ ಅದು ಭಿಂದ್ರನ್‌ವಾಲೆಯನ್ನು, ಇಂದಿರಾಗಾಂಧಿಯನ್ನು ಬಲಿ ತೆಗೆದುಕೊಂಡಿತು. ಅಷ್ಟೊತ್ತಿಗೆ ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ಎಂದೇ ಹೆಸರು ಮಾಡಿದ್ದ ಭಾರತದಲ್ಲಿ ಅಧಿಕಾರದ ಸ್ಥಾನ ಎಂದಿಗೂ ವಂಶಪಾರಂಪರ್ಯ ಎಂಬಂತೆ ರಾಜೀವ್‌ಗಾಂಧಿಗೆ ದಯಪಾಲಿಸಲಾಯಿತು.

ಹೀಗೆ ಎರಡು ದಶಕಗಳು ಉರುಳಿದವು. ಸ್ವಾತಂತ್ರ್ಯ ಬಂದಿದ್ದಾಗಿನ ಕನಸುಗಳು ನಿಧಾನವಾಗಿ ಭ್ರಷ್ಟಾಚಾರದಲ್ಲಿ, ಅವಕಾಶವಾದಿತನದಲ್ಲಿ, ಸ್ವಜನಪಕ್ಷಪಾತದಲ್ಲಿ, ಜಾತಿ ರಾಜಕೀಯದಲ್ಲಿ, ಅಧಿಕಾರದ ದುರ್ಬಳಕೆಯಲ್ಲಿ, ಜನರ ಆಶೋತ್ತರಗಳನ್ನು ಹತ್ತಿಕ್ಕುವುದರಲ್ಲಿ ಕಮರತೊಡಗಿದವು.

ಆದರೆ ದೂರದ, ಯಾರ ಗಮನಕ್ಕೂ ಬಾರದ ಗೆಲೋರ್‌ನಲ್ಲಿ ದಶರತ್ ತನ್ನ ಕನಸನ್ನು ನನಸಾಗಿದ್ದ. ಇಪ್ಪತ್ತೆರಡು ವರ್ಷಗಳ ಕಾಲ ಪ್ರತಿದಿನ ಬೆಟ್ಟದ ಬಂಡೆಗಳನ್ನು ಕೆತ್ತಿದ್ದ ಆತ ಕೊನೆಗೂ ಅದನ್ನು ಸೀಳಿ ತನ್ನ ಹಳ್ಳಿಯ ಜನರಿಗೆ ನೆರವಾಗುವ ರಸ್ತೆಯೊಂದನ್ನು ಸೃಷ್ಟಿಸಿದ್ದ. ಯಾರ ನೆರವೂ ಇಲ್ಲದೆ, ಏಕಾಂಗಿಯಾಗಿ ಈತ ಬೆಟ್ಟವನ್ನೇ ಮಣಿಸಿದ್ದ. 360 ಅಡಿ ಉದ್ದದ, 30 ಅಡಿ ಅಗಲದ ರಸ್ತೆ ನಿರ್ಮಿಸಿದ. ಈಗ ಗೆಲೋರ್‌ಗೂ ವಾಜಿರ್‌ಗಂಜ್‌ಗೂ ಕೇವಲ ಆರು ಕಿಲೋಮೀಟರ್‌ಗಳ ಅಂತರ. ಎರಡು ದಶಕಗಳ ಹಿಂದೆ ಈತನಿಗೆ ಹುಚ್ಚು ಹಿಡಿದಿದೆ ಎಂದಿದ್ದ ಜನ ಈಗ ಅವನನ್ನು ಕೊಂಡಾಡಲಾರಂಭಿಸಿದರು. ಅಸ್ಪೃಶ್ಯ ಕೆಳಜಾತಿಯಲ್ಲಿ ಜನಿಸಿದ್ದ ದಶರತ್‌ನನ್ನು 'ಬಾಬಾ' ಎಂದು ಕರೆದು ಗೌರವಿಸಲಾರಂಭಿಸಿದರು.

ಆದರೆ ಇದ್ಯಾವುದರಿಂದಲೂ ದಶರತ್‌ನ ಬದುಕು ಬದಲಾಗಲಿಲ್ಲ. ಅದೇ ಬಡತನ; ಆದರೆ ಈಗ ಅದರೊಂದಿಗೆ ವೃದ್ಧಾಪ್ಯದ ಸಮಸ್ಯೆಗಳು. ಹಳ್ಳಿಯ ದೇವಸ್ಥಾನ ನೀಡುತ್ತಿದ್ದ ತೀರ್ಥ ಪ್ರಸಾದದ ಮೇಲೆ ಜೀವಿಸುತ್ತಿದ್ದ. ಆತನ ಏಕೈಕ ಮಗ ಮತ್ತು ಸೊಸೆಗೆ ಭೂಮಾಲೀಕರ ಜಮೀನಿನಲ್ಲಿ ಕೂಲಿ ಕೆಲಸ ಬಿಟ್ಟರೆ ಮತ್ತೊಂದು ಮಾರ್ಗ ಇಲ್ಲ.

ನಿಜವಾಗಲೂ ದಶರತ್‌ನ ಸಾಹಸ ಮೆಚ್ಚುವಂತದ್ದಾಗಿತ್ತು, ಅಲ್ಲಿನ ಜನ ಅದನ್ನು ಮೆಚ್ಚಿದ್ದರು ಕೂಡ. ಆದರೆ ಅದು ಸ್ಥಳೀಯವಾಗಿ ಸುದ್ದಿ ಮಾಡಿತ್ತೇ ಹೊರತು, ಆ ಪ್ರಾಂತ್ಯದ ಹೊರಗಿನ ಜಗತ್ತಿಗೆ ಗೊತ್ತೇ ಆಗಿರಲಿಲ್ಲ. ದಶರತ್ ತನ್ನ ಕೈಲಾಗಿದ್ದನ್ನು ಮಾಡಿದ್ದ. ಆದರೆ ಆತ ಬಗೆದಿದ್ದ ಕಲ್ಲಿನ ಕಚ್ಚಾರಸ್ತೆಯನ್ನು ಪಕ್ಕಾ ರಸ್ತೆಯಾಗಿ ಮಾಡಿಸಿದರೆ ಚೆನ್ನ ಎಂದು ಜನ ಭಾವಿಸಿದರು. ಹೇಗಿದ್ದರೂ ಆಗಿನ ರಾಜ್ಯದ ಮುಖ್ಯಮಂತ್ರಿಯಾಗಿದ್ದ ಲಾಲೂಪ್ರಸಾದ್ ಯಾದವ್ ತಮ್ಮ ಬಿಹಾರಿನ ರಸ್ತೆಗಳನ್ನೆಲ್ಲಾ ಹೇಮಾ ಮಾಲಿನಿಯ ಗಲ್ಲಗಳಷ್ಟೇ ಸೊಗಸಾಗಿಸುತ್ತೇನೆ ಅಂದಿದ್ದರು.



ತನ್ನ ಸಾಧನೆ ಮತ್ತು ತನ್ನ ಜನರ ಬೇಡಿಕೆಯನ್ನು ಹೊತ್ತ ದಶರತ್ ರಾಜಧಾನಿ ಪಾಟ್ನಾಗೆ ಬಂದ. ಇವನ ಮನವಿಯನ್ನು ಕೇಳಿ ಲಾಲೂಪ್ರಸಾದ್ ಯಾದವ್ 'ತಥಾಸ್ತು' ಎಂದರು. ಆದರೆ ಅದನ್ನು ನಿರ್ಮಿಸಬೇಕಿದ್ದ ಅಧಿಕಾರಿಗಳು ತಮ್ಮ ಕುರ್ಚಿ ಬಿಟ್ಟು ಏಳಲಿಲ್ಲ. ಲಾಲೂ ನಂತರ ಬಂದ ರಾಬ್ರಿ ಕೂಡ "ರಸ್ತೆ ಮಾಡಿಸಿ" ಅಂದರು. ಆಗಲೂ ಅಧಿಕಾರಿಗಳು ಏನನ್ನೂ ಮಾಡಲಿಲ್ಲ. ದಶರತ್ ಗೆಲೋರ್ ಜನರ ಕಣ್ಣಲ್ಲಿ ಹೀರೋ, ಆದರೆ ರಾಜ್ಯ ಸರ್ಕಾರದ ಕಣ್ಣಲ್ಲಿ ಜೀರೋ. ಆತನಿಗೆಂದು, ಆತನ ಹಳ್ಳಿಯವರಿಗೆಂದು ರಸ್ತೆ ಮಾಡಿದರೆ ತಮಗೇನು ಬಂತು ಅದರಿಂದ ಎಂಬ ಲೆಕ್ಕಾಚಾರ ಭ್ರಷ್ಟ ಅಧಿಕಾರಿಗಳದ್ದು. ರಾಬ್ರಿ ಹೋಗಿ ನಿತೀಶ್‌ಕುಮಾರ್ ಮುಖ್ಯಮಂತ್ರಿಯಾದರು. ಇವರ ಸರ್ಕಾರದಿಂದಲಾದರೂ ದಶರತ್‌ನ ಕಲ್ಲುಬಂಡೆಯ ಕಚ್ಚಾರಸ್ತೆ ಡಾಂಬರೀಕರಣಗೊಂಡು ಪಕ್ಕಾ ರಸ್ತೆಯಾಗುತ್ತದೇನೋ ಎಂಬ ಆಶೆ ಜನರಲ್ಲಿ ಮತ್ತೆ ಚಿಗುರೊಡೆಯಿತು.

ಜನರ ಒತ್ತಡದಿಂದಾಗಿ ದಶರತ್ ಮತ್ತೆ ಪಾಟ್ನಾದತ್ತ ಕಾಲು ಬೆಳೆಸಿದ. ಆದರೆ ಮುಖ್ಯಮಂತ್ರಿ ನಿತೀಶ್‌ಕುಮಾರರ ಸಿಬ್ಬಂದಿ ಅವನಿಗೆ ಬಾಗಿಲು ತೆಗೆಯಲಿಲ್ಲ. ಆದರೆ ಅದೃಷ್ಟವಶಾತ್ ಅಂದೇ ಅವರು ತಮ್ಮ ಮನೆಯಲ್ಲಿ 'ಜನತಾ ದರ್ಶನ' ನೀಡುತ್ತಿದ್ದರು. ಅಲ್ಲಿಗೇ ದಶರತ್ ಹೋದ. ಅವನನ್ನು ಕಂಡಕೂಡಲೇ ನಿತೀಶ್‌ಕುಮಾರ್ ಎದ್ದು ತಮ್ಮ ಮುಖ್ಯಮಂತ್ರಿ ಕುರ್ಚಿಯಲ್ಲೇ ಅವನನ್ನು ಕೂರಿಸಿದರು. ಅವನ ಮನವಿಯನ್ನು ಆಲಿಸಿ ರಸ್ತೆ ಮಾಡಿಸುವ ಆಶ್ವಾಸನೆ ನೀಡಿದರು ಮಾತ್ರವಲ್ಲ, ಗೆಲೋರ್‌ನಲ್ಲಿ ದಶರತ್‌ನಿಗೆ ಒಂದು ಸೈಟು ನೀಡುವುದಾಗಿಯೂ ಹೇಳಿದರು. ಆಗ ದಶರತ್ ಹೇಳಿದ್ದೇನು ಗೊತ್ತಾ? "ನನಗೆ ಸೈಟು ಬೇಡ. ಆ ಜಾಗದಲ್ಲಿ ನಮ್ಮೂರಿಗೆ ಒಂದು ಆಸ್ಪತ್ರೆ ನಿರ್ಮಿಸಿ ಕೊಡಿ" ಎಂದ. ಅದನ್ನು ಕೇಳಿ ದಂಗಾದ ನಿತೀಶ್ ಕುಮಾರ್ ಅದಕ್ಕೂ ಸೈ ಅಂದರಲ್ಲದೆ, "ಆ ರಸ್ತೆಗೆ ಮತ್ತು ಆಸ್ಪತ್ರೆಗೆ ನಿನ್ನ ಹೆಸರನ್ನೇ ಇಡುತ್ತೇವೆ. ಅವೆರಡರ ಶಿಲಾನ್ಯಾಸವನ್ನೂ ನೀನೇ ಮಾಡಬೇಕು. ನಾನು ಆ ಸಮಾರಂಭಕ್ಕೆ ಸಾಮಾನ್ಯ ಪ್ರಜೆಯಾಗಿ ಬರುತ್ತೇನೆ" ಅಂದರು.



ಕಂಡಹಾಗೆ

ದಶರತ್ ಮತ್ತು ಆತನ ಊರಿನ ಜನರಿಗೆ ಸಂತೋಷ. ಕೊನೆಗೂ ರಸ್ತೆ ಮತ್ತು ಆಸ್ಪತ್ರೆ ತಮ್ಮೂರಿಗೆ ಬರುತ್ತದೆಂದು. ಆದರೆ ಇದೆಲ್ಲ ಸಾಕಾರಗೊಳ್ಳುವುದನ್ನು ದಶರತ್ ಕಣ್ಣಾರೆ ನೋಡಲಾಗಲಿಲ್ಲ. ಅವನ ಪಿತ್ತಕೋಶದಲ್ಲಿ ಕ್ಯಾನ್ಸರ್ ರೋಗ ಕಾಣಿಸಿಕೊಂಡಿತು. ಅದರ ಚಿಕಿತ್ಸೆಗೆಂದು ನಿತೀಶ್‌ಕುಮಾರ್ ದಶರತ್‌ನನ್ನು ದೆಹಲಿಯ ಪ್ರಖ್ಯಾತ ಏಮ್ಸ್ ಆಸ್ಪತ್ರೆಗೆ ಕಳುಹಿಸಿದರು.

ಇಪ್ಪತ್ತೆರಡು ವರ್ಷಗಳ ಕಾಲ ದೇಶ ಒಂದು ಅನಾಹುತದಿಂದ ಇನ್ನೊಂದಕ್ಕೆ ಜಾರುತ್ತಿದ್ದಾಗ, ತನ್ನ ದೈಹಿಕಶ್ರಮದಿಂದಲೇ ತನ್ನ ಪುಟ್ಟ ಊರಿಗೆ ನಿಸ್ವಾರ್ಥ ಸೇವೆ ಸಲ್ಲಿಸಿದ್ದ ದಶರತ್ ತನ್ನ ಹುಟ್ಟೂರಿನಿಂದ ಬಹುದೂರದ ದೆಹಲಿಯಲ್ಲಿ ಮೊನ್ನೆ ಆಗಸ್ಟ್ 17ರಂದು ಕೊನೆಯುಸಿರೆಳೆದ. ಆತನಿಗೆ ಎಲ್ಲಾ ರಾಜ ಮರ್ಯಾದೆಗಳನ್ನು ನೀಡಿ ಅಂತ್ಯ ಸಂಸ್ಕಾರಗಳನ್ನು ಮುಖ್ಯಮಂತ್ರಿಯೇ ನಿಂತು ಮಾಡಿಸಿದರು. ದಶರತ್‌ನನ್ನು ಹಾಡಿ ಹೊಗಳಿದರು....

ಸ್ವಾತಂತ್ರ್ಯ ಬಂದಾಗ ಇದ್ದ ನಿರುದ್ಯೋಗ, ಅನಕ್ಷರತೆ, ಬಡತನ, ಹಸಿವು ಇಂತಹ ಯಾವ ಸಮಸ್ಯೆಗಳನ್ನೂ ಈ ದೇಶ ಕಂಡಿರುವ ಹಲವಾರು ನಾಯಕರಿಂದ ಮತ್ತು ಪಕ್ಷಗಳಿಂದ ನೀಗಿಸಲಾಗಿಲ್ಲ. ಆದರೆ 60 ನೇ ಸ್ವಾತಂತ್ರ್ಯ ಸಂಭ್ರಮವನ್ನು ಅದ್ದೂರಿಯಾಗಿ ಆಚರಿಸುವುದಕ್ಕೆ ಯಾರಲ್ಲೂ ಹಿಂಜರಿಕೆ ಇಲ್ಲ.

ಆದರೆ ಬೆಟ್ಟವನ್ನೇ ಬಗೆದ ದಶರತ್ ಆ ಸ್ವಾತಂತ್ರ್ಯ ಸಂಭ್ರಮದಲ್ಲಿ ಪಾಲುಗೊಳ್ಳಲಿಲ್ಲ. ಸ್ವಾತಂತ್ರ್ಯ ಅಂದರೇನು ಎಂಬುದೂ ಆತನ ಅರಿವಿಗೆ ಬಂದಂತಿರಲಿಲ್ಲ. 1947ರ ಸ್ವಾತಂತ್ರ್ಯ ಈ ದೇಶದ ಇತಿಹಾಸದಲ್ಲಿ ಒಂದು ಮೈಲಿಗಲ್ಲು ನಿಜ. ಆದರೆ ದಶರತ್ ಸೇರಿದಂತೆ ಅಸಂಖ್ಯಾತ ಬಡಜನರ ಬದುಕಿನಲ್ಲಿ ಅದೊಂದು ಶೂನ್ಯ.

ಹೆಂಡತಿಯನ್ನು ಕಳೆದುಕೊಂಡ ನೋವಿನಲ್ಲಿ ದಶರತ್ ಬೆಟ್ಟವನ್ನೇ ಬಗೆದ; ಮಕ್ಕಳಿಲ್ಲದ ಶೋಕವನ್ನು ತುಂಬಲು ತಿಮ್ಮಕ್ಕ ಸಾಲು ಆಲದ ಮರಗಳನ್ನು ನೆಟ್ಟಳು....

"ನಮ್ಮ ತಂದೆಗೆ ಅವಮಾನ ಮಾಡಿದರು" ಎಂದೂ, "ನಮ್ಮ ವಂಶಕ್ಕೆ ಕಳಂಕ ತಾಕಿದೆ" ಎಂದೂ ಆರೋಪಿಸುತ್ತಾ ಸರ್ಕಾರಗಳನ್ನೇ ಉರುಳಿಸುವ ದೇವೇಗೌಡ- ಕುಮಾರಸ್ವಾಮಿಗಳಂತ ಜನರೆಲ್ಲಿ? ದಶರತ್, ತಿಮ್ಮಕ್ಕನಂತಹ ಜನಪರ ಸಾಧಕರೆಲ್ಲಿ? ನಮ್ಮ ತಿಮ್ಮಕ್ಕನ ಸೇವೆಯನ್ನೇ ನೆನಪಿಸಿದ ದಶರತ್‌ನ ಕತೆ ಹೇಳಬೇಕೆನಿಸಿದ್ದರಿಂದ, ಇಂಥವರು ನಮ್ಮ ಯುವ ಜನರಿಗೆ ಆದರ್ಶಗಳಾಗಬೇಕು ಎನಿಸಿದ್ದರಿಂದ ಇಲ್ಲಿ ದಾಖಲಿಸಿದ್ದೇನೆ....

ಮರೆಯುವ ಮುನ್ನ, ಇವತ್ತಿಗೂ ದಶರತ್ ಬಗೆದ ರಸ್ತೆ ಗೆಲೋರ್ ಮತ್ತು ವಾಜಿರ್‌ಗಂಜ್ ಅನ್ನು ಬೆಸೆದಿದೆಯೇ ಹೊರತು ಅಲ್ಲಿ ಇನ್ನೂ ಲಾಲೂ, ನಂತರ ರಾಬ್ರಿ, ಆನಂತರ ನಿತೀಶ್ ಕುಮಾರ್ ಎಂಬ ಮೂರು ಮುಖ್ಯಮಂತ್ರಿಗಳು ಆಶ್ವಾಸನೆ ನೀಡಿದ್ದ ಸರ್ಕಾರಿ ರಸ್ತೆಯ ಕಾಮಗಾರಿ ಪ್ರಾರಂಭವಾಗಿಲ್ಲ, ಅದಿನ್ನೂ ಸರಕಾರಿ ಕಡತಗಳಲ್ಲೇ ಇದೆ....

-ಗೌರಿ ಲಂಕೇಶ್

ವ್ಯಂಗ್ಯ ಗೇಲಿಯ ಮಜಾ

ಬಿಡಿ ಚಿತ್ರಗಳು

ಲಿಂಗದೇವ ವಿವಾದ ಜೋರಾಗಿದ್ದಾಗ ನಾನಾ ರೀತಿಯ ಪ್ರತಿಕ್ರಿಯೆಗಳು ಬಂದವಲ್ಲ, ಹಾಗೇನೆ ಚಂಪಾದಕತ್ವದ ಫೆಬ್ರವರಿ ಸಂಚಿಕೆಯ ಸಂಕ್ರಮಣದಲ್ಲೂ ಚಂಪಾ ತಮ್ಮ ಕಾಲಂನಲ್ಲಿ ಒಂದಿಷ್ಟು ತಮಾಷೆ, ಗೇಲಿ ಹಾಗೂ ಗಂಭೀರ ವಿಶ್ಲೇಷಣೆಯ ದೀರ್ಘ ಲೇಖನ ಬರೆದಿದ್ದರು.

ಅದರಲ್ಲಿ ಬಹಳ ಮೋಜೆನ್ನಿಸುವ ಮುಟ್ಟುಗೋಲು ವಾದಿಗಳನ್ನು ಗೇಲಿ ಮಾಡುವ spontaneous ಆಧುನಿಕ ವಚನ ಹೀಗಿತ್ತು,

ಎನ್ನ ತಾಯಿ ಮಾತೆ ಮಾದೇವಿ
ಎನ್ನ ತಂದೆ ಭೀಮಣ್ಣ ಖಂಡ್ರೆ
ಆಹಾ! ಎಂಥ ಅಪರೂಪದ ಜೋಡಿ ನೋಡಿರಯ್ಯ,
ಕರ್ನಾಟಕದ ಮೈತ್ರಿ ಸರ್ಕಾರದಂತಾಗಿರುವೆನಯ್ಯ,
ಈ ಮೈತ್ರಿ ಪವಿತ್ರವೋ ಅಪವಿತ್ರವೋ ನೀನೇ ಹೇಳಬೇಕಯ್ಯ,
ಬಾಳೇಹಣ್ಣೂರಿನ ರಂಭಾ-ಪುರಿ ಪಂಚಪೀಟೇಶ್ವರಾ!

ಈ ಬರಹ ಚಂಪಾರ ವಿಶಿಷ್ಟ ಗುಣ ಇದೆಯಲ್ಲ "ಸಖತ್ತಾಗಿ ವ್ಯಂಗ್ಯ ಮಾಡುವುದು" ಅದಿನ್ನೂ ಹರಿತವಾಗೇ ಇದೆ ಎಂದು ತೋರಿಸುತ್ತದೆ.

* * * * * * * *

ಖೇಣಿ-ಕಾಸಿಗೆ ತಕ್ಕ ಕಜ್ಜಾಯ

ನೈಸ್ ಕಂಪನಿಯ ಅಶೋಕ್ ಖೇಣಿ ವಿಪರೀತ ಮಾತಿನ ಮನುಷ್ಯ. ಯಾರ ಹತ್ತಿರ ಏನು ಮಾತಾಡಬೇಕು, ಆಡಬಾರದೆಂಬ ಪರಿಜ್ಞಾನವೂ ಈತನಿಗಿಲ್ಲ ಅಂತ ಬಲ್ಲವರ ಅಂಬೋಣ.

ಮೊನ್ನೆ ಏನಾಗಿದೆಯೆಂದರೆ ಡಿ.ಕೆ. ಶಿವಕುಮಾರ್ ಏನೋ ಕಾರಣಕ್ಕೆ ಖೇಣಿ ಆಫೀಸಿಗೆ ಬಂದರಂತೆ.

ಅಲ್ಲಿ ನೋಡಿದರೆ ಕಚೇರಿ ಗೋಡೆ ಮೇಲೆಲ್ಲಾ ಈ ಖೇಣಿ ಚಕ್ರವರ್ತಿ ಥರ ವೇಷಭೂಷಣ ಧರಿಸಿರುವ ಆಳೆತ್ತರದ ಫೋಟೋಗಳು ನೇತಾಡುತ್ತಿವೆ.


ಡಿಕೆಗೆ ಆಶ್ಚರ್ಯವಾಗಿ "ಇದೆಲ್ಲಾ ಏನ್ರಿ ಮಿಸ್ಟರ್ ಖೇಣಿ" ಅಂತ ಕೇಳಿದರೆ "ನಾನು..... ಸಿನಿಮಾದಲ್ಲಿ ಒಂದು ಪಾತ್ರ ಮಾಡಿದ್ದೀನಿ. ಆವಾಗ ಇದೇ ಡ್ರೆಸ್ ಹಾಕಿದ್ದೆ" ಅಂದನಂತೆ ಈ ಯದುವಟ್ಟು.

ಖೇಣಿ ತಿಕ್ಕಲುತನಗಳೆಲ್ಲಾ ಬರೀ ಇಂಥದ್ದೆ. ಇನ್ನೊಂದು ತಮಾಷೆ ಹೇಳಬೇಕೆಂದರೆ ಇತ್ತೀಚೆಗೆ ವ್ಯಂಗ್ಯಚಿತ್ರಕಾರರ ಸಂಘಕ್ಕೆ ಇದೇ ಖೇಣಿ ಅಧ್ಯಕ್ಷರಾಗಿ ಆಯ್ಕೆಯಾದರಲ್ಲ, ಆಗ ಯಾರೋ "ಖೇಣಿಗೂ ವ್ಯಂಗ್ಯ ಚಿತ್ರಕಾರರಿಗೂ ಏನ್ರೀ ಸಂಬಂಧ, ಆತ ಕಾರ್ಟೂನಿಸ್ಟಾ?" ಅಂತ ಕೇಳಿದರಂತೆ. ಆಗ ಕಾರ್ಟೂನಿಸ್ಟ್ ಒಬ್ಬ "ಇನ್ನೇನಿರತ್ತೆ ಸಾರ್, ಆ ಖೇಣಿನೇ ಒಂದು ವ್ಯಂಗ್ಯಚಿತ್ರದ ಥರ ಇದ್ದಾನೆ. ನಮಗೆ ಅಷ್ಟೇ ಸಾಕು ಬಿಡಿ" ಎನ್ನಬೇಕೆ?

-ಈಶ

ನಗರವಾಸಿಗಳಿಗೆ ಭೋಗ ಗೊತ್ತು, ಹಳ್ಳಿ ಜನರಿಗೆ ಸಂತೋಷ ಗೊತ್ತು - ಮಿನ್ನ ಥಾಮಸ್ ಆಂಟ್ರಿಮ್

ಮಂತ್ರಿ ಕಟ್ಟಾ ಭಾರೀ ಬಂಗಲೆಗೆ ಇಟ್ಟ!



ಕರ್ನಾಟಕದ ಯಾವೊಬ್ಬ ರಾಜಕಾರಣಿಯೂ ಇಂಥಾದ್ದೊಂದು ಐಷಾರಾಮಿ ಬಂಗಲೆ ಕಟ್ಟಿರಲಿಕ್ಕಿಲ್ಲ. ಪಳಪಳನೇ ಮಿಂಚುವ ವೆರಾಂಡಕ್ಕೆ ಇಟಲಿಯಿಂದ ಆಮದಾದ ಅಮೃತ ಶಿಲೆಯನ್ನೇ ಮೆತ್ತಿದ್ದಾರೆ. ಪ್ರವೇಶದ್ವಾರಕ್ಕೆ ಮಹಾರಾಜರ ಕಾಲದ ಶಿಲ್ಪಸ್ತಂಭಗಳನ್ನು ಜೋಡಿಸಿದ್ದಾರೆ. ಮಿರಮಿರನೆ ಮಿಂಚುವ ಶಿಲಾಹಾಸು. ಮೇಲೆ ನೋಡಿದರೆ ಮೈಸೂರು ಅರಸರ ಮನೆಯನ್ನೇ ಹೋಲುವ ದೀಪದ ಗೊಂಚಲು.... ಇನ್ನೂ ಬೆಡ್‌ರೂಮ್ ಅಕ್ಷರಶಃ 'ಪ್ರೇಮಲೋಕ'ದ ಸಿನಿಮಾ ಸೆಟ್ಟು!

■ ರಾ. ಸೋಮನಾಥ್

ಭಾರೀ ಕೈಗಾರಿಕಾ ಮಂತ್ರಿ ಕಟ್ಟಾನಾಯ್ಡು ಉರ್ಫ್ ಕಟ್ಟಾ ಸುಬ್ರಹ್ಮಣ್ಯಂ ನಾಯ್ಡು ಅಲಿಯಾಸ್ ಮಕ್ಮಲ್ ಟೋಪಿವಾಲಾ ಮನೆ ಕಟ್ಟಿಸಿದ್ದಾನೆ!

ಮಂತ್ರಿಯೊಬ್ಬ ಮನೆ ಕಟ್ಟಿಸುವುದರಲ್ಲೇನು ವಿಶೇಷ ಅಂತೀರಾ? ಹಕೀಕತ್ತು ನಿಗೂಢವಾಗಿದೆ!

ಯಾರಿಗೂ ಕೇಳದೆ, ಯಾರನ್ನೂ ಕರೆಯದೇ; ರಾತ್ರೋರಾತ್ರಿ ಕದ್ದುಮುಚ್ಚಿ ಗೃಹಪ್ರವೇಶ ಶಾಸ್ತ್ರ ಮುಗಿಸುವ ಹರಕತ್ತು ಮತ್ತು ಹಿಕಮತ್ತು ಎದುರಾಗುವುದು ಒಂದೋ ಸ್ಮಗ್ಲರ್‌ಗೆ, ಅದು ಬಿಟ್ಟರೆ ಭೂಗತ ರೌಡಿಗೆ ತಾನೆ?

ಏಕೆ ಕಟ್ಟಾ ತನ್ನ ಸದಾಶಿವನಗರದ ಬಂಗಲೆಯ ಗೃಹಪ್ರವೇಶಕ್ಕೆ ಮುಖ್ಯಮಂತ್ರಿಯನ್ನು ಕರೆಯಲಿಲ್ಲ? ತನ್ನದೇ ಬಜೆಪಿ ಪಕ್ಷದ ನಾಯಕರನ್ನೂ ಕರೆಯದೆ, ಓಟು ಕೊಟ್ಟು ಗೆಲ್ಲಿಸಿದ ಯಾರಿಗೂ ಹೇಳದೆ ಗಪ್‌ಚುಪ್ಪಾಗಿ ಬಂಗಲೆಯೆಬ್ಬಿಸಿ ಅದರ ಗೃಹಪ್ರವೇಶ ಶಾಸ್ತ್ರವನ್ನೂ ಮುಗಿಸಿದ ಭಾರೀ ಕೈಗಾರಿಕಾ ಮಂತ್ರಿಯ ದರ್ದು ಅದೇನಿತ್ತೋ ಯಾರಿಗೆ ಗೊತ್ತು?

ಬಂಗಲೇ ಭೋ ಪಸಂದಾಗಿದೆ. ಬೆಂಗಳೂರು ಸುತ್ತಮುತ್ತಲ ಬಡ ರೈತರ ಭೂಮಿಯನ್ನೆಲ್ಲ ನಕಲಿ ಐಟಿ ಕಂಪೆನಿಗಳಿಗೆಂದು ಕಿತ್ತುಕೊಳ್ಳುತ್ತಲೇ ಇರುವ ಕೆಐಎಡಿಬಿಯ ಖದೀಮರ ಅಟ್ಟಹಾಸದ ಹಾಗೆ, ಬೀದಿಗೆ ಬಿದ್ದ ಒಕ್ಕಲಿಗರ ಆರ್ತನಾದದ ಹಾಗೆ ಬಂಗಲೆಯ ವೈಭವವೂ ಭೀಕರವಾಗಿದೆ. ಅದರ ಐಸಿರಿ ಏನಂತೀರಿ?

ಅದು ಅಕ್ಷರಶಃ ಪಾಳೇಗಾರನ ಹವೇಲಿಯಂತಿದೆ. ನಂ. 9 ಮತ್ತು 9/1, 6 ನೇ `A' ಕ್ರಾಸ್, 8 ನೇ ಮುಖ್ಯರಸ್ತೆ ಆರ್‌ಎಂವಿ ಎಕ್ಸ್‌ಟೆನ್ಷನ್, ಬೆಂಗಳೂರು 80. ವಿಳಾಸದ ಕಟ್ಟಾ ಬಂಗಲೆ ಬಹುಶಃ ಇಡೀ ಸದಾಶಿವನಗರಕ್ಕೆ ಐಷಾರಾಮಿ ಬಂಗಲೆಯಿರಬೇಕು! ಕೂಗಳತೆಯಲ್ಲೇ ಸ್ಯಾಂಕೀ ಕೆರೆ. 127 x 80 ಅಳತೆಯ ವಿಶಾಲ ಸೈಟಿನಲ್ಲಿ ತಲೆ ಎತ್ತಿದ ಎರಡಂತಸ್ತಿನ ಬಂಗಲೆಯಿಂದ ವಿಧಾನಸೌಧಕ್ಕೆ ಕೇವಲ ಹತ್ತು ನಿಮಿಷದ ಡ್ರೈವ್. ಹಾಲಿ ಮಾರ್ಕೆಟ್ ರೇಟಿನ ಪ್ರಕಾರ ಕೇವಲ ಸೈಟೊಂದೇ 20 ಕೋಟಿ ಬೆಲೆ ಬಾಳುತ್ತದೆ.

ಇನ್ನು ಅದರೊಳಗೆ ಅರಳಿದ ಬಂಗಲೆಯ ಕತೆ ಕೇಳಿ.

ಕರ್ನಾಟಕದ ಯಾವೊಬ್ಬ ರಾಜಕಾರಣಿಯೂ ಇಂಥಾದ್ದೊಂದು ಐಷಾರಾಮಿ ಬಂಗಲೆ ಕಟ್ಟಿರಲಿಕ್ಕಿಲ್ಲ, ಪಳಪಳನೇ ಮಿಂಚುವ ವೆರಾಂಡಕ್ಕೆ ಇಟಲಿಯಿಂದ ಆಮದಾದ ಅಮೃತ ಶಿಲೆಯನ್ನೇ ಮೆತ್ತಿದ್ದಾರೆ. ನೆಲ ಅಂತಸ್ತು ಪೂರ್ತಿ ಕಾರ್ ಪಾರ್ಕಿಂಗ್ ಮತ್ತು ಸೆಕ್ಯೂರಿಟಿಗೆಂದು



ಸದಾಶಿವನಗರದಲ್ಲಿರುವ ಕಟ್ಟಾ ಬಂಗಲೆ

ಮೀಸಲಾಗಿದೆ. ಪ್ರವೇಶದ್ವಾರಕ್ಕೆ ತಿರುಚನಾಪಳ್ಳಿಯ ಶಿಲ್ಪಿಗಳೇ ನಿಂತು ರಾಜಮಹಾರಾಜರ ಕಾಲದ ಶಿಲ್ಪಸ್ತಂಭಗಳನ್ನು ಜೋಡಿಸಿದ್ದಾರೆ. ಒಳಗೆ ಅಡಿಯಿಟ್ಟರೆ ದೇವತೆಗಳ ರಾಜ ಇಂದ್ರನ ಅಮರಾವತಿಯೇ ಕಣ್ಣುಕಟ್ಟಿದಂತಾಗುತ್ತದೆ. ಮಿರಮಿರನೆ ಮಿಂಚುವ ಶಿಲಾಹಾಸು. ಗೋಡೆಗೂ ಇಟಲಿಯ ಗ್ರಾನೈಟು. ಮೇಲೆ ನೋಡಿದರೆ ಮೈಸೂರು ಅರಸರ ಮನೆಯನ್ನೇ ಹೋಲುವ ದೀಪದ ಗೊಂಚಲು, ಅಲ್ಲಿಂದ ಮಹಡಿಗೆ ಮೆಟ್ಟಿಲುಗಳ ಸುತ್ತ ಮರಗೆತ್ತನೆಯ ವಿಶಿಷ್ಟ ಹಿಡಿಕೆಯ ಸಾಲುಸಾಲು. ಇನ್ನೂ ಬೆಡ್‌ರೂಮ್ ಅಕ್ಷರಶಃ 'ಪ್ರೇಮಲೋಕ'ದ ಸಿನಿಮಾ ಸೆಟ್ಟು!


ಹಾಗಂತ ಬಂಗಲೆ ನಿಗೂಢವಾಗೇನೂ ಇಲ್ಲ, ಮನೆಯ ಕಾಂಪೌಂಡಿನ ಮೇಲೆ ಕಟ್ಟಾ ಸುಬ್ರಹ್ಮಣ್ಯಂ ನಾಯ್ಡು ಅಂತಲೇ ಅಚ್ಚ ಕನ್ನಡದಲ್ಲಿ ಬರೆಸಿದ್ದಾರೆ. ಅವರ ಶ್ರೀಮತಿ ಕೆ. ಸೌಭಾಗ್ಯರ ಹೆಸರನ್ನೂ ಕೆತ್ತಿಸಿದ್ದಾರೆ. ಕುಲದೇವರ ಹಂಗೋ ಅಥವಾ ಕುಲ ಕಸುಬಿನ ಗುಂಗೋ ಬಂಗಲೆಗೆ ಲಕ್ಷ್ಮಿ ವೆಂಕಟೇಶ್ವರ ನಿಲಯ(!) ಎಂಬ ಧ್ಯೇಯ ಸೂಚಕ ಹೆಸರಿಟ್ಟಿದ್ದಾರೆ.

ಹೀಗಿದ್ದೂ ಕಟ್ಟಾ ರಾತ್ರೋರಾತ್ರಿ ಕದ್ದೂ ಮುಚ್ಚಿ ಗೃಹಪ್ರವೇಶ ಮಾಡಿದ್ದೇಕೆ? ಆಂಧ್ರದ ಖದೀಮ ವೆಂಕಯ್ಯನಾಯ್ಡು ಮತ್ತು ಆತನ ಭೂವಂಚಕ ಪಟಾಲಂ ಹೊರತಾಗಿ ಬೇರೆ ಯಾರನ್ನೂ ಏಕೆ ಕರೆಯಲಿಲ್ಲ?

ಹಕೀಕತ್ತೇನೆಂದರೆ ಎಲ್ಲಿ ತನ್ನ ಅಕ್ರಮ ಸಂಪತ್ತೆಲ್ಲ ಮೀಡಿಯಗಳ ಕಣ್ಣು ಕುಕ್ಕುತ್ತೋ ಎಂಬ ಅಳುಕು ಭೂಕಂಟಕ ಕಟ್ಟಾನನ್ನು ಕಾಡುತ್ತಿದೆ. ಸದರಿ ಬಂಗಲೆಯನ್ನು ಕಟ್ಟಾ ಖರೀದಿಸಿದ್ದು 2005 ರ ಅಕ್ಟೋಬರ್ 10 ರಲ್ಲಿ, ಗಾಂಧಿನಗರದ ಸಬ್ ರಿಜಿಸ್ಟ್ರಾರ್ ಕಚೇರಿಯ ದಸ್ತಾವೇಜು ಸಂಖ್ಯೆ 281/05.06 ರ ಪ್ರಕಾರ ಸನ್‌ಶೈನ್ ಲ್ಯಾಂಡ್ ಅಂಡ್ ಡೆವಲಪರ್ಸ್ ಕಂಪೆನಿಯಿಂದ ಸದರಿ ಆಸ್ತಿಯನ್ನು ಕಟ್ಟಾ ಮತ್ತು ಆತನ ಪತ್ನಿ ಸೌಭಾಗ್ಯ ಸೇರಿಕೊಂಡು ಒಟ್ಟು ಮೂರು ಕೋಟಿ, 73 ಲಕ್ಷದ ತೊಂಬತ್ತೊಂಟು ಸಾವಿರದ ಏಳುನೂರ ಎಂಭತ್ತು ರೂಪಾಯಿ ಕೊಟ್ಟು ಖರೀದಿಸಿದ್ದಾರೆ. 2006 ನೇ ಸಾಲಿಗೆ ಲೋಕಾಯುಕ್ತಕ್ಕೆ ಸಲ್ಲಿಸಿದ ತನ್ನ ಆಸ್ತಿ ವಿವರದಲ್ಲೂ ಕಟ್ಟಾ ಇದೇ ಲೆಕ್ಕ ಕೊಡುತ್ತಾನೆ. ಅಲ್ಲಿಗೆ ಸದಾಶಿವನಗರದಲ್ಲಿ ಚದುರ ಅಡಿ ನೆಲಕ್ಕೆ ಕೇವಲ ಮೂರೂವರೆ ಸಾವಿರ ರೂಪಾಯಿ ಮಾತ್ರದ ರೇಟಿದೆಯೇ?


ಕಟ್ಟಾ ಬಂಗಲೆಯ ಒಟ್ಟು ವಿಸ್ತೀರ್ಣವೇ 10625 ಅಡಿಗಳಷ್ಟಾಗುತ್ತದೆ. ಹಾಲಿ ಮಾರ್ಕೆಟ್ ರೇಟಿನ ಪ್ರಕಾರವೇ ಚದುರ ಅಡಿಗೆ 18 ರಿಂದ 20 ಸಾವಿರ ರೂಪಾಯಿ ಮೌಲ್ಯವಿದೆ. ಕಳ್ಳನಿಗೆ ಕೊಟ್ಟರೂ ಕಟ್ಟಾ ಬಂಗಲೆಗೆ ಕನಿಷ್ಠ ಇಪ್ಪತ್ತು ಕೋಟಿ ಕೊಡುತ್ತಾನೆ. ಅಸಲೀ ಸಂಗತಿಯೇನೆಂದರೆ ಸನ್‌ಶೈನ್ ಲ್ಯಾಂಡ್ ಡೆವಲಪರ್ಸ್ ಮಾಲೀಕ ಎನ್.ಎ. ರಾಮಕೃಷ್ಣರಿಂದ ಚದುರ ಅಡಿಗೆ ಇಪ್ಪತ್ತು ಸಾವಿರದಂತೆ ಒಟ್ಟು 21 ಕೋಟಿ 25 ಲಕ್ಷ ರೂಪಾಯಿಗೆ ಸೈಟು ಕೊಂಡ ಕಟ್ಟಾ ದಾಖಲೆಯಲ್ಲಿ ಕೇವಲ ಸರ್ಕಾರಿ ದರವನ್ನಷ್ಟೇ ನಮೂದಿಸಿ ಉಳಿಕೆ ಹದಿನೇಳು ಕೋಟಿ ರೂಪಾಯಿಯನ್ನು ಬ್ಲಾಕ್ ಮನಿಯಾಗಿ ಪಾವತಿಸಿದ್ದಾನೆ. ಲೋಕಾಯುಕ್ತಕ್ಕೂ ಇದೇ ಚಂದಮಾಮಾ ಕತೆ ಒಪ್ಪಿಸಿದ್ದಾನೆ.

ಹಾಗಾದರೆ ಉಳಿಕೆ 17 ಕೋಟಿ ರೂಪಾಯಿ ಬಂದಿದ್ದೆಲ್ಲಿಂದ? ಈ ಬಗ್ಗೆ ತನಿಖೆ ಮಾಡುವವರ್‍ಯಾರು?



	PARTICULARS		SOURCES	AMOUNT
(a)	INVESTMENTS MADE BY MYSELF IN THE FIRMS			
A	VISHWAPRIYA ENTERPRISES	As Partner	Out of my own Sources	1,981,333.00
B	VIKAS ENTERPRISES	As Partner	Out of my own Source	400,000.00
C	VINDYA HOME & GARDENS	As Partner	Out of my own Sources	406,000.00
D	MONARK DEVELOPERS	As Partner	Out of my own Source	2,138,103.00
E	ANJNEYA ENCLAVE	As Partner	Out of my own Source	1,133,[illegible]
F	VINDHYA HOMES & GARDENS	As Partner	Out of my own Source	2,000,000.00

ಕಟ್ಟಾ ಆಸ್ತಿಯ ಖೊಟ್ಟ ದಾಖಲೆ



Herein after referred to as the CONFIRMING PARTIES (which expression wherever the context so requires or admits shall mean and include their heirs, executors, administrators and assigns) of the SECOND PART.

- IN FAVOUR OF -


1. SMT. K.SOWBHAGYA
W/o Sri.K.Subramanya Naidu,
Aged about 48 years

2. SRI. K.SUBRAMANYA NAIDU
S/o Srinivasalu Naidu
Aged about 53 years

Both residing at: No.187 A/11,
14th Main Road, Vasanthanagar,
Bangalore - 51.

Hereinafter referred to as the 'PURCHASERS' (which expression wherever the context so requires or admits shall mean and include their heirs, executors, administrators and assigns) of the THIRD PARTY.

ಬಂಗಲೆಯ ಸೇಲ್ ಡೀಡ್‌ಗಳು



K. Certified copies of the court proceedings, and the Original Documents of title are delivered to the Purchasers seperately with a list.

SCHEDULE

Property bearing No.46, New Corporation No.9 and 9/1, 6th 'A' Cross, Rajmahal Vilas Extension, Bangalore-80, measuring East to West: 127 ft. and North to South: 85 ft. together with 18 sq., building and bounded as follows:

On the East: By property bearing old No.43
West: By Road
North: By property bearing old No.45 of Mr.Goyal
South: By property bearing old No.47

PARTICULARS OF THE BUILDING CONVEYED UNDER THIS SALE DEED

1. Built up area	:	1800 Sq.ft. (Ground & First Floor)
Ground Floor	:	1000 Sq.ft.
1st Floor	:	800 Sq.ft.
2. Year of construction	:	1998
3. Nature of construction	:	RCC
4. Walls	:	Brick & Mortar
5. Roofing	:	RCC
6. Flooring	:	Red Oxide
7. Wood	:	Jungle Wood & Steel Windows
8. Water & Electricity	:	Available
9. Special features	:	Nil

Market value of the property is Rs.3,40,00,000/-.

For Sun-Shine Land & Development (P) Ltd.
Director/Authorised Signatory

19

For Sun-Shine Land & Development (P) Ltd.
Director/Authorised Signatory


ನೆಲ ಕದಿಯುವುದೇ ಈತನ ಕುಲ ಕಸುಬು

ಲೋಕಾಯುಕ್ತಕ್ಕೆ ಕಟ್ಟಾ ಸಲ್ಲಿಸಿದ 2006 ರ ಆಸ್ತಿ ವಿವರಣೆಯಲ್ಲಿ ಬ್ಯಾಂಕ್ ಸೇರಿದಂತೆ ಒಟ್ಟು 13 ಲಕ್ಷ ರೂಪಾಯಿ ನಗದಿನ ಲೆಕ್ಕ ಕೊಡುತ್ತಾನೆ. ಮೂರು ಕೇಜಿಯಷ್ಟು ಚಿನ್ನದ ಜೊತೆಗೆ ಮೂರು ಲಕ್ಷ ರೂಪಾಯಿ ಬೆಲೆ ಬಾಳುವ ಇತರೇ ಗೃಹೋಪಯೋಗಿ ವಸ್ತುಗಳನ್ನೂ ನಮೂದಿಸುತ್ತಾನೆ. ವಿಶ್ವಪ್ರಿಯ ಎಂಟರ್‌ಪ್ರೈಸಸ್, ವಿಕಾಸ್ ಎಂಟರ್‌ಪ್ರೈಸಸ್, ಮೋನಾರ್ಕ್ ಡೆವಲಪರ್ಸ್ ಮತ್ತು ಆಂಜನೇಯ ಎಂಟರ್‌ಪ್ರೈಸಸ್ ಇತ್ಯಾದಿ ರಿಯಲ್ ಎಸ್ಟೇಟ್ ಫರ್ಮುಗಳಲ್ಲಿ ತನ್ನ ಒಟ್ಟು 63 ಲಕ್ಷ ರೂಪಾಯಿಗಳಷ್ಟು ಬಂಡವಾಳವಿದೆ ಎನ್ನುತ್ತಾನೆ.

ಸಾಲದ್ದಕ್ಕೆ ತನ್ನ ಹುಟ್ಟೂರು ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆ ಗಂಗಾಧರ ನೆಲ್ಲೂರು ಮಂಡಲದ ಪೇಟನಾಸ್ತಾನ ಮತ್ತು ವೀರಕಾ ನೆಲ್ಲೂರು ಗ್ರಾಮಗಳ ಐದೆಕರೆ 71 ಸೆಂಟ್ ಪಿತ್ರಾರ್ಜಿತ ಆಸ್ತಿಯನ್ನೂ, ಜೊತೆಗೆ ಆನೇಕಲ್ ತಾಲ್ಲೂಕು ಗೊಲ್ಲಹಳ್ಳಿಯ ಒಂದೂವರೆ ಲಕ್ಷ ರೂಪಾಯಿ ಜಮೀನನ್ನೂ ಲೋಕಾಯುಕ್ತರಿಗೆ ಲೆಕ್ಕ ತೋರಿಸಿದ್ದಾನೆ. ಇಷ್ಟಲ್ಲದೇ ನಂ. 42 ಕತ್ರಿಗುಪ್ಪೆ ಮೇನ್ ರೋಡಿನ ಆರೂವರೆ ಲಕ್ಷದ ಬಿಲ್ಡಿಂಗು, ಸಿಂಗಸಂದ್ರದ ನಾಲ್ಕುನಾಲು ಕೋಟಿಯ ಶ್ರೀನಿವಾಸ



ಕತ್ರಿಗುಪ್ಪೆಯಲ್ಲಿ ಕಟ್ಟಾ ದೋಚಿದ ಲ್ಯಾಂಡು



ಕಟ್ಟಾ ಮಗ ಜಗದೀಶನ ಅಪಾರ್ಟ್‌ಮೆಂಟ್

ಇಂಡಸ್ಟ್ರಿಯಲ್ ಕಾಂಪ್ಲೆಕ್ಸ್, ಇಟ್ಟಮಡು ಏರಿಯಾದ ಮೂರೂವರೆ ಲಕ್ಷದ ಸೈಟು ಮತ್ತು ಹಾಲಿ ಸದಾಶಿವನಗರ ಬಂಗಲೆಯ ಶೇ. 50 ರ ಪಾರ್ಟ್‌ನರ್‌ಶಿಪ್ ಬಿಟ್ಟರೆ ಕಟ್ಟಾ ಬೇರೇನನ್ನೂ ತನ್ನ ಆಸ್ತಿಪಟ್ಟಿಯಲ್ಲಿ ನಮೂದಿಸಿಲ್ಲ.

ಕಟ್ಟಾ ಮತ್ತು ಸೌಭಾಗ್ಯ ದಂಪತಿಗಳ ಮೂವರು ಮಕ್ಕಳ ಪೈಕಿ ಎರಡನೇ ಮಗಳು ಇಂದ್ರಜಾಳನ್ನು ದಾವಣಗೆರೆಯ ಡಾಕ್ಟರ್‌ಗೂ ಕೊನೇ ಮಗಳು ಜಲಜಾಳನ್ನು ಆಂಧ್ರದ ಮಾಜಿ ತೆಲುಗುದೇಶಂ ಮಂತ್ರಿ ಮುದ್ದುಕೃಷ್ಣ ನಾಯ್ಡು ಮಗನಿಗೂ ಕೊಟ್ಟು ಮದುವೆ ಮುಗಿಸಿದ್ದಾರೆ. ಕಟ್ಟಾ ಲೋಕಾಯುಕ್ತಕ್ಕೆ ಸಲ್ಲಿಸಿದ ಪ್ರಮಾಣ ಪತ್ರದ ಪ್ರಕಾರವೇ ತಿಂಗಳೊಂದಕ್ಕೆ ಬಾಡಿಗೆಯಿಂದಲೇ ಐದು ಲಕ್ಷ ರೂಪಾಯಿ ಆದಾಯವಿದೆ. ವರ್ಷಕ್ಕದು 60 ಲಕ್ಷವಾಯಿತು.

ಇದು ಲೋಕಾಯುಕ್ತಕ್ಕೆ ಕಟ್ಟಾ ಸಲ್ಲಿಸಿದ ಆಸ್ತಿ ವಿವರಣೆಯಾದರೆ ವಾಸ್ತವವೇ ಬೇರೆಯಿದೆ. ಮೂಲತಃ ಆಂಧ್ರದ ಚಿತ್ತೂರಿನಿಂದ ಕಾಲಿಗೊಂದು ಚಪ್ಪಲಿ ಕೂಡ ಇಲ್ಲದೇ ಓಡಿಬಂದವನು ಕಟ್ಟಾ. ಕೆಲದಿನಗಳ ಕಾಲ ಮುಂಬಯಿಯ ಫುಟ್‌ಪಾತಿನಲ್ಲಿ ಟೀ ಮಾರಿಕೊಂಡಿದ್ದ. ಆನಂತರ ಬೆಂಗಳೂರಿಗೆ ವಲಸೆ ಬಂದು ಹನುಮಂತನಗರದ ಪಿಇಎಸ್ ಕಾಲೇಜಿನ ಬಳಿಯ ಕೆಂಪಣ್ಣ ಗರಡಿ ಮನೆ ಪಕ್ಕದ ವಠಾರವೊಂದರಲ್ಲಿ ಬಾಡಿಗೆಗಿದ್ದ. ಅದು ಆರಡಿ ಮೂರಡಿಯ ಹಂದಿಗೂಡಿನಂತಿತ್ತು. ಫುಟ್‌ಪಾತಿನಲ್ಲೇ ಮಲಗುತ್ತಿದ್ದ. ಕ್ರಮೇಣ ಕಕ್ಕಸ್ಸಿಗೆ ಪಾಯ ಅಗೆಸುವ ಮೇಸ್ತ್ರಿಯಾದ. ಖದೀಮ ಕತ್ರಿಗುಪ್ಪೆಯ ಮುನಿರಾಜು ಮತ್ತು ಹಾಲ್ ನಾರಾಯಣನ ಜೊತೆ ಸೇರಿ ಮನೆ ಬ್ರೋಕರ್ ದಂಧೆಗಿಳಿದ.

ಅದೇ ಕಟ್ಟಾನನ್ನು ಬೆಂಗಳೂರಿನ ನಟೋರಿಯಸ್ ಭೂಕಂಟಕನನ್ನಾಗಿ ರೂಪಿಸಿತು. 85 ರ ಸುಮಾರಿಗೆ ಅಬ್ಬಾಯಿನಾಯ್ಡು ಸ್ಟುಡಿಯೋ ಪಕ್ಕದ ಅರಳ್ಳಿಯ ಸರ್ಕಾರಿ ಭೂಮಿಯನ್ನು ದೋಚಿದ. ಪಕ್ಕದ ಅರಣ್ಯ ಇಲಾಖೆ ಜಮೀನಿಗೂ ನಕಲಿ ದಾಖಲೆ ಸೃಷ್ಟಿಸಿ ಮಾರಿಕೊಂಡ. ಕ್ರಮೇಣ ಇಟ್ಟಮಡುವಿನಲ್ಲಿದ್ದ ಬಿಡಿಎ ಆಸ್ತಿಯನ್ನು ನುಂಗಿ ಅಲ್ಲಿ ಅಸಹ್ಯಕಾರಿ ಸ್ಲಂ ಹುಟ್ಟುಹಾಕಿದ. ಅರಳ್ಳಿಯಲ್ಲಿ ತಾನು ಹುಟ್ಟುಹಾಕಿದ ಲೇಔಟಿಗೆ ನಾಯ್ಡು ಲೇಔಟ್ ಅಂತಲೇ ಹೆಸರಿಟ್ಟ. ಕ್ರಮೇಣ ಆರೆಸ್ಸೆಸ್ ಸೇರಿಕೊಂಡು ಬೋಗಸ್ ಸೈಟು ತೋರಿಸಿ ವಂಚಿಸಿದ ದುಡ್ಡನ್ನು ಬಿಜೆಪಿ ಸಮಾರಂಭಗಳಿಗೆಂದು ಖರ್ಚು ಮಾಡುತ್ತಿದ್ದ. ಕೆಂಗೇರಿಯ ಮೈಲಸಂದ್ರದ ದಲಿತರನ್ನು ವಂಚಿಸಿ ಲೇಔಟ್ ಮಾಡಿದ ಬೆಂಗಳೂರು ನಗರದ ಸ್ಲಂ ಮೋರ್ಚಾದ ಅಧ್ಯಕ್ಷನಾದ 94 ರಲ್ಲಿ ಶಿವಾಜಿನಗರದ ಬಿಜೆಪಿಯ ಎಮ್ಮೆಲ್ಲೇ ಕ್ಯಾಂಡಿಡೇಟ್ ಆಗಿ ಸೋತನಾದರೂ 1999 ರಲ್ಲಿ ಅಚಾನಕ್ಕಾಗಿ ಗೆದ್ದುಬಿಟ್ಟ.


ಗ್ರಾಮೀಣ ದೃಶ್ಯಗಳು, ಅಲ್ಲಿನ ಸದ್ದುಗಳು ಆತ್ಮವನ್ನು ಶುದ್ಧೀಕರಿಸುತ್ತವೆ - ವಿಲಿಯಮ್ ಕೌಪರ್

ಮದುವೆಗೆ ಬಂದರೇನೇ ಬೆಳ್ಳಿತಟ್ಟೆ!


ದಿವಾಕರ್‌ಬಾಬು

"ಇಷ್ಟಕ್ಕೂ ತರಾತುರಿಯಲ್ಲಿ ಸದಾಶಿವನಗರದ ಬಂಗಲೆಯನ್ನು ಮುಗಿಸುವ ಅರ್ಜೆಂಟೇನಿತ್ತು? ಎಂಬುದನ್ನೇ ಕೆದಕಿದರೆ ಅದು ಮತ್ತೊಂದು ಇಂಟರೆಸ್ಟಿಂಗ್ ಸ್ಟೋರಿಯಾಗುತ್ತದೆ. ಇದೇ ಆಗಸ್ಟ್ 26 ರಂದು ಕಟ್ಟಾ ಮಗ ಕಟ್ಟಾ ಜಗದೀಶನಿಗೆ ಮದುವೆ ನಿಶ್ಚಯವಾಗಿದೆ. ಮಂತ್ರಿ ಕಟ್ಟಾ ಪಾಲಿಗೆ ಸೊಸೆಯಾಗಿ ಬರುವವಳು ಮಾಜಿ ಮಂತ್ರಿ ಬಳ್ಳಾರಿಯ ಕಾಂಗ್ರೆಸ್ ನಾಯಕ ಎಂ. ದಿವಾಕರ್ ಬಾಬು ಮಗಳು ಮಂಡ್ಲೂರು ಸೌಮ್ಯ!

ದಿವಾಕರ್ ಬಾಬು ಹೇಳಿಕೇಳಿ ಲಿಕ್ಕರ್ ದೊರೆ. ಕಟ್ಟಾ ಭೂಗಳ್ಳ. ಇಬ್ಬರೂ ಬೀಗರಾಗಿಬಿಟ್ಟರೆ ಅದು ಕಾಂಗ್ರೆಸ್-ಬಿಜೆಪಿ ಸಮ್ಮಿಲನವೋ ಅಥವಾ ಎರಡು ಮಾಫಿಯಾಗಳ ಶುಭ(!) ಮಿಲನವೋ ಬಲ್ಲವರ್ಯಾರು?


ಕುಪೇಂದ್ರ ರೆಡ್ಡಿ

ಬಳ್ಳಾರಿಯಲ್ಲಿ ನಡೆಯುವ ಮದುವೆಗೆಂದು ಕಟ್ಟಾ ಕನಿಷ್ಠ ಇಪ್ಪತ್ತು ಐಷಾರಾಮಿ ಬಸ್ಸುಗಳನ್ನು ಬಿಟ್ಟಿದ್ದಾರೆ. ಗಂಡು ಹೆಣ್ಣಿಗೆಂದೇ ಐವತ್ತು ಲಕ್ಷ ರೂಪಾಯಿಯ ಚಿನ್ನಾಭರಣಗಳನ್ನು ಬೆಂಗಳೂರಿನಿಂದ ವಿಶೇಷ ಕ್ವಾಲೀಸ್ ಗಾಡಿಯಲ್ಲಿ ಕಟ್ಟಾ ಸಾಗಿಸಿದ್ದಾನೆ. ಜೊತೆಗೆ ಐನೂರು ಕೇಜಿಯಷ್ಟು ಬೆಳ್ಳಿಯನ್ನೂ ಖರೀದಿಸಿದ್ದಾನೆ. ಏಕೆ ಗೊತ್ತೆ?

ಯಾರ್‍ಯಾರು ಮದುವೆಗೆ ಬರುತ್ತಾರೋ ಅಂಥ ಪ್ರತಿಯೊಬ್ಬರಿಗೂ ಬೆಳ್ಳಿಯ ತಟ್ಟೆ ಮತ್ತು ಬೆಳ್ಳಿ ಲೋಟವನ್ನು ಉಡುಗೊರೆಯಾಗಿ ಕಟ್ಟಾ ದಂಪತಿಗಳು ಕೊಡುತ್ತಾರಂತೆ. ಬೆಂಗಳೂರಿನ ಕತ್ರಿಗುಪ್ಪೆ ಮತ್ತು ಪದ್ಮನಾಭನಗರದಿಂದಲೇ ಕನಿಷ್ಠ ಹದಿನೈದು ಬಸ್ಸುಗಳು ಬಳ್ಳಾರಿಗೆ ಹೊರಟಿವೆ. ಆಗಸ್ಟ್ 28 ಕ್ಕೆ ಬೆಂಗಳೂರಿನ ಪ್ಯಾಲೇಸ್ ಗ್ರೌಂಡಿನಲ್ಲಿ ಅದ್ಧೂರಿಯ ಆರತಕ್ಷತೆಯಿದೆ. ಇದಕ್ಕೆಂದೇ ಕುಖ್ಯಾತ ಭೂಕಂಟರಾದ ಕುಪೇಂದ್ರರೆಡ್ಡಿ ಮತ್ತು ರೆಡ್ಡಿ ವೀರಣ್ಣ ತಲಾ ಒಂದೊಂದು ಕೋಟಿ ಸುರಿಯುತ್ತಿದ್ದಾರೆ. ಪ್ರತಿಫಲವಾಗಿ ಈ ಖದೀಮರಿಬ್ಬರಿಗೂ ಸರ್ಜಾಪುರದ ಎಂಟು ಗ್ರಾಮಗಳ ಸಾವಿರದ ಇನ್ನೂರಕ್ಕೂ ಹೆಚ್ಚು ಎಕರೆಗಳಷ್ಟು ಬಡರೈತರ ಭೂಮಿ ಕಿತ್ತು ಕೊಡಲು ಕಟ್ಟಾ ನೋಟೀಸು ರೆಡಿ ಮಾಡಿದ್ದಾನೆ.

ಮಗನಿಗೆ ಮದುವೆ ಸೋಬಾನ. ರೈತರ ಪಾಲಿಗದು ಮರಣ ಶಾಸನ! ■

ಇನ್ನೂ ಬಂಗಲೆ ಕಟ್ಟಲು, ಪೀಠೋಪಕರಣ ಮತ್ತು ಇಂಟೀರಿಯರ್‌ಗೆಂದು ಕಟ್ಟಾ ಒಂದೂ ಚಿಲ್ಲರೆಯ ಲೆಕ್ಕ ಕೊಟ್ಟಿದ್ದಾನೆ. ಆದರೆ ಬಂಗಲೆಯ ಒಳಾಂಗಣ ವಿನ್ಯಾಸ ಮತ್ತು ಎಲೆಕ್ಟ್ರಾನಿಕ್ ಉಪಕರಣಗಳಿಗೆಂದೇ ಮೂರೂವರೆ ಕೋಟಿ ಖರ್ಚಾಗಿದೆ.

ಅಂದರೆ 25 ಕೋಟಿಯ ಸೊತ್ತಿಗೆ ಕಟ್ಟಾ ಕೇವಲ ಐದು ಕೋಟಿಯ ಲೆಕ್ಕ ತೋರಿಸುತ್ತಿದ್ದಾನೆ!

ತಮಾಷೆಯೆಂದರೆ ಕಟ್ಟಾ ಪತ್ನಿ ಸೌಭಾಗ್ಯ ಸದರಿ ಬಂಗಲೆಗೆ 50 ಪರ್ಸೆಂಟ್ ಬಂಡವಾಳ ಹಾಕಿದ್ದಾರಂತೆ! ಅದೆಲ್ಲವೂ ಆಕೆಯೇ ದುಡಿದ ದುಡ್ಡಂತೆ. ಕಟ್ಟಾ ಪತ್ನಿಯೂ ಉದ್ದಿಮೆ ನಡೆಸುತ್ತಾರಂತೆ. ರಿಯಲ್ ಎಸ್ಟೇಟ್ ದಂಧೆಯಲ್ಲಿದ್ದಾರಂತೆ. ಹಾಗೇ ಸ್ವಂತ ಸಾಮರ್ಥ್ಯದಿಂದ ಸೌಭಾಗ್ಯ ಸಂಪಾದಿಸಿದ ದುಡ್ಡೇ ಬಂಗಲೆಗೆ ಬಳಕೆಯಾಗಿದೆಯಂತೆ!

ಇದನ್ನು ಲೋಕಾಯುಕ್ತ ನಂಬಬೇಕೆ?

ಸದರಿ ಬಂಗಲೆಗೆಂದು ಬೇರೆ ಬೇರೆ ಬ್ಯಾಂಕುಗಳಿಂದ ಕೋಟ್ಯಂತರ ರೂಪಾಯಿ ಸಾಲ ಮಾಡಿದ್ದೇನೆಂದು ಲೆಕ್ಕ ಕೊಟ್ಟ ಕಟ್ಟಾ ಮಂತ್ರಿಯಾದ ಎಂಟೇ ತಿಂಗಳಲ್ಲಿ ಅಷ್ಟೂ ಸಾಲವನ್ನು ತೀರಿಸಿದ್ದಾದರೂ ಹೇಗೆ? ದುಡ್ಡು ಆಕಾಶದಿಂದ ಬತ್ತೆ? ಅಥವಾ ನಕಲಿ ಐಟಿ ಕಂಪೆನಿಗಳ ಹೆಸರಲ್ಲಿ ಬೆಂಗಳೂರು ಸುತ್ತಮುತ್ತಲ ಬಡರೈತರ ಭೂಮಿಯನ್ನು KIADB ಯಿಂದ ನೋಟಿಫೈ ಮಾಡಿಸಿ ದೋಚಿದ ದುಡ್ಡೆ?

ಹೇಳಿಕೇಳಿ ಕಟ್ಟಾ ಹುಟ್ಟಾ ಭೂಕಂಟಕ. ಮಂತ್ರಿಯಾಗುವುದಕ್ಕೆ ಮೊದಲೇ ಆನೇಕಲ್ ತಾಲ್ಲೂಕು ಸರ್ಜಾಪುರ ಹೋಬಳಿಯ ಚಿಕ್ಕನಾಗಮಂಗಲದ ಸ.ನಂ. 177 ಮತ್ತು ಸ.ನಂ. 31 ರಲ್ಲಿ ಸರ್ಕಾರಿ ಖರಾಬು ಜಮೀನನ್ನು ನುಂಗಿದ್ದ. ಪಕ್ಕದಲ್ಲೇ ಸ.ನಂ. 32 ರಲ್ಲಿದ್ದ ಸರ್ಕಾರಿ ಕೆರೆಯನ್ನೂ ಕಬಳಿಸಿದ್ದ. ಈ ಬಗ್ಗೆ ಭೂಕಬಳಿಕೆ ತನಿಖಾ ಸಮಿತಿಯ ಎ.ಟಿ. ರಾಮಸ್ವಾಮಿಯವರಿಗೆ ದೂರು ಕೊಟ್ಟ ರೆವಿನ್ಯೂ ಇನ್ಸ್‌ಪೆಕ್ಟರ್ ಗವಿಸಿದ್ಧಯ್ಯನವರನ್ನು ಮಗ ಕಟ್ಟಾ ಜಗದೀಶನನ್ನೇ ಛೂಬಿಟ್ಟು ಹೊಡೆಸಿದ. ಇದು ಕಟ್ಟಾ ಮಂತ್ರಿಯಾದ ಮೇಲೆ ನಡೆದ ಘಟನೆಯಾದರೂ ಕಟ್ಟಾ ಮಗ ಭೂಗಳ್ಳ ಜಗದೀಶನ ಮೇಲೆ ದಾಖಲಾದ ಭೂಕಬಳಿಕೆ ಮತ್ತು ಗೂಂಡಾಗಿರಿಯ ದೂರು ಮಾತ್ರ ಯಾರ ಗಮನಕ್ಕೂ ಬರಲಿಲ್ಲ, ಸಾಲದ್ದಕ್ಕೆ ಇದೇ ಚಿಕ್ಕನಾಗಮಂಗಲದ ಪಕ್ಕದ ಗೂಳಿಮಂಗಲದ ಸ.ನಂ. 190 ರ ಕಟ್ಟಾ ಗ್ಯಾಂಗ್ ಸರ್ಕಾರಿ ಭೂಮಿ ಕದ್ದಿದೆ. ಚಿಕ್ಕನಾಗಮಂಗಲದೇ ಒಂಭತ್ತು ಎಕರೆ ಸರ್ಕಾರಿ ಭೂಮಿ ಕಬಳಿಸಿದ ಆರೋಪದ ಮೇಲೆ ಕಟ್ಟಾ ಮಗ ಕೇಡಿ ಜಗದೀಶನ ಮೇಲೆ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲೇ ಕೇಸು ದಾಖಲಾಗಿದೆ.

ಅಪ್ಪ ಭಾರೀ ಕೈಗಾರಿಕಾ ಮಂತ್ರಿ. ಮಗನ ಮೇಲೆ ಭೂಗಳ್ಳತನದ ಕ್ರಿಮಿನಲ್ ಕೇಸು!


ಎಂಥಾ ಅದ್ಭುತ ಕಾಂಬಿನೇಷನ್ ಅಲ್ಲವೆ?

ಕ್ಯಾಬಿನೆಟ್ ಮಂತ್ರಿಯೊಬ್ಬ ಕದ್ದುಮುಚ್ಚಿ ಗೃಹ ಪ್ರವೇಶ ನೆರವೇರಿಸಿದ್ದಕ್ಕೆ ಇದಕ್ಕಿಂತ ಬೇರೇನು ಕಾರಣ ತಾನೇ ಇದ್ದೀತು? ಭೂಕಂಟಕನ ಕೈಗೇ KIADB ಸಿಕ್ಕುಬಿಟ್ಟರೆ ಬಡರೈತರ ಗತಿಯೇನು? ಕನ್ನಡ ಪರ, ರೈತ ಸಂಘಟನೆಗಳು ಇನ್ನೂ ಏಕೆ ಸುಮ್ಮನಿವೆಯೋ? ■

ಬೆಂಗಳೂರು ದಕ್ಷಿಣ ತಾಲ್ಲೂಕು ಹೊಂಗಸಂದ್ರದಲ್ಲಿ ಒಂದು ಲೇಔಟ್, ಕೆಂಗೇರಿಯ ಬಳಿ ಮತ್ತೊಂದು ಲೇಔಟ್, ದೇವನಹಳ್ಳಿ ರಸ್ತೆ ಚಿಕ್ಕಜಾಲದ ಬಳಿ ಮೂನ್ನೂರೆಕರೆಯ ಮಗದೊಂದು ಲೇಔಟ್, ಚಾಕ್‌ಲೇಟ್ ಬಾಗಲೂರಿನ ಬಡರೈತರನ್ನು ವಂಚಿಸಿ ನೂರೆಂಬತ್ತು ಎಕರೆಯ ಮಗದೊಂದು ಲೇಔಟ್, ಇವಿಷ್ಟೂ ಕಟ್ಟಾ ನಾಯ್ಡುವಿನ ಕೆಲ ಪ್ರತ್ಯಕ್ಷ ಆಸ್ತಿ ವಿವರಗಳಷ್ಟೇ.


ಎಂ. ಶ್ರೀನಿವಾಸ್

ಈತನ ಮಗ ಕಟ್ಟಾ ಜಗದೀಶ ಕತ್ರಿಗುಪ್ಪೆಯ ಸ.ನಂ. 10 ರಲ್ಲಿ ಸರ್ಕಾರಿ ಆಸ್ತಿಗೆ ನಕಲಿ ದಾಖಲೆ ಸೃಷ್ಟಿಸಿ ಭಯಂಕರ ಅಪಾರ್ಟ್‌ಮೆಂಟ್ ಕಟ್ಟಿಸಿದ್ದಾನೆ. ಸದ್ಯ ಮೂವತ್ತು ಕೋಟಿಗೂ ಅಧಿಕ ಬೆಲೆಬಾಳುವ ಸದರಿ ಅಪಾರ್ಟ್‌ಮೆಂಟ್‌ನ ಗೋಲ್‌ಮಾಲ್ ದಂಧೆಯಲ್ಲಿ ಉತ್ತರಹಳ್ಳಿ ಮಾಜಿ ಶಾಸಕ ಎಂ. ಶ್ರೀನಿವಾಸ್ ಮತ್ತು ಮಾಜಿ ಬಿಜೆಪಿ ನಗರಾಧ್ಯಕ್ಷ ಎಸ್. ಶ್ರೀನಿವಾಸ್ ಕೈಜೋಡಿಸಿದ್ದಕ್ಕೂ ದಾಖಲೆಗಳಿವೆ.


ಸಂತೋಷ್ ಹೆಗ್ಡೆ

ಈತನ ಭಾಮೈದ ಬಾಬುನಾಯ್ಡುವೇ ಮತ್ತೊಬ್ಬ ಕುಖ್ಯಾತ ಭೂಗಳ್ಳ, ಕಗ್ಗಲೀಪುರ ಮತ್ತು ದೊಡ್ಡನಾಗಮಂಗಲದಲ್ಲಿ ಈತ ಸರ್ಕಾರಿ ಜಮೀನು ಕಬಳಿಸಿದ್ದರ ವಿರುದ್ಧ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಕಟ್ಟಾನ ಇನ್ನಿಬ್ಬರು ಸಂಬಂಧಿಗಳಾದ ಕತ್ರಿಗುಪ್ಪೆಯ ಚೌಲ್ತಿ ಬಾಬು ಮತ್ತು ಪ್ರಕಾಶ ಕೂಡ ಭೂಕಬಳಿಕೆ ದಂಧೆಯಲ್ಲಿ ಕಟ್ಟಾನ ಆಧಾರಸ್ತಂಭಗಳೆ. ಇನ್ನು ಭಾರೀ ಕೈಗಾರಿಕಾ ಮಂತ್ರಿಯಾದ ಮೇಲೆ ನಕಲಿ ಐಟಿ ಕಂಪೆನಿಗಳ ಹೆಸರಲ್ಲಿ ಕಟ್ಟಾ ಕೊಳ್ಳೆ ಹೊಡೆದ ಭೂಮಿಯದೇ ಮತ್ತೊಂದು ರೋಚಕ ಕರ್ಮಕಾಂಡವಾಗುತ್ತದೆ. ಭಾರೀ ಆಸ್ತಿಯನ್ನೆಲ್ಲ ಮುಚ್ಚಿಟ್ಟು, ಕೊಳ್ಳೆ ಹೊಡೆದ ಸರ್ಕಾರಿ ಜಮೀನಿನಲ್ಲಿ ಹುಟ್ಟುಹಾಕಿದ ಲೇಔಟುಗಳನ್ನೂ ಅಡಗಿಸಿಟ್ಟು ಪುಡಿ ಆಸ್ತಿಯ ಲೆಕ್ಕವನ್ನಷ್ಟೇ ಲೋಕಾಯುಕ್ತಕ್ಕೆ ತೋರಿಸಿದ ಕಟ್ಟಾ ಅಕ್ರಮ ಸಂಪತ್ತಿನ ವಿರುದ್ಧ ದೊಡ್ಡಮಟ್ಟದಲ್ಲೇ ತನಿಖೆಯಾಗಬೇಕು. ಈತನ ಭೂಗಳ್ಳತನ ಅದ್ಯಾವ ಮಟ್ಟದ್ದೆಂದರೆ ಅದಕ್ಕೆಂದೇ ಮತ್ತೊಂದು ಎ.ಟಿ. ರಾಮಸ್ವಾಮಿ ಕಮಿಟಿ ನೇಮಕವಾಗಬೇಕು!

ಕೇಳುವವರ್‍ಯಾರು? ■

ಗದಗದ ಮಂದಿಯ ಗ್ರಹಚಾರ ಸರಿಯಿದ್ದಂತಿಲ್ಲ! ಈ ಹಿಂದೆ ಬಡಿಗಾಸಿಗೂ ಬಾಯಿಗಲಿಸುತ್ತಿದ್ದ ಭ್ರಷ್ಟ ಎಸ್ಪಿ ಶ್ರೀಧರ್ ಎತ್ತಂಗಡಿಯಾದ ಎಂದು ನಿಟ್ಟುಸಿರು ಬಿಡುತ್ತಿದ್ದಂತೆಯೇ ಅವನನ್ನು ಮೀರಿಸುವ ಎಸ್ಪಿ ರೂಪಾ ಒಕ್ಕರಿಸಿಕೊಂಡಿದ್ದಾಳೆ.

ರೂಪಾ-ರಂಪ!

ಎಸ್ಪಿಯಾಗಿ ಬಂದ ಮರುದಿನವೇ ಈಕೆ ಗದಗದ ಗಲ್ಲಿ-ಗಲ್ಲಿ ಸುತ್ತಿ ಜೂಜುಕೋರರು-ಮಟ್ಕಾ ಬುಕ್ಕಿಗಳನ್ನು ಹೆಕ್ಕಿ ತಂದು ಬೆಂಡೆತ್ತಿ ಸಾಕ್ಷಾತ್ ದುಷ್ಟ ಸಂಹಾರಿಣಿಯ ಪೋಜು ಕೊಟ್ಟಳು. ಇದನ್ನೆಲ್ಲಾ ನೋಡಿದ ಜಿಲ್ಲೆಯ ಜನ ಇನ್ನೇನು ಜಿಲ್ಲೆಗಂಟಿದ ಅನಿಷ್ಟ ತೊಲಗಿ ಬಿಡುತ್ತೆ ಅಂತ ಮತ್ತೊಮ್ಮೆ ನಿಟ್ಟುಸಿರು ಬಿಟ್ಟರು. ಆದರೆ ಆಕೆ ಎಳೆದು ತಂದ ಜೂಜುಕೋರ, ಮಟ್ಕಾ ಬುಕ್ಕಿಗಳೊಂದಿಗೆ ನಡೆಸಿದ ಡೀಲೇ ಬೇರೆಯಾಗಿತ್ತು, ವಾಸ್ತವದಲ್ಲಿ ಆಕೆ ಗದಗದ ಗಲ್ಲಿಗಲ್ಲಿಗಳಿಂದ ಎಳೆದುತಂದ ದಂಧೆಕೋರರ ಬೆನ್ನಲ್ಲಿ ಬಾಸುಂಡೆಯೆಬ್ಬಿಸಿ 'ಹಿಂದಿನ ಎಸ್ಪಿಗೆ ಎಷ್ಟು ಕೊಡ್ತಿದ್ರಿ ಹಾಗೂ ನನಗೆಷ್ಟು ಕೊಡ್ತೀರಿ?' ಅಂತ ವ್ಯವಹಾರ ಶುರು ಮಾಡಿಕೊಂಡುಬಿಟ್ಟಿದ್ದಳು.

ಇಂತಹ ರೂಪಾ ಈಗ ಶಾಂತಿ ಸೌಹಾರ್ದತೆಗೆ ಹೆಸರಾದ ಗದುಗಿಗೆ ದಾಂಗುಡಿಯಿಟ್ಟಿದ್ದಾಳೆ. ಭಜರಂಗಿಗಳಾದ ರವಿ ಸಿದ್ಲಿಂಗ, ಶ್ರೀಧರ ಕುಲಕರ್ಣಿ ಪ್ರಲ್ಹಾದ ಹೊಸಳ್ಳಿ ಮತ್ತಿತರರು ರೂಪಾ ಮೇಡಂನ ಹಣೆಗೆ ತಿಲಕವಿಟ್ಟೇ ಜಿಲ್ಲೆಗೆ ಬರಮಾಡಿಕೊಂಡಿದ್ದಾರೆ. ಜಿಲ್ಲೆಗೆ ಅದ್ಯಾವ ಗತಿ ಕಾದಿದೆಯೋ ಗೊತ್ತಿಲ್ಲ.

ಗರಿಗೆದರಿವೆ ಅನಿಷ್ಟ ದಂಧೆಗಳು

ರೂಪಾಳ ಮಾರ್ಗದರ್ಶನದಲ್ಲಿ ಗ್ಯಾಂಬ್ಲರ್ ದಂಧೆಗಳು ಎಂತೆಂಥಾ ಸ್ವರೂಪ ಪಡೆದಿವೆಯೆಂದರೆ ಟೆಂಪೋ, ಬಸ್ಸು, ಲಾರಿಗಳೂ ಸಹ ಮಿನಿ ಮೊಬೈಲ್ ಇಸ್ಪೀಟ್ ಕ್ಲಬ್‌ಗಳಾಗಿ ಮಾರ್ಪಟ್ಟಿವೆ. ಬೆಳಗ್ಗೆ 10ಕ್ಕೆ ಶುರುವಾಗುವ ಈ ದಂಧೆ ಸಂಜೆ 6ರವರೆಗೂ ಸಾಂಗವಾಗಿ ನೆರವೇರುತ್ತದೆ. ಬರೋ ಗಿರಾಕಿ 500 ಉದುರಿಸಿದರೆ ಊಟ, ಹೆಂಡ, ಇಸ್ಪೀಟು ಜೊತೆಗೆ ಫ್ರೀ ಟ್ರಾವೆಲಿಂಗ್!


ಎಸ್ಪಿ ರೂಪಾ ಸಾರಥ್ಯದಲ್ಲಿ ಗರಿಗೆದರಿದ ಮಟ್ಕಾದಂಧೆ



ಹಿಂದಿನ ಎಸ್ಪಿ ಶ್ರೀಧರ್ ರಸಗೊಬ್ಬರ ಹಾಕಿ ಬೆಳೆಸಿದ್ದ ಜಿಲ್ಲೆಯ ಇಸ್ಪೀಟು ಕ್ಲಬ್ಬುಗಳ ಮಾಲೀಕರನ್ನೂ, ಮಟ್ಕಾ ಅಡ್ಡೆ ನಕಲಿ ಮದ್ಯ ಮಾರಾಟಗಾರರು ಹಾಗೂ ಮೀಟರ್ ಬಡ್ಡಿ ದಂಧೆಕೋರರನ್ನು ಕಚೇರಿಗೆ ಕರೆಸಿ ಸಭೆ ನಡೆಸಿದ ರೂಪಾ ಅವರೊಂದಿಗೂ ವ್ಯವಹಾರ ಕುದುರಿಸಿದ್ದಾಳೆ. ಜೊತೆಗೆ ಜಿಲ್ಲೆಯ ಎಲ್ಲಾ ಠಾಣೆಗಳ ಎಸ್ಸೈಗಳ ಸಭೆ ಕರೆದು ಪ್ರತಿ ತಿಂಗಳು ಯಾವ ಯಾವ ಠಾಣೆಯಿಂದ ಎಷ್ಟೆಷ್ಟು ಹಣ ತನ್ನ ಪರ್ಸಿಗೆ ಬಂದು ಬೀಳಬೇಕೆಂದು ಫರ್ಮಾನು ಹೊರಡಿಸಿದ್ದಾಳೆ. ಹೀಗಂತ ಪೊಲೀಸ್ ಇಲಾಖೆಯ ಬಾಯಿಬಡುಕ ಮಂದಿ ಬಹಿರಂಗವಾಗಿಯೇ ಆಡಿಕೊಂಡು ತಿರುಗುತ್ತಿದ್ದಾರೆ. ಮತ್ತೊಂದು ವಿಚಾರವೆಂದರೆ ಈಕೆಯ ತಿಂಗಳ ಆದಾಯ ೮ ಲಕ್ಷವಂತೆ!

ಖಾಕಿ ಕಮ್ ಚೆಡ್ಡಿ!


ಈಕೆ ಯಾರಿಗೂ ಕೇರ್ ಮಾಡದೆ, ಕಂಡಕಂಡಲ್ಲಿ ತಿನ್ನುತ್ತಿರುವುದಕ್ಕೆ ಪ್ರಧಾನ ಕಾರಣ ಈಕೆಗೆ ಚೆಡ್ಡಿಗಳ ಸಪೋರ್ಟ್ ಇರುವುದು. ಜಿಲ್ಲಾ ಉಸ್ತುವಾರಿ ಸಚಿವ ಶ್ರೀರಾಮುಲುವಿನಿಂದ ಹಿಡಿದು ಸ್ಥಳೀಯ ಬಿಜೆಪಿ ಪುಢಾರಿಗಳವರೆಗೂ ಎಲ್ಲರ ಕೈಬೆಚ್ಚಗಾಗಿಸಿಯೇ ಎಸ್ಪಿ ಹುದ್ದೆಗೆ ಏರಿರುವ ರೂಪಾ ಮೇಡಂಗೆ ಅವರೆಲ್ಲರ ಕೃಪಾಕಟಾಕ್ಷವಿದೆ. ಹಾಗಾಗಿಯೇ ಹಾಕಿದ ಬಂಡವಾಳವನ್ನೆಲ್ಲಾ ಬಡ್ಡಿ, ಲಾಭದ ಸಮೇತವಾಗಿ ಕೀಳುವ ತರಾತುರಿಯಲ್ಲಿದ್ದಂತೆ ಕಾಣುತ್ತಿದೆ.


ಹಿಂದಿನ ಎಸ್ಪಿ ಶ್ರೀಧರ್

ಈ ಹಿಂದೆ ಈಕೆ ಬೀದರ್‌ನಲ್ಲಿ ಎಸ್‌ಪಿಯಾಗಿದ್ದಾಗ ಹುಮ್ನಾಬಾದ್ ತಾಲ್ಲೂಕಿನಲ್ಲಿ ಡಾ. ಅಂಬೇಡ್ಕರ್ ಪರಿನಿರ್ಮಾಣ ದಿನದಂದು ಕಿಡಿಗೇಡಿಗಳು ಜಿಲ್ಲೆಯ ಶಾಂತಿಗೆ ಕೊಳ್ಳಿಯಿಡುವ ಉದ್ದೇಶದಿಂದಲೇ ಅಂಬೇಡ್ಕರ್ ಪ್ರತಿಮೆಗೆ ಚಪ್ಪಲಿಹಾರ ಹಾಕಿದ್ದರು. ಆಗ ಆರೋಪಿಯನ್ನು ಬಂಧಿಸುವಂತೆ ಒತ್ತಾಯಿಸಿದ ದಲಿತ ಸಂಘಟನೆಗಳವರು ಹೋರಾಟಕ್ಕಿಳಿದಿದ್ದರು. ಎಸ್ಪಿಯಾಗಿದ್ದ ರೂಪಾ ಮೇಡಂ ತನ್ನ ಗಂಡ ಡಿ.ಸಿ. ಮಹೇಶ ಮೌದ್ಗಿಲ್‌ನೊಂದಿಗೆ ಸೇರಿ ಸಮಾಜದ ಶಾಂತಿ ಕದಡುತ್ತಿದ್ದ ಪುಢಾರಿಗಳನ್ನು ನಿಯಂತ್ರಿಸುವ ಬದಲು ಶಾಂತಿಯುತವಾಗಿ ಹೋರಾಟಕ್ಕಿಳಿದಿದ್ದ ದಲಿತರ ಮೇಲೆ ಲಾಠಿ ಚಾರ್ಜ್ ಮಾಡಿಸಿ ಮನಬಂದಂತೆ ಬಡಿಸಿದ್ದಳು.

ಖಾಕಿ ಖದೀಮರ ಗ್ಯಾಂಗ್

ಜಿಲ್ಲೆಯ ಪೊಲೀಸ್ ವರಿಷ್ಠಾಧಿಕಾರಿಯೇ ಬಹಿರಂಗವಾಗಿ ರೇಟ್ ಫಿಕ್ಸ್ ಮಾಡಿಕೊಂಡು ವಸೂಲಿಗಿಳಿದುಬಿಟ್ಟರೆ ಇನ್ನು ಕೆಳದರ್ಜೆಯ ಪೊಲೀಸರನ್ನು ಕೇಳಬೇಕೆ? ಅವರೂ ಅಕ್ಕನ ದಾರಿ ಹಿಡಿದಿದ್ದಾರೆ. ಗ್ರಾಮೀಣ ಠಾಣಾ ಎಸ್ಸೈ ಶ್ರೀನಿವಾಸ ಮೇಟಿ ದಿನಕ್ಕೆ ಹತ್ತು ಸಾವಿರ ಅಂತ ಬಹಿರಂಗವಾಗೇ ವಸೂಲಿಗೆ ನಿಂತುಬಿಟ್ಟಿದ್ದಾನೆ. ಈತ ಜೆಡಿಎಸ್‌ನ ಕೋನರೆಡ್ಡಿಯ ಖಾಸಾ ಅಳಿಯ ಎಂದರೆ ಅವನನ್ನು ಯಾರು ಕೇಳಬೇಕು? ಇನ್ನು ಎಸ್ಸೈ ಮಹದೇವ ಬಂದಷ್ಟು ಬರಲಿ ಎನ್ನುವ ಸ್ಥಿತಪ್ರಜ್ಞ! ಹವಾಲ್ದಾರರಾಗಿದ್ದ ದಿನದಿಂದ ಎಸ್ಸೈ ಆದ ಈ ದಿನದವರೆಗೂ ಗದಗ್‌ನಲ್ಲಿಯೇ ಗೂಟ ಹೊಡೆದು ಕುಂತಿರುವ ಬೆಟಗೇರಿ ಠಾಣೆಯ ಶಿವಶಂಕರ ಮಸೂತಿ ತನ್ನ ಮಕ್ಕಳ ಪರೀಕ್ಷೆಯನ್ನೂ ಪಿ.ಸಿ.ಗಳಿಂದ ಬರೆಯಿಸಿ ಪಾಸು ಮಾಡಿಸಿದ ಭೂಪ!


ಇನ್ಸ್‌ಪೆಕ್ಟರ್ ರಮಾಕಾಂತ್

ಆದರೆ ಇವರೆಲ್ಲರನ್ನೂ ಮೀರಿಸಿ ಖುದ್ದು ರೂಪಾ ಮೇಡಂಗೇ ಟೋಪಿಯಿಡುವ ಪ್ರಖಾಂಡ ಪ್ರತಿಭೆ ಯಿರುವ ಮನುಷ್ಯನೆಂದರೆ ನಗರ ಠಾಣೆಯ ಇನ್ಸ್‌ಪೆಕ್ಟರ್ ರಮಾಕಾಂತ! ಬಂದ ಹೊಸತರಲಿ ಮಂತ್ರಿ ಜಾರಕಿಹೊಳಿಯ ತಮ್ಮ ನೆಂಟನೆಂದು ಬೊಗಳೆ ಹೊಡೆದು ಬೀಗಿದ ಈತ ಈಗ ಜಿಲ್ಲಾ ಮಂತ್ರಿ ಶ್ರೀರಾಮುಲುವಿನ ಕ್ಲಾಸ್‌ಮೇಟು ಅಂತ ಪ್ಲೇಟ್ ತಿರುಗಿಸಿದ್ದಾನೆ! ಹಲವಾರು ಹಲಾಲು ಪ್ರಕರಣಗಳಲ್ಲಿ ಭಾಗಿಯಾಗಿರುವ ಈತ ಎಸ್ಪಿ ಶ್ರೀಧರನ ಶಿಷ್ಯಕೋಟಿಯಲ್ಲಿ ಮೊದಲಿಗ. ಎಸ್ಪಿ ರೂಪಾಳಿಗೆ ಈತನೇ ಮೀಡಿಯೇಟರ್ ಎಂಬ ಗುಸು-ಗುಸು ಸುದ್ದಿಯಿದೆ. ಅದು ನಿಜವಾದಲ್ಲಿ ರೂಪಾಯಿಯಲ್ಲಿ ನಾಲ್ಕಾಣೆ ಮಾತ್ರ ರೂಪಾ ಮೇಡಂರ ಪರ್ಸ್ ಸೇರುತ್ತದೆಯಷ್ಟೆ. ಜೊತೆಗೆ ಯಾರು ಏನೇ ಅಂದರೂ ತಲೆಯಾಡಿಸಿ ತೆಪ್ಪಗಾಗುವ ಡಿವೈಎಸ್‌ಪಿ ಸುರೇಶ ಮಸೂತಿ ರಿಟೈರ್ ಕೂಡಾ ಇಲ್ಲೇ ಆಗ್ಲಿ ಎಂಬಂತೆ ಕುಂತು ಬಿಟ್ಟಿದ್ದಾನೆ. ಒಟ್ಟಾರೆಯಾಗಿ ಗದಗದಂಥ ಊರಿನಲ್ಲಿ ಪೊಲೀಸ್ ಹೆಗ್ಗಣಗಳು ನುಗ್ಗಿಬಿಟ್ಟಿವೆ.

ಇದಕ್ಕೆಲ್ಲ ಎಂ.ಪಿ. ಪ್ರಕಾಶ್ ಏನಂತಾರೆ?

-ವರದಿಗಾರ

ರಾಘವೇಶನ ಅರಣ್ಯ ಸ್ವಾಹ!

ರಾಮಚಂದ್ರಾಪುರ ಮಠದ ರಾಘವೇಶ್ವರ ಸ್ವಾಮಿ ದನಕರುಗಳನ್ನು ಮೇಯಿಸುತ್ತಾ, ಅವುಗಳಿಗೊಂದು ಸಮ್ಮೇಳನ ಅಂತ ಮಾಡುತ್ತಾ ಚೆಡ್ಡಿ ಮಂತ್ರಿ ಶಾಸಕರುಗಳ ಎದುರು ಬಕೆಟ್ ಹಿಡಿದುಕೊಂಡು ಕೋಟಿ ಕೋಟಿ ಗೆಬರುವ ಕೆಲಸ ಮಾತ್ರ ಮಾಡುತ್ತಾನೆ ಅಂತ ಅಂದುಕೊಂಡಿದ್ದರೆ ಅದು ತಪ್ಪು ಏಕೆಂದರೆ ಅವನ ಗೆಬರುವ ಕೆಲಸ ಅಷ್ಟಕ್ಕೇ ನಿಂತಿಲ್ಲ. ರಾಮಚಂದ್ರಾಪುರ ಮಠದ ಸುತ್ತಮುತ್ತಲಿನ ಅರಣ್ಯ ಪ್ರದೇಶವನ್ನು ಒತ್ತುವರಿ ಮಾಡಿಕೊಂಡು ಬೇಲಿ ಹಾಕಿ ಅದು ನಮ್ಮ ಮಠದ್ದೇ ಜಾಗ ಎಂದು ಹೂಂಕರಿಸಲು ಪ್ರಾರಂಭಿಸಿಬಿಟ್ಟಿದ್ದಾನೆ. ಬೇರೆ ಮಾತಿನಲ್ಲಿ ಹೇಳಬೇಕೆಂದರೆ ಅರಣ್ಯ ಭೂಮಿಯನ್ನು ಸ್ವಾಹ ಮಾಡುತ್ತಿದ್ದಾನೆ.



ಕೆಲ ತಿಂಗಳುಗಳ ಹಿಂದೆ ರಾಮಚಂದ್ರಾಪುರ ಮಠದಲ್ಲಿ ಒಂದು ವಿಶ್ವ ಗೋಸಮ್ಮೇಳನ ಅಂತ ಮಾಡಿದ ರಾಘವೇಶ್ವರ ಸ್ವಾಮಿ ರಾತ್ರೋರಾತ್ರಿ ಕೋಟ್ಯಾಧಿಪತಿಯಾಗಿಬಿಟ್ಟ. ಉಪ ಮುಖ್ಯಮಂತ್ರಿ ಯಡ್ಡಿ, ನೀರಾವರಿ ಮಂತ್ರಿ ಕೆ.ಎಸ್. ಈಶ್ವರಪ್ಪ ಮತ್ತು ಉನ್ನತ ಶಿಕ್ಷಣ ಸಚಿವ ಡಿ.ಎಚ್. ಶಂಕರಮೂರ್ತಿ ಎಂಬ ಶಿವಮೊಗ್ಗ ಜಿಲ್ಲೆಯ ತ್ರಿಮೂರ್ತಿ ಮಂತ್ರಿಗಳು ರಾಘವೇಶ್ವರನ ರಾಮಚಂದ್ರಾಪುರ ಮಠದ ಕಾವಲುಗಾರರಂತೆ ವರ್ತಿಸುತ್ತಾ ಜನರ ತೆರಿಗೆಯಿಂದ ಸಂಗ್ರಹಿತವಾದ ಕೋಟಿ ಕೋಟಿ ಹಣವನ್ನು ರಾಘವೇಶ್ವರನ ಪಾದಗಳಡಿಯಲ್ಲಿ ಇಟ್ಟು ಅಡ್ಡಡ್ಡ ಬಿದ್ದು ಬಂದಿದ್ದರು. ಅಲ್ಲದೇ, ರಾಘವೇಶ್ವರ ಗೋ ಸಮ್ಮೇಳನಕ್ಕಾಗಿ ಸುತ್ತಮುತ್ತಲಿನ ಅರಣ್ಯ ಪ್ರದೇಶವನ್ನು ನಾಶ ಮಾಡಿ, ಎತ್ತೆತ್ತರದ ದಿಣ್ಣೆಗಳನ್ನು ಜೆಸಿಬಿ ಯಂತ್ರದಿಂದ ನೆಲಸಮ ಮಾಡಿ ಪರಿಸರನಾಶ ಮಾಡುತ್ತ ಅಲ್ಲಿನ ವೈವಿಧ್ಯಮಯ ಜೀವಸಂಕುಲಕ್ಕೆ ಸಂಚಕಾರ ತರುತ್ತಿದ್ದುದನ್ನು ನೋಡಿಯೂ ಈ ತ್ರಿಮೂರ್ತಿಗಳು ಅದಕ್ಕೆ ಬೆಂಬಲವಾಗಿ ನಿಂತಿದ್ದರು. ರಾಘವೇಶ್ವರನ ವಿರುದ್ಧ ಮಾತನಾಡದಂತೆ ಎಲ್ಲ ಸರ್ಕಾರಿ ಅಧಿಕಾರಿಗಳಿಗೆ ಫರ್ಮಾನು ಹೊರಡಿಸಿದ್ದರು. ಈಗ ಅದು ಸಾಲದೆಂಬಂತೆ ಶ್ರೀಮಾನ್ ರಾಘವೇಶ್ವರ ಸ್ವಾಮಿಗಳು ಅಕ್ಕಪಕ್ಕದ ಅರಣ್ಯ ಭೂಮಿಗೆ ಬೇಲಿ ಹಾಕಿಕೊಂಡು ಈ ಜಾಗ ನನ್ನದೇ ಎಂದು ಕುಳಿತುಬಿಟ್ಟಿದ್ದರೂ ಕಿಮಿಕ್ಕೆನ್ನುತ್ತಿಲ್ಲ.

ತಹಶೀಲ್ದಾರರೇ ಬಯಲು ಮಾಡಿದರು

ರಾಘವೇಶ್ವರನ ಈ ರೀತಿ ಅರಣ್ಯ ಭೂಮಿಯನ್ನು ಒತ್ತುವರಿ ಮಾಡಿಕೊಂಡಿದ್ದಾನೆಂಬ ಮಾಹಿತಿಯನ್ನರಿತ ನಮ್ಮ ಹಕ್ಕು ವೇದಿಕೆ, ದಲಿತ ಸಂಘರ್ಷ ಸಮಿತಿ, ಮುಕ್ತ ಸಂವಾದ ವೇದಿಕೆ ಪರಿಸರ ಗೆಳೆಯರು ಎಂಬ ಮುಂತಾದ ಶಿವಮೊಗ್ಗ ಮತ್ತು ಸಾಗರದ ಪ್ರಗತಿಪರ ಸಂಘಟನೆಗಳು ಅವನ ವಿರುದ್ಧ ಪ್ರತಿಭಟನೆಯನ್ನು ಆರಂಭಿಸಿಬಿಟ್ಟಿದ್ದಾರೆ. ಈ ಪ್ರತಿಭಟನೆಗೆ ರಾಜ್ಯದ ಬೇರೆ ಬೇರೆ ಕಡೆಯಿಂದಲೂ ಬೆಂಬಲ ವ್ಯಕ್ತವಾದಾಗ ಅನಿವಾರ್ಯವಾಗಿ ಹೊಸನಗರ ತಹಶೀಲ್ದಾರರು ರಾಮಚಂದ್ರಾಪುರ ಮಠವು 41 ಎಕರೆ 30 ಗುಂಟೆ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಿಕೊಂಡಿದೆ ಎಂದು ಅಧಿಕೃತವಾಗಿ ಬಹಿರಂಗಪಡಿಸಿದರು. ಇದಲ್ಲದೇ 62 ಎಕರೆ ಗೋಮಾಳವನ್ನೂ ಈತ ನೆಲಸಮ ಮಾಡಿಟ್ಟುಕೊಂಡಿದ್ದಾನೆ. ಇದು ಬೆಳಕಿಗೆ ಬಂದಿರುವ ಭೂಕಬಳಿಕೆ ಮಾತ್ರ. ವಾಸ್ತವದಲ್ಲಿ ರಾಘವೇಶನ ಸಾರಥ್ಯದಲ್ಲಿ ರಾಮಚಂದ್ರಾಪುರ ಮಠ ನೂರಾರು ಎಕರೆ ಸರ್ಕಾರಿ ಭೂಮಿಯನ್ನು ಕಬಳಿಸಿದೆ. ನಿಷ್ಪಕ್ಷಪಾತ ತನಿಖೆಯಿಂದ ಮಾತ್ರವೇ ನಿಜವಾದ ಭೂಕಬಳಿಕೆ ಎಷ್ಟೆಂಬುದು ಗೊತ್ತಾಗಲಿದೆ.

ರಾಘವೇಶ್ವರ ಕೇವಲ ಅರಣ್ಯ ಭೂಮಿಗೆ ಬೇಲಿ ಹಾಕಿಕೊಂಡು ಸುಮ್ಮನಾಗಲಿಲ್ಲ, ಕಬಳಿಸಿ ಭೂಮಿಯೆಲ್ಲ ಮಠದ್ದೇ ಎಂಬಂತೆ ಬಿಂಬಿಸಲು ಆ ಜಾಗದಲ್ಲಿ ಹಲವಾರು ರೀತಿಯ ಕಟ್ಟಡಗಳನ್ನು ನಿರ್ಮಿಸಿಬಿಟ್ಟಿದ್ದಾನೆ.

ಇಲ್ಲಿ ಒಂದು ಮಾತನ್ನು ಹೇಳಬೇಕು. ರಾಮಚಂದ್ರಾಪುರ ಮಠದಲ್ಲಿ ವಿಶ್ವ ಗೋ ಸಮ್ಮೇಳನ ನಡೆಯುತ್ತಿದ್ದಾಗ ಮಠವು ಸಮ್ಮೇಳನದ ಹೆಸರಿನಲ್ಲಿ ಅಪಾರ ಪ್ರಮಾಣದಲ್ಲಿ ಪರಿಸರ ನಾಶ ಮತ್ತು ಅರಣ್ಯ ಒತ್ತುವರಿ ಮಾಡಿ ಜೀವ ವೈವಿಧ್ಯತೆಗಳ ನಾಶಕ್ಕೆ ಕಾರಣವಾಗಿತ್ತು. ಸಮ್ಮೇಳನದ ಪರಿಣಾಮವಾಗಿ ಮಾನವ ತ್ಯಾಜ್ಯ ನದಿ ಸೇರಿ ಸಾವಿರಾರು ಮೀನುಗಳು, ಇತರ ಜಲಚರಗಳು ಸಾವಿಗೀಡಾಗಿದ್ದವು. ಅಲ್ಲದೇ ಗ್ರಾಮಸ್ಥರಿಗೆ ಕುಡಿಯುವ ನೀರಿನ ಅಭಾವ ಉಂಟಾಗಿ ಹಾಹಾಕಾರವೆದ್ದಿತ್ತು. ಇದನ್ನೆಲ್ಲ ಪರಿಶೀಲಿಸದ ವೈದ್ಯರ ತಂಡ ಎಲ್ಲವನ್ನೂ ದೃಢಪಡಿಸಿತ್ತು. ಸಮ್ಮೇಳನದ ಹೆಸರಿನಲ್ಲಿ ರಾಘವೇಶ್ವರ ಪರಿಸರದ ಮೇಲೆ ನಡೆಸಿದ ಅತ್ಯಾಚಾರವನ್ನು ವಿರೋಧಿಸಿ ಹಲವಾರು ಸಂಘಟನೆಗಳು ಬೀದಿಗಿಳಿದು ಹೋರಾಟ ನಡೆಸಿದ್ದವು. ಆಗ ರಾಘವೇಶ್ವರ ಸ್ವಾಮಿಯು "ಈ ಆರೋಪಗಳು ಸಾಬೀತಾದರೆ ನಾನು ಮರಣದಂಡನೆಗೂ ಸಿದ್ಧ" ಎಂದು ಹೇಳಿ ಬಹಳ ಸಾಚಾನಂತೆ ಪೋಜು ನೀಡಿದ್ದ. ಆದರೆ ಈಗ ಮಾಡಿದ ಭೂಕಬಳಿಕೆ, ಪರಿಸರನಾಶ ಸಾಬೀತಾಗಿದೆ. ಆದರೆ ಸ್ವಾಮಿ ಮಾತ್ರ ಬೆಂಗಳೂರಿಗೆ ಬಂದು ಇಲ್ಲೂ ತನ್ನ ಕಪಟ ನಾಟಕವನ್ನು ಮುಂದುವರೆಸಿದ್ದಾನೆ.

ಶ್ರೀರಾಮ ಕನಸಿನಲ್ಲಿ ಬಂದಿದ್ದಾನಂತೆ

ರಾಘವೇಶ ನುಂಗುತ್ತಿರುವುದು ಕೇವಲ ಸರ್ಕಾರಿ ಭೂಮಿಯನ್ನಲ್ಲ, ಬದಲಾಗಿ ಅಕ್ಕಪಕ್ಕದ ಅಮಾಯಕ ಗಿರಿಜನರ, ದಲಿತರ ಅಷ್ಟೇ ಏಕೆ, ತನ್ನದೇ ಜಾತಿಯ ಹವ್ಯಕ ಬ್ರಾಹ್ಮಣರ ಜಮೀನನ್ನೂ ಬಿಡುತ್ತಿಲ್ಲ. ಜನರನ್ನು ಮರಳುಗೊಳಿಸಿ ಭಯಭೀತರನ್ನಾಗಿಸಲು "ನಿಮ್ಮ ಜಾಗವನ್ನು ಮಠಕ್ಕೆ ಸೇರಿಸಿಕೊಳ್ಳುವಂತೆ ಶ್ರೀರಾಮ ನನ್ನ ಕನಸಿನಲ್ಲಿ ಬಂದು ಅಪ್ಪಣೆ ಮಾಡಿದ್ದಾನೆ" ಎಂದು ಪೌರಾಣಿಕ ಡೈಲಾಗ್ ಬೇರೆ ಹೊಡೆಯುತ್ತಾನೆ! ಶ್ರೀರಾಮನನ್ನೂ ತನ್ನ ಭೂಕಬಳಿಕೆಗೆ ಅಸ್ತ್ರವನ್ನಾಗಿ ಬಳಸಿಕೊಳ್ಳುತ್ತಿರುವ ರಾಘವೇಶನ ವಿರುದ್ಧ ಹಲವರು ಪ್ರತಿಭಟಿಸಿದರೆ ಅಂಥವರಿಗೆ ನಾನಾ ರೀತಿಯ ಕಿರುಕುಳ ನೀಡುತ್ತಾನೆ. ಉದಾಹರಣೆಗೆ, ಹವ್ಯಕರಲ್ಲಿ 'ಮಂತ್ರಾಕ್ಷತೆ'ಗೆ ತುಂಬಾ ಧಾರ್ಮಿಕ ಮೌಲ್ಯವಿದೆ. ಹವ್ಯಕರು ಅದನ್ನು ಬಹಳ ಶ್ರದ್ಧೆ ಮತ್ತು ಭಕ್ತಿಯಿಂದ ಮಾಡುತ್ತಾರೆ. ಆದರೆ ಯಾರು ರಾಘವೇಶ್ವರನಿಗೆ ಭೂಮಿ ನೀಡುವುದಿಲ್ಲವೋ ಅವರಿಗೆ ಈ ಮಂತ್ರಾಕ್ಷತೆಯನ್ನು ನಿರಾಕರಿಸಿ ಬ್ಲ್ಯಾಕ್‌ಮೇಲ್ ಮಾಡುತ್ತಾನೆ.

ವ್ಯಾಪಾರಿಗಳನ್ನೂ ಬಿಡಲಿಲ್ಲ

ಈ ಸ್ವಾಮಿ ಹಣ ಮಾಡುವುದಕ್ಕಾಗಿ ಏನು ಬೇಕಾದರೂ ಮಾಡುತ್ತಾನೆ, ಯಾರನ್ನು ಬೇಕಾದರೂ ಸುಲಿಯಲು ಮುಂದಾಗುತ್ತಾನೆ ಎಂಬುದಕ್ಕೆ ಅವನು ಗೋಸಮ್ಮೇಳನದ ಸಮಯದಲ್ಲಿ ವ್ಯಾಪಾರಿಗಳಿಗೆ ಕೊಟ್ಟ ಕಿರುಕುಳವೇ ಸಾಕ್ಷಿ. ಸಮ್ಮೇಳನಕ್ಕೆ 25 ಲಕ್ಷ ಜನ ಬರ್ತಾರೆ, ವ್ಯಾಪಾರ ಭರ್ಜರಿಯಾಗಿ ನಡೆಯುತ್ತೆ ಎಂದು ಸುಮಾರು 300 ವ್ಯಾಪಾರಿಗಳಿಗೆ ತಲೆತುಂಬಿ ಒಬ್ಬೊಬ್ಬರಿಂದ ತಲಾ 10 ಸಾವಿರ ರೂಪಾಯಿಗಳನ್ನು ಎತ್ತಿದ. ಆದರೆ ದುರಂತ ಎಂದರೆ ಬಂದ ಜನರ ಸಂಖ್ಯೆ ಲಕ್ಷವನ್ನೂ ದಾಟದಿದ್ದುದರಿಂದ ವ್ಯಾಪಾರಿಗಳು ಸಿಟ್ಟಿಗೆದ್ದು ಸ್ವಾಮಿಯ ವಿರುದ್ಧವೇ ತಿರುಗಿಬಿದ್ದರು. ಬೀಸೋ ದೊಣ್ಣೆಯಿಂದ ತಪ್ಪಿಸಿಕೊಂಡರೆ ಸಾಕು, ಸಮ್ಮೇಳನ ಮುಗಿದ ಮೇಲೆ ನೋಡಿಕೊಂಡರಾಯಿತು ಎಂದುಕೊಂಡು 'ವ್ಯಾಪಾರಿಗಳಿಂದ ಪಡೆದ ಹಣವನ್ನು ವಾಪಾಸ್ಸು ಕೊಡಲಾಗುವುದು' ಎಂದು ಆಶ್ವಾಸನೆ ಕೊಟ್ಟ. ಈಗ ಸಮ್ಮೇಳನ ಮುಗಿದ ಮೇಲೆ ಹೋಗಿ ಕೇಳಿದರೆ ನಾನು ಹಾಗೆ ಹೇಳೇ ಇರಲಿಲ್ಲ ಎಂದು ಪ್ಲೇಟ್ ಚೇಂಜ್ ಮಾಡಿದ. ಈಗ ಹೇಳಿ ರಾಘವೇಶ್ವರನಿಗೆ ಎಷ್ಟು ನಾಲಿಗೆಗಳಿವೆ?



ರಾಘವೇಶ್ವರ ಕಬಳಿಸಿರುವ ಅರಣ್ಯ

ಅನಿಲ್‌ಕುಮಾರ್ ಎಂಬ ನಾಮರ್ಧ ಡಿಸಿ

ವಾಸ್ತವದಲ್ಲಿ ರಾಮಚಂದ್ರಾಪುರ ಮಠದಲ್ಲಿ ವಿಶ್ವ ಗೋ ಸಮ್ಮೇಳನ ಪ್ರಾರಂಭವಾದಾಗಲೇ ಪ್ರಗತಿಪರ ಸಂಘಟನೆಗಳು ಮತ್ತು ವ್ಯಕ್ತಿಗಳು ಶಿವಮೊಗ್ಗ ಜಿಲ್ಲಾಧಿಕಾರಿ ಅನಿಲ್ ಕುಮಾರ್‌ಗೆ ದೂರು, ಮನವಿ ಸಲ್ಲಿಸಿದ್ದರು. ರಾಘವೇಶ್ವರ ಸಮ್ಮೇಳನದ ಹೆಸರಿನಲ್ಲಿ ಮಾಡುತ್ತಿರುವ ಪರಿಸರದ ಅತ್ಯಾಚಾರವನ್ನು ತಡೆಯಬೇಕೆಂದು ಒತ್ತಾಯಿಸಿದ್ದರು. ಆದರೆ ಡಿಸಿ ಸಾಹೇಬ್ರು ಮಠದ ಊಳಿಗಕ್ಕಿದ್ದವರಂತೆ ರಾಘವೇಶನ ಕಾಲೊತ್ತಿ ಸೇವೆ ಮಾಡಿದರೇ ವಿನಃ ಪರಿಸರವಾದಿಗಳ ಕೂಗಿಗೆ ಕಿವಿಗೊಡಲಿಲ್ಲ. ಈಗ ರಾಘವೇಶ್ವರ ಭೂಕಬಳಿಕೆ ಮಾಡಿರುವುದನ್ನು ಹೊಸನಗರ ತಹಶೀಲ್ದಾರರೇ ಖುದ್ದಾಗಿ ಬಹಿರಂಗಪಡಿಸಿದ ಮೇಲೂ ಜಪ್ಪೆನ್ನದೇ ಕುಳಿತಿದ್ದಾರೆ ಡಿ.ಸಿ. ಅನಿಲ್‌ಕುಮಾರ್. ಇದಕ್ಕೆ ರಾಘವೇಶ್ವರನ ಮೇಲಿನ ಪ್ರೇಮ ಎನ್ನಬೇಕೋ ಅಥವ ಚೆಡ್ಡಿ ತ್ರಿಮೂರ್ತಿ ಮಂತ್ರಿಗಳ ಭಯ ಎನ್ನಬೇಕೋ ಗೊತ್ತಿಲ್ಲ.

ಅರಣ್ಯ ಇಲಾಖೆಯ ಸೇವೆ

ರಾಘವೇಶ್ವರನಿಗೆ ರಾಜ್ಯದ ಅರಣ್ಯ ಇಲಾಖೆಯೂ ಅಡ್ಡಬಿದ್ದು ಸೇವೆ ಮಾಡುತ್ತಿದೆ. ಮಠ ಮತ್ತು ಸ್ವಾಮಿ ಮಾಡಿದ ಪರಿಸರದ ಮೇಲಿನ ಅತ್ಯಾಚಾರದ ವಿರುದ್ಧ ಜನ ಪ್ರತಿಭಟಿಸುತ್ತಿದ್ದರೂ ಸಾಗರ ವಲಯದ ಅರಣ್ಯ ಸಂರಕ್ಷಣಾಧಿಕಾರಿ ಜಯರಾಮಯ್ಯ ಮಾತ್ರ ಜಪ್ಪೆನ್ನದೇ ಕುಳಿತು ಬಿಟ್ಟಿದ್ದಾರೆ. ಮಠ ಮರಗಳನ್ನು, ಬಿದಿರು ಮಟ್ಟೆಗಳನ್ನು ಕಡಿದಿರುವುದರಿಂದ, ಜೆಸಿಬಿ ಯಂತ್ರದಿಂದ ಇಡೀ ಪ್ರದೇಶವನ್ನು ನೆಲಸಮ ಮಾಡಿರುವುದರಿಂದ ಅಲ್ಲಿ ಈಗ ಅಂತರ್ಜಲದ ಕೊರತೆ ಕಾಣುತ್ತಿದೆ. ಸೂಕ್ಷ್ಮ ಜೀವಿಗಳು ಅಲ್ಲಿಂದ ವಲಸೆ ಹೋಗಿವೆ. ಇದ್ಯಾವುದೂ ಜಯರಾಮಯ್ಯನಿಗೆ ಕಾಣುತ್ತಿಲ್ಲ.

ಶ್ರೀರಂಗಯ್ಯ ದಲಿತನೋ ಬಲಿತನೋ?

ಸಾಗರ ಉಪವಿಭಾಗದ ಎಸಿ ಶ್ರೀರಂಗಯ್ಯ ಜಾತಿಯಿಂದ ದಲಿತನಾದರೂ ತನ್ನ ವರಸೆಗಳಿಂದ ಬ್ರಾಹ್ಮಣನೆ.

ಚೆಮ್ಮನ್ನೂರು ಡಕಾಯಿತಿಗೆ ಭಜರಂಗಿ ಲಿಂಕ್!

ಬೆಂಗಳೂರಿನ ಚೆಮ್ಮನೂರು ಜ್ಯುವೆಲ್ಲರ್ಸ್ ಡಕಾಯಿತಿಗೂ ಶೃಂಗೇರಿ ಕೊಪ್ಪದ ಭಜರಂಗಿ ಪಟಾಲಮ್ಮಿಗೂ ಏನು ಸಂಬಂಧ? ದರೋಡೆಗೆ ಬಳಕೆಯಾದ ಎರಡು ವಿದೇಶಿ ರಿವಾಲ್ವರ್‌ಗಳನ್ನು ನಕ್ಸಲ್ ವಿರೋಧಿ ಹಂತಕ ಪಡೆಯೊಂದನ್ನು ಹುಟ್ಟು ಹಾಕಲೆಂದು ಭಜರಂಗದಳ ಸಂಗ್ರಹಿಸಿ ಇಟ್ಟತ್ತೆ?

ಈ ಥರದ ಪ್ರಶ್ನೆ ಹುಟ್ಟಿಕೊಂಡಿದ್ದೇ ಚೆಮ್ಮನೂರು ಜ್ಯುವೆಲ್ಲರ್ಸ್ ಡಕಾಯಿತಿ ಕೇಸಿನಲ್ಲಿ ಕೊಪ್ಪ ಸಮೀಪದ ನಿಲುವಾಗಿಲಿನ ಸಂದೀಶ ಎಂಬಾತನನ್ನು ಬೆಂಗಳೂರಿನ ಇನ್ಸ್‌ಪೆಕ್ಟರ್ ನಾಗರಾಜ್ ತಂಡ ಸೆರೆಹಿಡಿದ ನಂತರವೆ-

ಆಗಸ್ಟ್ 11ರ ಬೆಳಿಗ್ಗೆ ಫ್ರೇಜರ್‌ಟೌನ್ ಪೊಲೀಸ್ ಠಾಣಾ ವ್ಯಾಪ್ತಿಯ ಕಮ್ಮನಹಳ್ಳಿ ಮೇನ್ ರೋಡಿನಲ್ಲಿರುವ ಚೆಮ್ಮನೂರು ಜ್ಯುವೆಲ್ಲರ್ಸ್ ಮಳಿಗೆಗೆ ನುಗ್ಗಿದ ನಾಲ್ವರು ಮುಸುಕುಧಾರಿಗಳು ಮೂರು ಕೋಟಿ ಹೆಚ್ಚು ಮೌಲ್ಯದ ನಲವತ್ತು ಕೆ.ಜಿ.ಗಳಷ್ಟು ಚಿನ್ನ ದೋಚಿ ಪರಾರಿಯಾದ ಘಟನೆ ಬಹುಶಃ ಬೆಂಗಳೂರಿನ ಇತಿಹಾಸದಲ್ಲೇ ವಿಲಕ್ಷಣ ಪ್ರಕರಣವಾಗಿತ್ತು. ಅದೂ ಹಾಡುಹಗಲೇ ರಿವಾಲ್ವರ್ ಬಳಸಿ, ಜ್ಯುವೆಲ್ಲರಿಯ ಸಿಬ್ಬಂದಿಗಳನ್ನೆಲ್ಲ ಕಟ್ಟಿ ಹಾಕಿ, ದಕಾಯಿತಿ ಮಾಡುವುದೆಂದರೆ; ಅದು ಬಹುಶಃ ಮುಂಬಯಿಯ ಅಥವಾ ಬಿಹಾರಿ ಮೂಲದ ಖತರ್‌ನಾಕ್ ದಕಾಯಿತರದ್ದೇ ಕೃತ್ಯವಿರಬೇಕೆಂದು ಇಡೀ ಪೊಲೀಸ್ ಇಲಾಖೆ ಲೆಕ್ಕಹಾಕಿತ್ತು, ಜನ ಕೂಡ ಯಾರೋ ಹಿಂದಿ ಭಾಷಿಕ ದಕಾಯಿತಿ ಗ್ಯಾಂಗೇ ಈ ಕೃತ್ಯವೆಸಗಿದೆಯೆಂದು ಭಾವಿಸಿದ್ದರು.

ಇದೇ ಹೊತ್ತಿಗೆ ಮಂಗಳೂರಿನಲ್ಲಿ ಬಿಲ್ಡರ್ ಸುಬ್ಬರಾವ್‌ನನ್ನು ಗುಂಡಿಟ್ಟು ಕೊಂದ ಕೇಸಿಗೆ ಸಂಬಂಧಪಟ್ಟಂತೆ ಇನ್ಸ್‌ಪೆಕ್ಟರ್ ಜಯಂತ್ ಶೆಟ್ಟಿಗೆ ಸಿಕ್ಕ ಮಾಹಿತಿಯೊಂದು ವಿಚಿತ್ರವಾಗಿತ್ತು. ಅವನು ಮೂಡಬಿದ್ರೆಯ ಉಮೇಶ್ ಶೆಟ್ಟಿ!



ಚೆಮ್ಮನೂರು ಜುವೆಲ್ಲರ್ಸ್‌ನಲ್ಲಿ ಪೊಲೀಸರ ಪರಿಶೀಲನೆ

ಕೋಳಿ ಜೂಜಿಗೆ ಪದೇಪದೇ ಬರುತ್ತಿದ್ದ. ಜೇಬಿಗೆ ಕೈಯಿಟ್ಟನೆಂದರೆ ಬರೀ ಐನೂರು ರೂಪಾಯಿಯನ್ನು ನೋಟಿನ ಕಂತೆ. ಐದೂ ಬೆರಳಿಗೆ ಚಿನ್ನದ ಉಂಗುರವನ್ನೇ ತೊಡುತ್ತಿದ್ದ. ವಿಚಿತ್ರವೆಂದರೆ ದಿನಕ್ಕೊಂದು ಡಿಜೈನಿನ ಉಂಗುರಗಳನ್ನು ತೊಟ್ಟು ಬರುತ್ತಿದ್ದ!

ಇನ್ಸ್‌ಪೆಕ್ಟರ್ ಜಯಂತ್ ಶೆಟ್ಟಿಯ ಕೈಗೆ ಸಲೀಸಾಗಿ ಸಿಕ್ಕುಬಿದ್ದ ಉಮೇಶ್ ಶೆಟ್ಟಿ ಕೊನೆಗೂ ಬಾಯಿಬಿಟ್ಟಿದ್ದೆ ಚೆಮ್ಮನೂರು ಡಕಾಯಿತಿ!

ಅಲ್ಲಿಗೆ ಹತ್ತಾರು ತಂಡಗಳಾಗಿ ನಿದ್ದೆಗೆಟ್ಟು ಹುಡುಕಾಡುತ್ತಿದ್ದ ಬೆಂಗಳೂರು ಪೊಲೀಸರಿಗೆ ಅದೃಷ್ಟವೇ ಒಲಿದು ಬಂದಂತಾಗಿತ್ತು. ಫ್ರೇಜರ್‌ಟೌನ್ ಇನ್ಸ್‌ಪೆಕ್ಟರ್ ನಾಗರಾಜ್, ಬೆಂಗಳೂರು ಪೂರ್ವ ವಲಯದ ಡಿಸಿಪಿ ಬಿ.ಕೆ. ಸಿಂಗ್, ಭಾರತಿನಗರದ ಇನ್ಸ್‌ಪೆಕ್ಟರ್ ಚಂದ್ರಶೇಖರ್ ಮತ್ತು ರಾಮಮೂರ್ತಿ ನಗರದ ಇನ್ಸ್‌ಪೆಕ್ಟರ್ ಸಿದ್ಧಪ್ಪ ಅದೇ ರಾತ್ರಿ ಮಂಗಳೂರಿಗೆ ಬಂದುಬಿಟ್ಟರು. ಉಮೇಶ್ ಶೆಟ್ಟಿ ಬಾಯಿಂದ ಹೊರಬಿದ್ದ ಮೊದಲ ಹೆಸರೇ ಕೊಪ್ಪದ ಮನೀಶ್ ಶೆಟ್ಟಿ!

ಈತ ಶೃಂಗೇರಿ ಕೊಪ್ಪದ ನಿಲುವಾಗಿಲಿನ ಪಾಖಂಡಿ ಬಾಬುಶೆಟ್ಟಿ ಉರ್ಫ್ ಚಾಕುಬಾಬು ಎಂಬ ಪುರಾತನ ಪಾತಕಿಯ ಖಾಸಾ ಅಳಿಯ. ಒಂದಷ್ಟು ದಿನಗಳ ಕಾಲ ಮುಂಬಯಿಯಲ್ಲಿದ್ದ. ಉಮೇಶ್ ಶೆಟ್ಟಿ ಬಾಯಿ ಬಿಡುತ್ತಲೇ ಶೃಂಗೇರಿ ಪೊಲೀಸರು ಮನೀಶ್ ಶೆಟ್ಟಿಯ ಮೊಬೈಲನ್ನು ಟ್ರ್ಯಾಪ್ ಮಾಡಲಾರಂಭಿಸಿದ್ದರು. ಆತನ ಮೊಬೈಲ್ ಫೋನಿನಿಂದ ಪದೇಪದೇ ಕರೆ ಹೋಗುತ್ತಿದ್ದದ್ದು ಅದೇ ನಿಲುವಾಗಿಲು ಊರಬೈಲಿನ ಸಂದೀಶನ ಫೋನಿಗೆ.

ಈ ಸಂದೀಶ ಕೊಪ್ಪದ ಭಜರಂಗದಳದ ಪಕ್ಕಾ ಕಾರ್ಯಕರ್ತ. ನಿಲುವಾಗಿಲಿನ ವಿಎಸ್‌ಎಸ್‌ಎನ್ ಸೊಸೈಟಿಯ ಸೆಕ್ರೆಟರಿ ಪುಟ್ಟಪ್ಪನ ಮಗನಾದ ಸಂದೀಶನಿಗೆ ಶುರುವಿನಿಂದಲೂ ಬಾಬುಶೆಟ್ಟಿಯ ಅಳಿಯ ಮನೀಶ್ ಶೆಟ್ಟಿಯೊಂದಿಗೆ ದೋಸ್ತಿಯಿತ್ತು. ಮುಂಬಯಿಯ ಲಿಂಕೂ ಇತ್ತು. ಮೂಡುಬಿದ್ರೆ ಕಡಂದಲೆಯ ಪಾತಕಿ ಉಮೇಶ್ ಶೆಟ್ಟಿಯ ಬಾಯಿ ಬಿಡಿಸಿದ ಇನ್ಸ್‌ಪೆಕ್ಟರ್ ಸಿದ್ಧಪ್ಪ ಮತ್ತು ನಾಗರಾಜ್ ತಂಡ ಕೊಪ್ಪಕ್ಕೆ ಬಂದಿಳಿಯುತ್ತಿದ್ದಂತೆ

ದಲಿತರು ಸಮಾಜದಲ್ಲಿ ದಿನೇದಿನೇ ಅನುಭವಿಸುತ್ತಿರುವ ಅವಮಾನ, ದೌರ್ಜನ್ಯ ಹಿಂಸೆಗಳನ್ನು ಕಂಡೂಕಾಣದಂತೆ ಇರುತ್ತಾನೆ. ಎಲ್ಲಕ್ಕಿಂತ ನಾಚಿಕೆಗೇಡಿನ ಸಂಗತಿ ಎಂದರೆ, ರಾಘವೇಶ್ವರ ಮಾಡಿದ ಸ್ವಾಮಿ ಗೋ ಸಮ್ಮೇಳನದಲ್ಲಿ ಊಟದ ಸಮಯದಲ್ಲಿ ಬ್ರಾಹ್ಮಣರಿಗೆ ಬೇರೆ ಪಂಕ್ತಿ ಮತ್ತು ದಲಿತರಿಗೆ ಬೇರೆ ಪಂಕ್ತಿ ಮಾಡಿ ಉಣಬಡಿಸಲಾಯಿತು. ಈ ರೀತಿಯಲ್ಲಿ ದೇಶದ ಸಂವಿಧಾನದ ಜಾತ್ಯತೀತ ಆಶಯವನ್ನೇ ಗಾಳಿಗೆ ತೂರಿ ಜಾತೀಯತೆಯನ್ನು ಮೆರೆಯಲಾಯಿತು. ಇಂತಹ ಒಂದು ಬ್ರಾಹ್ಮಣವಾದಿ ಸಮ್ಮೇಳನವನ್ನು ಯಶಸ್ವಿಗೊಳಿಸುವುದಕ್ಕಾಗಿ ದಲಿತನಾದ ಶ್ರೀಮಾನ್ ಶ್ರೀರಂಗಯ್ಯ ತನ್ನ ಸರ್ಕಾರಿ ಕೆಲಸವನ್ನು ಬಿಟ್ಟು ಮೂರು ದಿನಗಳ ಕಾಲ ಅಲ್ಲೇ ಠಿಕಾಣಿ ಹೂಡಿದ್ದ! ಈಗ ಹೇಳಿ ಶ್ರೀರಂಗಯ್ಯ ದಲಿತನೋ ಅಥವ ದಲಿತ ವಿರೋಧಿಯೋ?

ಢೋಂಗಿ ಪರಿಸರವಾದಿಗಳು

ರಾಘವೇಶ ಮಾಡುತ್ತಿದ್ದ ಪರಿಸರದ ಅತ್ಯಾಚಾರ ಹೊರಜಗತ್ತಿಗೆ ಕಾಣಬಾರದೆಂದು ಅದಕ್ಕೆ ಮರೆಯಾಗಿ ಕೇಸರಿ ಬಾವುಟವನ್ನು ಹಿಡಿಯುತ್ತಿರುವ ಕೆಲವು ಚೆಡ್ಡಿ ಪರಿಸರವಾದಿಗಳ ಹಿಂಡೇ ಇದೆ. ಈ ಹಿಂಡಿನ ಸಾರಥ್ಯ ವಹಿಸಿದವರೆಂದರೆ ಸದಾ ಪಂಚೆ ಮತ್ತು ಶಲ್ಯ ಹೊತ್ತುಕೊಂಡು ತಿರುಗಾಡುವ ಅನಂತ ಹೆಗಡೆ ಮತ್ತು ಬಿ.ಎಂ. ಕುಮಾರಸ್ವಾಮಿ. ಈ ಮಹಾನುಭಾವರು ಒಂದು ಹೆಜ್ಜೆ ಮುಂದೆ ಹೋಗಿ ರಾಘವೇಶನೇ ನಿಜವಾದ ಪರಿಸರ ಪ್ರೇಮಿ ಎಂದು ಬಡಬಡಾಯಿಸುತ್ತಾರೆ.

ಇವರಿಗೆ ರಾಘವೇಶ ಕಾಡನ್ನು ಕಡಿದಿರುವುದು, ಪರಿಸರವನ್ನು ನಾಶ ಮಾಡಿರುವುದು, ಫಲಭರಿತ ಅಡಿಕೆ ತೋಟಗಳನ್ನು ನೆಲಸಮ ಮಾಡಿರುವುದು ಯಾವುದೂ ಕಾಣುವುದಿಲ್ಲ. ಮಠ ಕೊಡುವ ಚಿಲ್ಲರೆ ದುಡ್ಡು ಮತ್ತು ಪ್ರಶಸ್ತಿ ಮಾತ್ರವಲ್ಲ ಅವರ ಚೆಡ್ಡಿ ಐಡಿಯಾಲಜಿ ಕೂಡ ಇಂಥ ಆತ್ಮವಂಚನೆಗೆ ಅವರನ್ನು ಪ್ರೇರೇಪಿಸುತ್ತಿದೆ.

ಜಾಮ್‌ದಾರ್ ಎಂಬ ಆಶಾಕಿರಣ

ಸಾಗರ ತಾಲ್ಲೂಕು ಶಾಸಕ ಗೋಪಾಲಕೃಷ್ಣ ಬೇಳೂರು ಮತ್ತು ಹೊಸನಗರ ಶಾಸಕ ಹರತಾಳು ಹಾಲಪ್ಪನಿಂದ ಹಿಡಿದು ಯಡ್ಡಿ ಈಶ್ವರಪ್ಪ ಶಂಕರಮೂರ್ತಿ ತನಕ ಎಲ್ಲ ರಾಜಕೀಯ ಪುಢಾರಿಗಳೂ, ಕಂದಾಯ ಮತ್ತು ಅರಣ್ಯ ಇಲಾಖೆಗಳೂ ಎಲ್ಲರೂ ಪಕ್ಷಬೇಧ ಮರೆತು ರಾಮಚಂದ್ರಾಪುರ ಮಠದ ದ್ವಾರಪಾಲಕರಂತೆ ಕಾರ್ಯನಿರ್ವಹಿಸುತ್ತಿರುವಾಗ ಚೆಡ್ಡಿ ರಾಘವೇಶ ಯಾರಿಗೆ ಕೇರ್ ಮಾಡುತ್ತಾನೆ ಹೇಳಿ. ಆದರೂ ಈ ಎಲ್ಲ ಕತ್ತಲೆಯ ನಡುವೆ ಜಾಮದಾರ್ ಎಂಬ ಕಂದಾಯ ಆಯುಕ್ತರು ಒಂದು ಸಣ್ಣ ಬೆಳಕಿನ ಕಿರಣದಂತೆ ಕಾಣುತ್ತಿದ್ದಾರೆ. ಈ ಹಿಂದೆ ಶಿವಮೊಗ್ಗೆಯಲ್ಲಿ ಡಿಸಿಯಾಗಿದ್ದ ಜಾಮದಾರ್ ಜನಪರ ಕೆಲಸಗಳಿಗಾಗಿ ಜನಪ್ರಿಯರಾದವರು. ಈಗ ಅದೇ ಜಿಲ್ಲೆಯಲ್ಲಿ ರಾಘವೇಶನೆಂಬ ಕ್ರಿಮಿ ಸೇರಿಕೊಂಡು ಒಳಗೊಳಗೇ ಕೊರೆಯುತ್ತಿರುವುದನ್ನು ಕಂಡು ಅವರೂ ಸಹಿಸುತ್ತಿಲ್ಲ. ರಾಘವೇಶನ ವಿರುದ್ಧ ಕಾನೂನು ಕ್ರಮ ಜರುಗಿಸಲು ಅವರು ತಯಾರಾಗಿ ನಿಂತಿದ್ದಾರೆ. ಆದರೆ, ಸುತ್ತಲೂ ರಾಘವೇಶನ ಸೇವಕರೇ ತುಂಬಿಕೊಂಡಿರುವಾಗ ಅವರೊಬ್ಬರೇ ಏನು ಮಾಡಲಾದೀತು?

- ವರದಿಗಾರ


ಯಡ್ಡಿ-ರಾಜಶೇಖರನ್ ರಹಸ್ಯ ಭೇಟಿ

ಬಿಜೆಪಿಗೆ ಅಧಿಕಾರ ಹಸ್ತಾಂತರದ ಅನಿಶ್ಚಯತೆ ನಡುವೆಯೇ ಮುಖ್ಯಮಂತ್ರಿ ಹುದ್ದೆಯ ಸಮಾನ ಆಕಾಂಕ್ಷಿಗಳಾದ ಇಬ್ಬರು ಲಿಂಗಾಯತ ಮುಖಂಡರ ರಹಸ್ಯ ಭೇಟಿಯೊಂದು ನಿನ್ನೆ ಶನಿವಾರ ರಾತ್ರಿ ನಡೆದಿದೆ.



ಬಿಜೆಪಿಯ ಯಡಿಯೂರಪ್ಪ ಮನೆಯಲ್ಲಿ ಕಾಂಗ್ರೆಸ್‌ನ ಎಂ.ವಿ. ರಾಜಶೇಖರನ್ ಶನಿವಾರ ರಾತ್ರಿ 10 ಗಂಟೆಯಿಂದ 11 ರವರೆಗೂ ಕೂತು ಮಾತಾಡಿ ಕೊನೆಗೆ "ನೀವು ಸಿಎಂ ಆಗುವುದಿಲ್ಲ" ಎಂದು ನೇರವಾಗಿ ಹೇಳಿ ಬಂದಿದ್ದಾರೆ. ಈಗಿನ ಸಂಕೀರ್ಣ ರಾಜಕೀಯ ಸನ್ನಿವೇಶದಲ್ಲಿ ಇವರಿಬ್ಬರ ಭೇಟಿ ನಾನಾ ಅರ್ಥಗಳನ್ನು ಹೊರಡಿಸುತ್ತಿದೆ. ರಾಜಶೇಖರನ್-ಯಡ್ಡಿಯದು ಕೇವಲ ಸೌಜನ್ಯದ ಭೇಟಿ ಅಷ್ಟೇ. ಆದರೆ ಆ ಭೇಟಿಯ ಇನ್ನೊಂದು ಒಳಾರ್ಥ ಏನೆಂದರೆ "ಯಡಿಯೂರಪ್ಪನವರೇ, ನಾನು ನಿಮಗೆ ಸಿಎಂ ಹುದ್ದೆ ತಪ್ಪಿಸಿದೆ ಅಂತ ಮುಂದೆ ಬೇಸರ ಮಾಡಿಕೋಬಾರದು. ಇದು ರಾಜಕೀಯ ಸಂದರ್ಭ ಅಷ್ಟೇ, ವೈಯಕ್ತಿಕ ಅಲ್ಲ" ಎಂದು ರಾಜಶೇಖರನ್ ಹೇಳಿ ಬಂದಿದ್ದಾರೆ.

ಅಂದರೆ ಬಿಜೆಪಿಗೆ ಅಧಿಕಾರ ಹಸ್ತಾಂತರವೆಂಬುದು ಅಷ್ಟು ಗ್ಯಾರಂಟಿ ಇಲ್ಲ ಎಂಬ ಜನಜನಿತ ಅನುಮಾನಕ್ಕೆ ಇವರ ಭೇಟಿಯೂ ಸಾಕ್ಷಿಯಾಗಿದೆ. ಹಾಗೆ ಹೇಳಬೇಕೆಂದರೆ ಕರ್ನಾಟಕದಲ್ಲಿ ಮುಂದಿನ ಮೈತ್ರಿ ಸರ್ಕಾರ ದಳ-ಕಾಂಗ್ರೆಸ್ ಅಥವಾ ದಳ-ಬಿಜೆಪಿಯದ್ದೋ ಎಂಬ ಗೊಂದಲ ಇನ್ನು ಮುಂದುವರೆದಿದೆ. ಅತ್ತ ಕಾಂಗ್ರೆಸ್ ಹೈಕಮಾಂಡ್ ಅಮೆರಿಕಾ ಜೊತೆಗಿನ ಅಣುಒಪ್ಪಂದದ ವಿವಾದದಲ್ಲಿ ಸರ್ಕಾರ ಉರುಳಿದರೆ ಗತಿ ಏನೆಂದು ಇಷ್ಟು ದಿನ ಗಡಿಬಿಡಿಯಲ್ಲಿತ್ತು. ಆದರೀಗ ಸಿಪಿಎಂ ತಾನು ಅಮೆರಿಕಾ ವಿರುದ್ಧ ನಿಲುವು ತಳೆಯಲಾರೆ ಎಂಬಂತೆ ರಾಜಿ ಸಂದೇಶಗಳನ್ನು ನೀಡಿದೆ. ಕಾಂಗ್ರೆಸ್‌ಗೀಗ ನಿರಾಳ. ಕರ್ನಾಟಕದ ಬಗ್ಗೆ ಯೋಚಿಸಲೂ ಈಗ ಸಮಯವಕಾಶ ಸಿಗಲಿದೆ. ಈ ಮಧ್ಯೆ ರಾಜ್ಯ ದಳ, ಕಾಂಗ್ರೆಸ್ ಹಾಗೂ ಬಿಜೆಪಿಗಳಲ್ಲಂತೂ ರಾಜಕೀಯ ಚಟುವಟಿಕೆಗಳು ನಡೆದೇ ಇವೆ.



ಅನಿತಕ್ಕನ ರಾಯಭಾರ

ಮೊನ್ನೆ ದಿಢೀರೆಂದು ಸಾರಿಗೆ ಕಮೀಷನರ್ ನಾರಾಯಣಗೌಡನನ್ನು ಕುಮಾರಸ್ವಾಮಿ ವರ್ಗಾ ಮಾಡಿ ಓಡಿಸಿದ್ದಾರೆ. ಸಾರಿಗೆ ಸಚಿವ ಚೆಲುವರಾಯಸ್ವಾಮಿಯನ್ನು ಕಂಟ್ರೋಲಿನಲ್ಲಿಟ್ಟುಕೊಳ್ಳಲೆಂದೇ ಗೌಡರ ಫ್ಯಾಮಿಲಿ ತಮ್ಮ ಭಂಟ ನಾರಾಯಣಗೌಡನನ್ನು ಇಲಾಖಾ ಕಮಿಷನರ್ ಹುದ್ದೆಗೆ ತಂದು ಕೂರಿಸಿತ್ತು. ಚೆಲುವಣ್ಣನಿಗೆ ಇದರಿಂದ ಅಸಮಾಧಾನವಾಗಿದ್ದರೂ ಹೇಗೋ ಸಹಿಸಿಕೊಂಡಿದ್ದರು. ಅಧಿಕಾರ ಹಸ್ತಾಂತರದ ದಿನ ಹತ್ತಿರಾಗುತ್ತಿದ್ದಂತೆ ಜೆಡಿಎಸ್‌ನೊಳಗೇ ದೇವೇಗೌಡ-ಕುಮಾರಸ್ವಾಮಿ ವಿರುದ್ಧ ಅಸಮಾಧಾನ ಬೆಳೆಸಿಕೊಂಡಿರುವವರನ್ನು ಸಮಾಧಾನ ಪಡಿಸುವ ಕೆಲಸ ಈಗ ಶುರುವಾಗಿದೆ.



ನಾರಾಯಣಗೌಡನ ವರ್ಗಾ ಅದರ ಒಂದು ಭಾಗ ಅಷ್ಟೇ. ಸ್ವತಃ ಅನಿತಾ ಕುಮಾರಸ್ವಾಮಿ ಚೆಲುವರಾಯಸ್ವಾಮಿಯನ್ನು ಕರೆದು "ಈಗ ನಮ್ಮ ಜೊತೆ ನಿಲ್ಲಿ ಮುಂದೆ ಅನುಕೂಲ ಮಾಡಿ ಕೊಡೋಣವಂತೆ" ಎಂದು ಆಮಿಷ ಒಡ್ಡಿದ್ದಾರೆ. ಚೆಲುವಣ್ಣನಿಗೆ ಖುಷಿ ಮಾಡಲು ನಾರಾಯಣಗೌಡನನ್ನು ವರ್ಗ ಮಾಡಲಾಗಿದೆ.

ಅನಿತಕ್ಕ ಅದೇ ರೀತಿ ಚನ್ನಿಗಪ್ಪನಿಗೂ ಸಮಾಧಾನ ಮಾಡಿ ಕಳುಹಿಸಿದ್ದಾರೆ. ಜೊತೆಗೆ ಕುಮಾರಸ್ವಾಮಿ ತಾವು ಸಿಎಂಗಿರಿ ಬಿಡುವ ಹಂತದಲ್ಲೇ ಖಾಲಿ ಬಿದ್ದಿರುವ ಕೆಲ ನಿಗಮ ಮಂಡಳಿಗಳಿಗೆ ನೇಮಕಾತಿ ಮಾಡಲು ಹೊರಟಿದ್ದಾರೆ. ಪಾರ್ಟಿ ಶಾಸಕರು ಹಾಗೂ ಕಾರ್ಯಕರ್ತರನ್ನು ಮೊದಲು ಬಗಿ ಮಾಡಿಕೊಳ್ಳಬೇಕೆಂಬ ಗೌಡರ ನಿಲುವಿನಲ್ಲೇ ಮುಂದೆ ಏನೋ ಸಂಭವಿಸಲಿದೆ ಎನ್ನುವುದು ಗೊತ್ತಾಗುತ್ತಿದೆ. ಏಕಕಾಲದಲ್ಲಿ ನಾಲ್ಕೈದು ಗೇಮ್‌ಪ್ಲಾನ್ ನಡೆಸುತ್ತಿರುವ ಗೌಡರಿಗೆ ಯಾವ ಕಾರಣಕ್ಕೂ ಬಿಜೆಪಿಗೆ ಅಧಿಕಾರ ಕೊಡಕೂಡದೆಂಬ ಹಠ ಬಂದಿದೆ. ಇದು ದ್ವೇಷ, ಅಸೂಯೆ ಕಾರಣಕ್ಕಲ್ಲ. ಬದಲಾಗಿ ಬಿಜೆಪಿ ಬಗೆಗಿನ ಅಪನಂಬಿಕೆ ಹಾಗೂ ಜೆಡಿಎಸ್ ಕರಗಿ ಹೋದೀತೆಂಬ ಭೀತಿಗೆ ಅಷ್ಟೆ.

ಗೌಡರ ಸದ್ಯದ ಪ್ಲಾನ್ ಪ್ರಕಾರ ಅಕ್ಟೋಬರ್ ಮೂರಕ್ಕೆ ಮೊದಲೇ ಅಂದರೆ ಸೆಪ್ಟೆಂಬರ್ ಮಧ್ಯದಲ್ಲೇ ಕುಮಾರಸ್ವಾಮಿ ರಾಜೀನಾಮೆ ಕೊಟ್ಟು ಯಡ್ಡಿ ಸಿಎಂ ಆಗಲೆಂದು ಹೇಳುತ್ತಾರೆ. ತಕ್ಷಣ ಒಂದು 30-40 ಜೆಡಿಎಸ್ ಶಾಸಕರು 'ನಮಗೆ ಇದು ಒಪ್ಪಿಗೆ ಇಲ್ಲ' ಎಂದು ದೇವೇಗೌಡರ ಕಡೆ ಹೋಗುತ್ತಾರೆ. ಉಳಿದ ಒಂದಿಪ್ಪತ್ತು ಶಾಸಕರು ಕುಮಾರಸ್ವಾಮಿ ಜೊತೆ ನಿಲ್ಲುತ್ತಾರೆ. ಕೊನೆಗೆ ಯಾರು ಎಲ್ಲೇ ನಿಂತರೂ ಯಡ್ಡಿ ಮಾತ್ರ ಸಿಎಂ ಕುರ್ಚಿಲಿ ಕೂಡಲಾಗದಂತೆ ಮಾಡಿ ಅತಂತ್ರ ಪರಿಸ್ಥಿತಿ ಸೃಷ್ಟಿಸುವುದೇ ಗೌಡರ ಹುನ್ನಾರ. ಆಮೇಲೆ ಮಧ್ಯಂತರ ಎಲೆಕ್ಷನ್ ಬಂದರೂ ಬರಲಿ ಎಂಬ ಭಂಡಧೈರ್ಯ ಗೌಡರಿಗಿದೆ. ಜೆಡಿಎಸ್ ಉಳಿಸಿಕೊಳ್ಳಲು ಗೌಡರಿಗೆ ಇದೊಂದೇ ಸರಿಯಾದ ಹಾದಿ ಅನ್ನಿಸಿರಬಹುದು.

ಕಾಂಗ್ರೈ ಕಳವಳ

ಒಬ್ಬ ಡಿ.ಕೆ. ಶಿವಕುಮಾರ್ ಇರದಿದ್ದರೆ ಇಷ್ಟು ಹೊತ್ತಿಗೆ ಕಾಂಗ್ರೈ-ದಳ ಮರುಮೈತ್ರಿ ಸಾಧ್ಯತೆಗೆ ಇನ್ನೊಂದಿಷ್ಟು ತಳಹದಿ ಬಿದ್ದಿರುತ್ತಿತ್ತೇನೋ. ಆದರೆ ಯಾವಾಗ ಡಿಕೆ 32 ಶಾಸಕರನ್ನು ಸೋನಿಯಾ ಹತ್ತಿರ ಕರೆದುಕೊಂಡು ಹೋಗಿ ಆಕ್ಷೇಪಿಸಿ ಬಂದರೋ ಹೈಕಮಾಂಡ್ ಕೂಡ ಯೋಚಿಸಿ ತೀರ್ಮಾನಿಸೋಣ ಎಂಬ ನಿಲುವಿಗೆ ಬಂದಿದೆ. ಅವರಿಗೀಗ ತಮ್ಮ ಮನೆಯೊಳಗೇ ಅಟಂಬಾಂಬ್ ಸಿಡಿದಂಥ ಬಿಕ್ಕಟ್ಟು ಬಂದು ನಿಂತಿರುವಾಗ ಕರ್ನಾಟಕದ ವಿಚಾರ ಮೊದಲ ಆದ್ಯತೆಯಾಗಿಲ್ಲ. ಈ ಕೂಸ್ನ ವೇಳೆಯನ್ನು ಸದುಪಯೋಗ ಪಡಿಸಿಕೊಳ್ಳುವ ಆತುರದಲ್ಲಿರುವ ರಾಜಶೇಖರನ್ ಓಡಾಟ ದಿನೇದಿನೇ ಚುರುಕಾಗುತ್ತಿದೆ. ಸಿದ್ಧರಾಮಯ್ಯ, ದೇವೇಗೌಡ ಎಲ್ಲರನ್ನೂ ಹೋಗಿ ಭೇಟಿಯಾಗುತ್ತಿರುವ ರಾಜಶೇಖರನ್ ಅಖಿಲ ಭಾರತ ವೀರಶೈವ ಮಹಾಸಭದವರ ಕೈಲೂ ಸೋನಿಯಾಗೆ ಪತ್ರ ಬರೆಸಿದ್ದಾರೆ.

'ಯಡ್ಡಿಗೆ ಸಿಎಂಗಿರಿ ತಪ್ಪಿದಾಕ್ಷಣ ರಾಜ್ಯದ ಲಿಂಗಾಯತರು ಕಾಂಗ್ರೆಸ್ ಬಗ್ಗೆ ಬೇಸರ ಪಡಬಹುದು. ಆದ್ದರಿಂದ ಅದೇ ಲಿಂಗಾಯತ ಕೋಮಿನ ರಾಜಶೇಖರನ್ ಸಿಎಂ ಆಗುವುದೇ ಆದರೆ ನಮ್ಮ ಅಡ್ಡಿ ಇಲ್ಲ' ಎಂಬರ್ಥದ ಪತ್ರ ಅದು.

ಈ ಮಧ್ಯೆ ಗೌಡರೂ ಸುಮ್ಮನೆ ಕುಳಿತಿಲ್ಲ. ಅನಿತಾ ಕುಮಾರಸ್ವಾಮಿ ಮೊನ್ನೆ ಡಿಕೆ ಮನೆಗೇ ಫೋನ್ ಮಾಡಿ "ಶಿವಣ್ಣರಿಗೆ ಫೋನ್ ಕೊಡಿ" ಅಂತ ಕೇಳಿದರಂತೆ. ಫೋನ್ ರಿಸೀವ್ ಮಾಡಿದ ಡಿಕೆ ಪತ್ನಿ ಉಷಾರವರು "ಯಾರು, ಏನು, ಎತ್ತ" ಎಂದು ಕೇಳಿದಾಗ "ಬೇಕಿದ್ದರೆ ಶಿವಣ್ಣ (ಡಿಕೆ) ಹೋಂ ಮಿನಿಸ್ಟರ್ ಆಗಲಿ" ಎಂದಿದ್ದಾರೆ ಅನಿತಾ. ಅಂದರೆ ಕಾಂಗ್ರೆಸ್ ದಳ ಮರುಮೈತ್ರಿಗೆ ಡಿಕೆ ಅಡ್ಡಬಾರದಿರಲಿ ಎಂಬುದೇ ಗೌಡ ಫ್ಯಾಮಿಲಿಯ ಇರಾದೆ. ಆದರೆ ಎಂ.ಪಿ. ಪ್ರಕಾಶ್ ಸ್ಥಿತಿ ತನಗೂ ಬಂದರೆ ಗತಿ ಏನೆಂದು ಡಿಕೆ ಆ ಆಫರ್ ತಿರಸ್ಕರಿಸಿದ್ದಾರೆ.

ಯಡ್ಡಿ ಶೇಮ್, ಶೇಮ್

ಅಧಿಕಾರದ ಆಸೆಗೆ ಬಿದ್ದಿರುವ ಯಡಿಯೂರಪ್ಪನಿಗೆ ಒಂಚೂರಾದರೂ ಸ್ವಾಭಿಮಾನ ಇದ್ದಿದ್ದರೆ ಇಷ್ಟು ಹೊತ್ತಿಗೆ "ನಡೀರಿ, ಬೇಕಾದ್ರೆ ಎಲೆಕ್ಷನ್‌ಗೇ ಹೋಗೋಣ" ಅನ್ನಬೇಕಿತ್ತು. ಆದರೆ ಕೈಯಳತೆಗೆ ಬಂದಿರುವ ಸಿಎಂ ಹುದ್ದೆ ಬಾಯಿಗೆ ಬಾರದೇ ಹೋದರೆ ಈ ಜನ್ಮದಲ್ಲಿ ಇಂಥ ಅವಕಾಶ ಸಿಗಲಾರದೆಂದು ಯಡ್ಡಿ ಎಲ್ಲಾ ಅವಮಾನಗಳನ್ನೂ ಸಹಿಸಿಕೊಳ್ಳುತ್ತಿದ್ದಾರೆ. ಇದು ಒಂದು ಥರ ರ್‍ಯಾಗಿಂಗ್‌ಗೆ ಒಳಗಾದಂತೆ. ಜೆಡಿಎಸ್‌ನ ಪೋರ್ಕಿ ಲೀಡರ್‌ಗಳೆಲ್ಲಾ ದಿನಕ್ಕೊಂದು ಅವಹೇಳನಕಾರಿ ಹೇಳಿಕೆ ಕೊಡುತ್ತಾ ಯಡ್ಡಿಯ ಶರ್ಟು ಪ್ಯಾಂಟನ್ನೆಲ್ಲಾ ಕಳಚಿ ಬಿಸಾಡುತ್ತಿದ್ದರೆ ಯಡ್ಡಿ ಮಾತ್ರ ತನಗೇನೂ ಆಗಿಲ್ಲವೆಂಬಂತೆ ಅಧಿಕಾರಕ್ಕಾಗಿ ಕಾಯುತ್ತಲೇ ಇದ್ದಾರೆ. ಸ್ವತಃ ರಾಜಶೇಖರನ್ ಯಡ್ಡಿ ಮನೆಗೇ ಹೋಗಿ "ನೀವು ಸಿಎಂ ಆಗಲ್ಲ" ಅಂದ ಮೇಲೂ ಯಡ್ಡಿ ಭ್ರಮೆ ಇನ್ನು ಹಾಗೇ ಇದೆ. ಅವಮಾನ ಆಗುತ್ತಲೇ ಇದೆ.

ಶೇಮ್... ಶೇಮ್ ಯಡ್ಡಿ ಶೇಮ್.

-ಈಶ

ಮನೀಶ್ ಶೆಟ್ಟಿ ಎಸ್ಕೇಪಾಗಿದ್ದ. ಆದರೇನಂತೆ ನಿಲುವಾಗಿಲಿನ ನಂದೀಶ್ ಸಿಕ್ಕುಬಿದ್ದಿದ್ದ.

ಈ ನಂದೀಶ ಕೊಟ್ಟ ಕ್ಲೂ ಕೂಡ ವಿಚಿತ್ರವಾಗಿತ್ತು, ಅವಳು ಆಗಷ್ಟೇ ಕೊಪ್ಪಕ್ಕೆ ಕಾಲಿಟ್ಟ ಹೇಮಾಶೆಟ್ಟಿ!

ಇವಳು ತೆಂಗಿನಮನೆ ಶ್ಯಾಮ್‌ಶೆಟ್ಟಿಯ ಮಗ ಭಾಸ್ಕರ್ ಶೆಟ್ಟಿ ಎಂಬಾತನ ಪತ್ನಿ. ತನ್ನ ಅಣ್ಣ ಪ್ರಭಾಕರ್ ಶೆಟ್ಟಿಯ ಜೊತೆ ಮುಂಬಯಿಯಲ್ಲಿ ಫುಟ್‌ಪಾತ್ ಕ್ಯಾಂಟೀನ್ ನಡೆಸಿಕೊಂಡಿದ್ದ ಭಾಸ್ಕರ್ ಶೆಟ್ಟಿ ಬ್ರಹ್ಮಾವರದ ಹೇಮಾಶೆಟ್ಟಿಯನ್ನು ಮದುವೆಯಾಗಿದ್ದೇ ಈಕೆಯ ಅಣ್ಣತಮ್ಮಂದಿರ ಜೊತೆ ಸೇರಿ ರಾಬರಿಗಿಳಿದ. ಹೇಮಾಳ ಅಣ್ಣ ಗೋಪಾಲ್‌ಶೆಟ್ಟಿ ಮತ್ತು ನಿಲುವಾಗಿಲಿನ ಹಳೇ ಪಾತಕಿ ಬಾಬುಶೆಟ್ಟಿ ಹತ್ತಿರದ ನೆಂಟರು. ಸಾಲದ್ದಕ್ಕೆ ಬಾಬುಶೆಟ್ಟಿಯ ಅಳಿಯ ಮನೀಶ್‌ಶೆಟ್ಟಿ ಮುಂಬಯಿಯ ಖತರ್‌ನಾಕ್ ಕ್ರಿಮಿ.

ಚಿಮ್ಮನೂರು ದರೋಡೆಗೂ ಮುನ್ನ ಪಾರಕ್ಕೆ ಮೊದಲೇ ಕೊಪ್ಪದ ವಿಠಲ್ ಭಂಡಾರಿ ಎಂಬಾತನ ಮನೆಗೆ ಬಾಡಿಗೆದಾರಳಾಗಿ ಬಂದ ಹೇಮಾಶೆಟ್ಟಿಗೆ ಬಾಬುಶೆಟ್ಟಿಯೇ ಆ ಮನೆ ಕೊಡಿಸಿದ್ದ. ಅದು ಚಿಕ್ಕದಾಯಿತೆಂದಾಗ ಆಕೆಯ ಗಂಡ ಭಾಸ್ಕರ ಶೆಟ್ಟಿಯ ಅಕ್ಕನ ಮಗ ಸುರೇಶನೇ ಕೊಪ್ಪದ ಫಿಲಿಪ್ಸ್ ಕುಟಿನ್ಹೋ ಎಂಬಾತನ ಸುಸಜ್ಜಿತ ಮನೆಯನ್ನು ಕೊಡಿಸಿಕೊಟ್ಟ. ಈ ಹೊತ್ತಿಗಾಗಲೇ ಮನೀಶ್ ಶೆಟ್ಟಿ ಚಿಮ್ಮನೂರು ಜ್ಯುವೆಲ್ಲರ್ಸ್ ದರೋಡೆಯಲ್ಲಿ ತಾನು ಬಳಸಿದ್ದ ಎರಡು ವಿದೇಶಿ ರಿವಾಲ್ವರ್, ಹತ್ತು ಗುಂಡುಗಳಿದ್ದ ಎರಡು ಮ್ಯಾಗಜಿನ್ ಮತ್ತು 40 ರಷ್ಟು ಕಾರಿನ ಕೀಗಳನ್ನು ಅಡಗಿಸಿ ಇಡುವ ಹೊಣೆಯನ್ನು ಭಜರಂಗಿ ನಂದೀಶನಿಗೆ ವಹಿಸಿಕೊಟ್ಟಿದ್ದ.

ನಂದೀಶ ಅದನ್ನು ತನ್ನ ಊರಬೈಲು ಗದ್ದೆಯ ಬೋಗಿಮರ ಒಂದಕ್ಕೆ ಸೀಮೆಎಣ್ಣೆ ಕ್ಯಾನ್ ಒಂದರ ಒಳಗಿಟ್ಟು ಕಟ್ಟಿ ಬಂದಿದ್ದ. ಆಗಸ್ಟ್ 20 ರ ಸೋಮವಾರ ರಾತ್ರಿ ಇನ್ಸ್‌ಪೆಕ್ಟರ್ ನಾಗರಾಜ್ ತಂಡ ನಿಲುವಾಗಿಲಿನ ನಂದೀಶನ ಮನೆಗೆ ನುಗ್ಗಿದೆ. ನಂದೀಶ ಕೊಪ್ಪದ ಹೇಮಾಶೆಟ್ಟಿಯ ಮನೆ ತೋರಿಸಿದ್ದಾನೆ. ಅದೇ ರಾತ್ರಿ ಹೇಮಾಶೆಟ್ಟಿ, ಆಕೆಯ ಗಂಡ ಭಾಸ್ಕರ್ ಶೆಟ್ಟಿ ಸಿಕ್ಕಿಬಿದ್ದರಾದರೂ ಹೇಮಾಳ ಅಣ್ಣ ಮುಂಬೈ ಪಾತಕಿ ಗೋಪಾಲಶೆಟ್ಟಿ ಮನೆಯ ಶೀಟನ್ನೇ ಕಿತ್ತು ಇಪ್ಪತ್ತು ಅಡಿಯ ಮಹಡಿಯಿಂದ ಹಾರಿ ಎಸ್ಕೇಪಾಗಿ ಬಿಟ್ಟ.

ಹೇಮಾಳ ಮನೆಯನ್ನು ಜಪ್ತಿ ಮಾಡುತ್ತಿದ್ದಂತೆ ಕಸದ ರಾಶಿಯಲ್ಲಿ ಪೇಪರ್‌ನಲ್ಲಿ ಸುತ್ತಿ ಬೀಸಾಕಿದ್ದ ಚಿನ್ನಾಭರಣಗಳು ಸಿಕ್ಕವು!

ಅಲ್ಲಿಗೆ ಕಡಂದಲೆ ಉಮೇಶ್‌ಶೆಟ್ಟಿ, ನಿಲುವಾಗಿಲಿನ ಭಜರಂಗಿ ನಂದೀಶ, ಮುಂಬೈ ಪಾತಕಿ ಭಾಸ್ಕರ್‌ಶೆಟ್ಟಿ, ಆತನ ಪತ್ನಿ ಹೇಮಾಶೆಟ್ಟಿ ಪೊಲೀಸರ ಬಲೆಗೆ ಬಿದ್ದಾಗಿತ್ತು, ಸೂತ್ರಧಾರ ಮನೀಶ್‌ಶೆಟ್ಟಿ ಎಸ್ಕೇಪಾಗಿದ್ದ.

ಯಾವ ಬೆಂಗಳೂರಿನ ಜನ ಚಿಮ್ಮನೂರು ದರೋಡೆಯನ್ನು ಕನ್ನಡಿಗರ್‍ಯಾರೂ ಮಾಡಲು ಸಾಧ್ಯವೇ ಇಲ್ಲ ಎಂದು ಭಾವಿಸಿದ್ದರೋ ಅದು ಸುಳ್ಳಾಗಿತ್ತು!

ಆಘಾತಕಾರಿ ಸಂಗತಿಯೇನೆಂದರೆ ಮನೀಶ್‌ಶೆಟ್ಟಿ ಗ್ಯಾಂಗ್ 2005 ರಲ್ಲಿ ಹೈದರಾಬಾದಿನಲ್ಲಿ 18 ಕೆ.ಜಿ. ಚಿನ್ನವನ್ನು ದರೋಡೆ ಮಾಡಿತ್ತು. ಬಹುಶಃ ಬಂಟ್ವಾಳದ ಬಾಳಿಗಾರ್ ಜ್ಯುವೆಲ್ಲರ್ಸ್ ಮಳಿಗೆಗೆ ನುಗ್ಗಿ 40 ಲಕ್ಷದ ಚಿನ್ನಾಭರಣಗಳನ್ನು ದೋಚಿದ್ದರಲ್ಲೂ ಇದೇ ಗ್ಯಾಂಗಿನ ಕೈವಾಡವಿತ್ತೆ?

ಇದು ಪೊಲೀಸರನ್ನು ಕಾಡುತ್ತಿರುವ ಪ್ರಶ್ನೆ. ಕರಾವಳಿಯಿಂದ ಪೂನಾ-ಮುಂಬಯಿಯತನಕ ವ್ಯಾಪಿಸಿರುವ ಮನೀಶ್‌ಶೆಟ್ಟಿಯ ಪಾತಕ ಲಿಂಕುಗಳನ್ನು ಭೇದಿಸುವುದು ಸುಲಭವೇನಲ್ಲ. ಬೆಂಗಳೂರಿನ ಹೊಸೂರು ರಸ್ತೆಯ ಬೇಗೂರಿನಲ್ಲಿ ಮನೆ ಮಾಡಿಕೊಂಡಿದ್ದೇ ತಿಂಗಳಾನುಗಟ್ಟಲೇ ದರೋಡೆಗೆ ರಿಹರ್ಸಲ್ ನಡೆಸಿದ್ದು ಸದರಿ ತಂಡದ ಮತ್ತೊಂದು ವಿಶಿಷ್ಟತೆಗೆ ಸಾಕ್ಷಿ.

ಇನ್ನೂ ವಿಚಿತ್ರವೆಂದರೆ ಮನೀಶ್‌ಶೆಟ್ಟಿ, ಉಮೇಶ್ ಶೆಟ್ಟಿ, ಗೋಪಾಲ್‌ಶೆಟ್ಟಿ ಸೇರಿ ಭಜರಂಗಿಗಳು ಹಮ್ಮಿಕೊಂಡಿದ್ದ ನಾಗಮಂಡಲ ಪೂಜೆಗೆ ದೇಣಿಗೆ ಕೊಟ್ಟಿದ್ದಾರೆ. ಶೃಂಗೇರಿ- ಕೊಪ್ಪ ಪಾಸಲೆಯ ದೇವಸ್ಥಾನಗಳಿಗೆ ಕಾಣಿಕೆ ಸಲ್ಲಿಸಿದ್ದಾರೆ. ಇವರ ಜೊತೆಗೆ ಸಹಜವಾಗೇ ಭಜರಂಗಿ ನಂದೀಶ ಕೈಜೋಡಿಸಿದ್ದಾನೆ. ಅಷ್ಟಕ್ಕೂ ಎಸ್ಕೇಪಾದ ಮನೀಶ್‌ಶೆಟ್ಟಿ ಮತ್ತು ಗೋಪಾಲಶೆಟ್ಟಿ ಸಿಕ್ಕರೆ ತಾನೆ? ಅವರಿಬ್ಬರಿಗೂ ಮುಂಬೈ ಸಲೀಸು, ಹೈದ್ರಾಬಾದ್ ಗೊತ್ತು, ಭಜರಂಗದಳವೂ ಗೊತ್ತು, ಪ್ರಶ್ನೆಯೆಂದರೆ ಅವರಿಗೆ ರಿವಾಲ್ವರ್ ಸಿಕ್ಕಿದ್ದಾದರೂ ಹೇಗೆ? ಅದನ್ನು ಕೇವಲ ದರೋಡೆಗಷ್ಟೇ ಸೀಮಿತಗೊಳಿಸಿದ್ದರಾ ಅಥವಾ ನಕ್ಸಲೀಯರ ವಿರುದ್ಧ ಖಾಸಗಿ ಹಂತಕ ಪಡೆ ಹುಟ್ಟುಹಾಕಲೆಂದು ಸಂಗ್ರಹಿಸಲಾಗಿತ್ತಾ? ಉತ್ತರಿಸಬೇಕಾದವರು ಪೊಲೀಸರು!

-ರಾ. ಸೋಮನಾಥ್

ಧರ್ಮ ರಕ್ಷಣೆಗಾಗಿ ದಂಡ?

ಮಂಗಳೂರಿನ ಭಜರಂಗದಳದ ನಾಯಕ ರಾಜು ಕಲಾಲ ಅಸಹ್ಯದ ಸೆಕ್ಸ್ ನಡೆಸಿ ಸಿಕ್ಕುಬಿದ್ದ. ಉಡುಪಿಯ ಶ್ರೀರಾಮಸೇನೆಯ ಕಾರ್ಯಕರ್ತ ಉಮೇಶ್ ಶೆಟ್ಟಿ ಒಂಭತ್ತನೇ ತರಗತಿಯ ಬಾಲಕಿಯೊಬ್ಬಳನ್ನು ಮಂಗಳೂರಿನ ಕೀರ್ತಿ ಲಾಡ್ಜಿಗೆ ಕರೆದೊಯ್ದು ರೇಪ್ ಮಾಡಿದ. ಈ ಪೈಶಾಚಿಕ ಕೃತ್ಯಕ್ಕೆ ಶ್ರೀರಾಮ ಸೇನೆಯ ರಾಜ್ಯ ಸಂಚಾಲಕ ಜಿತೇಶನೇ ಜೊತೆ ನಿಂತು ನೆರವಾಗಿದ್ದ. ತಮಾಷೆಯೆಂದರೆ ಮಂಗಳೂರಿನ ಭಜರಂಗಿ ರಾಜು ಕಲಾಲನನ್ನು ಪೊಲೀಸರಿಗೆ ಹಿಡಿದು ಕೊಟ್ಟಿದ್ದು ಶ್ರೀರಾಮಸೇನೆಯ ಯೋಧರಾದರೆ, ಈಗ ಅವರೇ ಬಾಲಕಿಯ ರೇಪ್‌ನಲ್ಲಿ ಪಾತ್ರಧಾರಿಗಳಾಗಿದ್ದಾರೆ.

ಇನ್ನು ನಕ್ಸಲೀಯರ ಹೆಸರಲ್ಲಿ ಆಗುಂಬೆಯಲ್ಲಿ ಸರಣಿ ದರೋಡೆ ನಡೆಸಿದ ಬಿಜೆಪಿ ನಾಯಕ ಶಿವರಾಮಾಚಾರಿಯ ಗ್ಯಾಂಗನ್ನು ಪೊಲೀಸರೇ ಹಿಡಿದು ಜೈಲಿಗೆ ಹಾಕಿದ್ದಾರೆ. ಹಿಂದೆ ಉತ್ತರ ಕನ್ನಡ ಸಿದ್ದಾಪುರದಲ್ಲಿ ಭಜರಂಗದಳದವರೇ ದಾಳಿ ಮಾಡಲು ಹೋಗಿ ನಿರ್ಗತಿಕ ಹಿಂದೂಗಳನ್ನು ಕೊಂದಿದ್ದರು. ಇದು ಭಜರಂಗಿ, ಶ್ರೀರಾಮಸೇನೆಯ ಹಿಂದೂವೀರರ ಧರ್ಮ ರಕ್ಷಣೆಯ ಕೆಲ ಸ್ಯಾಂಪಲ್ಲುಗಳಷ್ಟೇ.

ಹುಡುಗಿಯರ ಮಾನ, ಬಡವರ ಪ್ರಾಣ ಮತ್ತು ಕೂಡಿಟ್ಟ ಚಿನ್ನಾಭರಣ ಇತ್ಯಾದಿ ಕಳೆದುಕೊಂಡವರೂ ಈ ಹಿಂದೂವೀರರಿಗಾಗಿ ಹಿಂದೂಗಳು ತ್ಯಾಗ ಮಾಡುವುದು ಹೇಗೆ? ಧರ್ಮ ರಕ್ಷಣೆಗಾಗಿ ದಂಡ ಕಟ್ಟಬೇಕಲ್ಲವೇ?

ಹುಬ್ಬಳ್ಳಿ-ಧಾರವಾಡ ಜೈಲು

ಸಜಾ ಕೇಂದ್ರಗಳೋ, ಮಜಾ ಕೇಂದ್ರಗಳೋ?

ಹುಬ್ಬಳ್ಳಿ ಮತ್ತು ಧಾರವಾಡಗಳಲ್ಲಿರುವ ಉಪ ಕಾರಾಗೃಹಗಳು ಖೈದಿಗಳಿಗೆ ಸಜಾ ನೀಡುವ ಕೇಂದ್ರಗಳೋ ಅಥವಾ ಅವರಿಗೆ ಮಜಾ ಮಾಡಲು ಇರುವ ತಾಣಗಳೋ ಎಂಬ ಅನುಮಾನವಂತೂ ಈಗ ಬರತೊಡಗಿದೆ. ಹಣವಿರದ ಬಡ ಖೈದಿಗಳಿಗೆ, ಆರೋಪಿಗಳಿಗೆ ನರಕದಂತಿರುವ ಈ ಜೈಲುಗಳು ಹಣವಿದ್ದವರಿಗೆ ಸ್ವರ್ಗವಾಗಿ ಪರಿವರ್ತಿತವಾಗಿಬಿಟ್ಟಿವೆ. ಕಳೆದ ವರ್ಷ ಹುಬ್ಬಳ್ಳಿಯ ಇಂದಿರಾ ನಗರದ ವಿಚಾರಣಾಧೀನ ಖೈದಿಯೊಬ್ಬರು ಸರಿಯಾದ ಊಟ ಸಿಗದೇ ಹಿಮ್ಸ್‌ನಲ್ಲಿ ನಿಧನರಾಗಿದ್ದುದು, ಅದರಿಂದ ಸಿಟ್ಟಿಗೆದ್ದ ಅವರ ಕುಟುಂಬದವರು ಪ್ರತಿಭಟನೆಗಿಳಿದಿದ್ದುದು ಒಂದೆಡೆಯಾದರೆ ಹಣವಿದ್ದವರು ರಾಜಾರೋಷವಾಗಿ ಯಾರಿಗೂ ಕೇರ್ ಮಾಡದೇ ಮೋಜಿನಲ್ಲಿ ಮುಳುಗಿರುವುದು ಇನ್ನೊಂದೆಡೆ. ಒಂದೇ ಜೈಲಿನಲ್ಲಿ ಕಾಣಬಹುದಾದ ಈ ಎರಡೂ ವಾಸ್ತವಗಳು ಜೈಲಿನ ನೈಜ ಚಿತ್ರಣಕ್ಕೆ ಹಿಡಿದಿರುವ ಕನ್ನಡಿ ಎಂದರೆ ತಪ್ಪಾಗಲಾರದು.

ಕೋರ್ಟ್ ಆವರಣದಲ್ಲೇ ಆತ್ಮಹತ್ಯೆ ಯತ್ನ!

ಇಲ್ಲಿನ ಖೈದಿಗಳು ನ್ಯಾಯಾಲಯದ ಆವರಣದಲ್ಲಿಯೇ ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾಗುತ್ತಾರೆಂದರೆ ಈ ಜೈಲುಗಳಲ್ಲಿ ಅದೆಂಥ ಭೀಕರ ಪರಿಸ್ಥಿತಿ ಇರಬಹುದೆಂದು ನೀವೇ ಊಹಿಸಿ. ಕೊಲೆ ಆರೋಪದ ವಿಚಾರಣೆ ಎದುರಿಸುತ್ತಿದ್ದ ಗುರುದಾಸ ಮತ್ತು ದರೋಡೆ ಪ್ರಕರಣದ ಆರೋಪದ ವಿಚಾರಣೆ ಎದುರಿಸುತ್ತಿದ್ದ ವಿಶ್ವನಾಥ ಎನ್ನುವ ಇಬ್ಬರು ಖೈದಿಗಳನ್ನು ಮೊನ್ನೆ ಆಗಸ್ಟ್ 19ರಂದು ನ್ಯಾಯಾಲಯಕ್ಕೆ ಹಾಜರುಪಡಿಸಲು ಕರೆತರಲಾಗಿತ್ತು. ಕಾರಾಗೃಹದಲ್ಲಿ ಎಂಥ ಕೆಟ್ಟ ರೀತಿಯ ಆಹಾರ ನೀಡಲಾಗುತ್ತದೆ ಎಂಬುದನ್ನು ನ್ಯಾಯಾಧೀಶರಿಗೆ ತೋರಿಸುವುದಕ್ಕಾಗಿ ಬೆಳಗ್ಗೆ ಕೊಟ್ಟ ಉಪ್ಪಿಟ್ಟನ್ನೇ ಕಟ್ಟಿಕೊಂಡು ಬಂದಿದ್ದರು. ಇದು ಹೇಗೋ ಜೈಲಿನ ಸಿಬ್ಬಂದಿಗೆ ಗೊತ್ತಾಗಿ ಉಪ್ಪಿಟ್ಟನ್ನು ಕಿತ್ತುಕೊಂಡು ಬಿಸಾಡಿದರು. ಏಕೆಂದರೆ, ನ್ಯಾಯಾಧೀಶ ತಮ್ಮ ಮಾನಮರ್ಯಾದೆಯನ್ನು ಹರಾಜು ಹಾಕಿಬಿಡುತ್ತಾರೆ ಎಂಬ ಆತಂಕ. ಬೇರೆ ದಾರಿ ಕಾಣದೇ ಈ ಖೈದಿಗಳು ತಮ್ಮ ತಲೆಗಳನ್ನು



ಹುಬ್ಬಳ್ಳಿಯ ಉಪ ಕಾರಾಗೃಹ

ನ್ಯಾಯಾಲಯದ ಗೋಡೆಗೆ ಗುದ್ದಿಕೊಳ್ಳುತ್ತಾ 'ನ್ಯಾಯ ಬೇಕು ನ್ಯಾಯ ಬೇಕು' ಎನ್ನುತ್ತಾ ಆತ್ಮಹತ್ಯೆಯ ಪ್ರಯತ್ನ ನಡೆಸಿದ್ದಾರೆ. ಇದನ್ನು ಗಮನಿಸಿದ ನ್ಯಾಯಾಧೀಶರು ಅವರ ಅಹವಾಲನ್ನು ಕೇಳಿಸಿಕೊಂಡು ಲಿಖಿತ ದೂರನ್ನು ತೆಗೆದುಕೊಂಡಿದ್ದಾರೆ. ನಂತರದಲ್ಲಿ ಅದರ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸುವಂತೆ ಹುಬ್ಬಳ್ಳಿ-ಧಾರವಾಡ ಪೊಲೀಸ್ ಆಯುಕ್ತರಿಗೆ ನಿರ್ದೇಶನ ನೀಡಿದ್ದಾರೆ.

ಅತ್ತ ನ್ಯಾಯಾಲಯದಿಂದ ನಿರ್ದೇಶನ ಹೊರಬೀಳುತ್ತಿದ್ದಂತೆ ಇತ್ತ ಜೈಲುಗಳು ರಾತ್ರೋರಾತ್ರಿ ಸುಧಾರಿಸಿಬಿಟ್ಟವು. ಈ ಕಾರಾಗೃಹಕ್ಕೆ ಶನಿಯಂತೆ ಒಕ್ಕರಿಸಿಕೊಂಡಿರುವ ಸಹಾಯಕ ಸೂಪರಿಂಟೆಂಡೆಂಟ್ ಟಿ.ಪಿ. ಶೇಷಾದ್ರಿ ಭಯಭೀತಗೊಂಡು ಜೈಲಿನ ಊಟ, ತಿಂಡಿ ಮತ್ತಿತರ ಸೌಕರ್ಯಗಳನ್ನು ಉತ್ತಮಗೊಳಿಸಿ, 'ಸಂದರ್ಶನಕ್ಕೆ ಬಂದವರು ಸಿಬ್ಬಂದಿಗೆ ಲಂಚ ನೀಡಬೇಡಿ' ಎಂದು ಹೊಸ ನೋಟೀಸ್ ಬೋರ್ಡ್ ನೇತು ಹಾಕಿ ಇನ್ಸ್‌ಪೆಕ್ಷನ್‌ಗಾಗಿ ರೆಡಿಯಾಗಿಬಿಟ್ಟದ್ದಾನೆ. ಈ ತನಿಖೆಯಿಂದ ಅದೆಷ್ಟು ಸತ್ಯಾಂಶ ಹೊರಬೀಳುತ್ತೋ ನೋಡಬೇಕಷ್ಟೆ.

ಬುಲೆಟ್, ಮೊಬೈಲ್‌ಗಳ ದರ್ಬಾರ್

ಹುಬ್ಬಳ್ಳಿ ಕಾರಾಗೃಹದ ವಸ್ತುಸ್ಥಿತಿಯ ಬಗ್ಗೆ ವರದಿ ನೀಡುವಂತೆ ನ್ಯಾಯಾಲಯ ಆದೇಶಿಸಿ ಅದರ ಮಸಿ ಆರುವ ಮೊದಲೇ ಧಾರವಾಡ ಕಾರಾಗೃಹದಲ್ಲಿ ಪೊಲೀಸ್ ದಾಳಿ ನಡೆದಿದೆ. ಮೊನ್ನೆ ಆಗಸ್ಟ್ 20ರಂದು ಕುಖ್ಯಾತ ರೌಡಿ ಹೆಬ್ಬೆಟ್ಟು ಮಂಜ ಜೈಲಿನೊಳಗಡೆಯೇ ಬೇರೊಬ್ಬ ಖೈದಿಯೊಂದಿಗೆ ಮಾರಾಮಾರಿಗಿಳಿದಿದ್ದಾನೆ. ಇದನ್ನು ನಿಯಂತ್ರಿಸಬೇಕಾದ ಜೈಲು ಸೂಪರಿಂಟೆಂಡೆಂಟ್ ಟಿ. ಎಚ್. ಲಕ್ಷ್ಮಿನಾರಾಯಣ ನೋಡುತ್ತಾ ಮಜಾ ತೆಗೆದುಕೊಂಡಿದ್ದಾನೆ. ಕೊನೆಗೆ ಪರಿಸ್ಥಿತಿ ಕೈ ಮೀರಿ ಹೋಗುತ್ತಿದ್ದುದನ್ನು ಗಮನಿಸಿ ತಕ್ಷಣ ಹುಬ್ಬಳ್ಳಿ-ಧಾರವಾಡ ಪೊಲೀಸ್ ಕಮೀಷನರ್ ನಾರಾಯಣ ನಡುಮನಿಗೆ ಫೋನಾಯಿಸಿದ್ದಾನೆ. ಕೂಡಲೇ ಧಾರವಾಡ ಉಪನಗರ ಮತ್ತು ಶಹರ ಪೊಲೀಸರು ನಾರಾಯಣ ನಡುಮನಿ ಮತ್ತು ಎಸಿಪಿ ಅಶೋಕ್ ಕುಮಾರ್ ನೇತೃತ್ವದಲ್ಲಿ



ಜೈಲು ಸೂಪರಿಂಟೆಂಡೆಂಟ್ ಟಿ. ಎಚ್. ಲಕ್ಷ್ಮಿನಾರಾಯಣ

ಜೈಲಿಗೆ ದಾಳಿ ಇಟ್ಟದ್ದಾರೆ. ಈ ದಾಳಿಯಲ್ಲಿ ಹಲವಾರು ಮೊಬೈಲ್‌ಗಳು, ಬುಲೆಟ್, ರಿವಾಲ್ವರ್, ಕತ್ತಿ, ಚಾಕು, ಚೂರಿ ಎಲ್ಲಾ ಸಿಕ್ಕಿವೆ.


ಹೆಬ್ಬೆಟ್ಟು ಮಂಜನಿಂದ ಐದು ಮೊಬೈಲ್‌ಗಳನ್ನು, ಬೆಂಗಳೂರಿನ ರಾಜಾಜಿನಗರದ ಕೈಗಾರಿಕಾ ಪ್ರದೇಶದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಾಖೆಗೆ ಸೇರಿದ ಖಾತೆಯ ಪಾಸ್‌ಬುಕ್‌ನ್ನು, ಕೆಲವು ಚೆಕ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಈ ಪಾಸ್‌ಬುಕ್ ಇರ್ಫಾನ್

ಹಾವೇರಿ

ಜೆಡಿಎಸ್ ಜಿಲ್ಲಾಧ್ಯಕ್ಷ ಪಟ್ಟ ಯಾರಿಗೆ?

ಒಂದು ಕಾಲದಲ್ಲಿ ಕಾಂಗ್ರೆಸ್ ಪಕ್ಷದ ಭದ್ರಕೋಟೆಯಂತಿದ್ದ ಹಾವೇರಿ ಜಿಲ್ಲೆಯನ್ನು ಆನಂತರ ಜೆಡಿಎಸ್ ಪಕ್ಷ ವಶಪಡಿಸಿಕೊಂಡಿತಾದರೂ ಈಗ ಇದೇ ಜೆಡಿಎಸ್ ಜಿಲ್ಲೆಯಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಹ ಸ್ಥಿತಿ ತಲುಪಿದೆ. ಇವತ್ತು ಬಿ.ಸಿ. ಪಾಟೀಲ್‌ನಂತಹ ನಟ ಭಯಂಕರ ಶಾಸಕರು, ಮಾಜಿ ಜಿ. ಪಂ. ಅಧ್ಯಕ್ಷೆ ಪ್ರೇಮಾ ಪಾಟೀಲ್‌ಳಂತಹ ಚೈನಾ ಸಿಲ್ಕ್ ಲೀಡರಗಳು ಜಾತಿರಾಜಕಾರಣ ಮಾಡಿಕೊಂಡು ಪಕ್ಷವನ್ನೇ ಬಲಿ ಕೊಡಲು ಸಿದ್ಧರಾಗಿರುವಂತಿದೆ.

ಜನತಾದಳದ 'ದಂಡ' ನಾಯಕ ಮತ್ತು ರಾಜ್ಯದ ಮುಖ್ಯಮಂತ್ರಿ ಕುಮಾರಸ್ವಾಮಿ ಎರಡು ಬಾರಿ ಈ ಜಿಲ್ಲೆಗೆ ಬಂದು ನಿದ್ರೆ ಮಾಡಿಹೋದರು, ಆದರೆ ಇಲ್ಲಿ ತಮ್ಮ ಪಕ್ಷಕ್ಕೊಬ್ಬ ಕಾಯಂ ಕಾವಲುಗಾರನನ್ನು ಆಯ್ಕೆ ಮಾಡುವ ಬಗ್ಗೆ ಮಾತ್ರ ಕಿಂಚಿತ್ತೂ ಯೋಚಿಸಲಿಲ್ಲ! ಯಾವ ಜಾತಿಗೆ ಜಿಲ್ಲಾಧ್ಯಕ್ಷ ಸ್ಥಾನ ನೀಡಬೇಕು, ಯಾರು ಯಾರಿಗೆ ನಿಷ್ಠರು, ಯಾರಿಗೆ ಎಷ್ಟು ವೋಟ್ ಪವರ್ ಇದೆ, ಎಷ್ಟು ಮನಿಪವರ್ ಇದೆ



ಎಂದೆಲ್ಲಾ ಪಕ್ಷದ ನಾಯಕರು ಲೆಕ್ಕಹಾಕುವುದರಲ್ಲಿ ತೊಡಗಿದ್ದಾರೆಯೇ ಹೊರತು ಪಕ್ಷದ ಹಿತದ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ,


ಈ ಮಧ್ಯೆ ಜಿಲ್ಲಾ ಲೀಡರ್‌ಗಳು ಎನಿಸಿಕೊಂಡಿದ್ದವರೆಲ್ಲ ಒಬ್ಬೊಬ್ಬರಾಗಿ ಬಿಜೆಪಿಗೆ ಹಾರಿ ಅಡ್ಡ ಬೆಡ್ಡಿಗಳಾಗಿದ್ದರೆ, ಕುರುಬರೆಲ್ಲಾ ಸಿದ್ದರಾಮಯ್ಯನ ಅಹಿಂದ ಸೇರಿ ಅಲ್ಲಿಂದ ಕಾಂಗ್ರೆಸ್‌ಗೆ ವಲಸೆ ಹೋಗಿದ್ದಾರೆ. ಉಳಿದ ನಾಯಕರೆಲ್ಲಾ ಅಧ್ಯಕ್ಷ ಸ್ಥಾನದ ಆಕಾಂಕ್ಷಿಗಳೇ ಹೊರತು ಪಕ್ಷಕ್ಕಾಗಿ ದುಡಿಯುವ ಕಾರ್ಯಕರ್ತರಲ್ಲ,

ಜಾತಿ ಲೆಕ್ಕಾಚಾರದಲ್ಲಿ ಅಧ್ಯಕ್ಷಗಿರಿ!

ಪ್ರತಿ ತಾಲ್ಲೂಕಿಗೆ ಇಬ್ಬಿಬ್ಬರಂತೆ ಒಟ್ಟು 10-12 ಜನ ಜಿಲ್ಲಾ ಅಧ್ಯಕ್ಷ ಗಾದಿಗಾಗಿ ರೇಸಿಗಿಳಿದಿದ್ದಾರೆ. ಪ್ರಬಲರೆನಿಸಿಕೊಂಡವರು ಜನರನ್ನು ಕಟ್ಟಿಕೊಂಡು ಮೂರುನಾಲ್ಕು ಬಾರಿ ರಾಜ್ಯದ ನಾಯಕರ ಮುಂದೆ ತಮ್ಮ ಬಲ ಮತ್ತು ಬಾಲಗಳನ್ನು ಪ್ರದರ್ಶಿಸಿ ಮರಳಿದ್ದಾರೆ.

ಸ್ವಂತ ಬುದ್ಧಿಯಿಲ್ಲದ ಬಸಪ್ಪ ಕುಲಕರ್ಣಿ ಎಂಬ ಪರಾವಲಂಬಿ ಕಾರ್ಯಾಧ್ಯಕ್ಷ ಸ್ಥಾನದಿಂದ ಎಲ್ಲದಕ್ಕೂ 'ಹಡಗಲಿ ಸಾಹೇಬರು ಹ್ಯಾಂಗ್ ಹೇಳ್ತಾರೋ ಹಾಂಗೇ ಮಾಡ್ತೀನಿ' ಎಂಬ ರೆಡಿಮೇಡ್ ಮಂತ್ರವನ್ನು ಜಪಿಸುತ್ತಿರುತ್ತಾನೆ. ಈತ ಅಧ್ಯಕ್ಷ ಸ್ಥಾನಕ್ಕೆ ಪ್ರಮೋಷನ್ ಪಡೆಯಲು ಶಿವಪೂರ ಸತ್ತಾಗಿನಿಂದ ಪ್ರಯತ್ನಪಟ್ಟರೂ ಇಂದಿಗೂ ಆಗಿಲ್ಲ, ಆದ್ರೂ ಪ್ರಯತ್ನ ಮಾತ್ರ ಬಿಟ್ಟಿಲ್ಲ, ತಿಂಗಳಿಗೊಮ್ಮೆ 'ಏನಾದರೂ ಮಾಡ್ರಿ ಅಜ್ಜಾರ' ಎಂದು ಎಂ.ಪಿ.ಪಿ. ಪಾದಪೂಜೆ ಮಾಡಿ ಬರ್ತಾನಂತೆ. ಹಿಂದೆ ಎಂ.ಎಲ್.ಎ. ಆಗೋ ಕನಸು ಕಂಡು ಭವ್ಯ ಮೆರವಣಿಗೆನೂ ಮಾಡಿ ಕಾಸು ಕಳಕೊಂಡು ಕೊನೆಗೆ ಬಿ ಫಾರ್ಮ್ ಸಿಗದೆ ಇನ್‌ಸಲ್ಟ್ ಆಯಿತು ಎಂದು ಮನೆ ಸೇರಿದ್ದ ಕುಲಕರ್ಣಿಗೆ ಸದ್ಯ ಯಾರ ಬೆಂಬಲವೂ ಇಲ್ಲವಂತೆ.

ಇವನೊಂದಿಗೆ ಪೈಪೋಟಿಗೆ ಬಿದ್ದಿರುವವನು ರಿಟೈರ್ಡ್ ರಿಲ್ಯಾಕ್ಸ್ ಅಧಿಕಾರಿ ಕೊಂಬಳಿ. ಈತ ನೌಕರಿಯಲ್ಲಿದ್ದಾಗ ಮಾಡಿದ ಹಡಬ ದುಡ್ಡನ್ನೇ ತೋರಿಸುತ್ತಾ, ತಾನು ಪಾರ್ಟಿಗೆ ಸೇರಿದ್ದೇ ಜಿಲ್ಲಾಧ್ಯಕ್ಷನಾಗೋಕೆ ಅಂತಿದ್ದಾನೆ. ಎಲ್ಲಾ ಪಕ್ಷದಲ್ಲೂ ಕೈ ಆಡಿಸಿರುವ ರಾಜಶೇಖರಮೂರ್ತಿಯ ಶಿಷ್ಯ ಬಿ.ಎಸ್.ಪಾಟೀಲ ಎಂಬ ಸ್ವಯಂ ಘೋಷಿತ ನಾಯಕ ಕೊಂಬಳಿಯನ್ನು ಕಟ್ಟಿಕೊಂಡು ಗೌಡರ ಬಳಿ ಅಲೆದಾಡಿ ಸುಸ್ತಾಗಿದ್ದಾನೆ. ಜನಬೆಂಬಲ ಇಲ್ಲದ ಇವನನ್ನು ಪಟ್ಟಕ್ಕೆ ಏರಿಸುವುದು ಬೇಡ ಎಂದು ಶಾಸಕ ಬಿ.ಸಿ ಪಾಟೀಲ್ ಬತ್ತಿ ಬೇರೆ ಇಡುತ್ತಿದ್ದಾನೆ. ಬಿ.ಸಿ. ಪಾಟೀಲ್‌ಗೆ ರಾಣೇಬೆನ್ನೂರಿನ ಹೊಸಮನಿ ಎಂಬ ಸ್ವಜಾತಿಯ ಬೆಂಬಲಿಗನಿಗೆ ಸ್ಥಾನ ಕೊಡಿಸುವ ಇರಾದೆ ಇದೆ.




ಸಾದರಿಗೆ ಪಟ್ಟ ಕಟ್ಟಿದರೆ ಪಂಚಮಸಾಲಿಯರಿಗೆ ಅನ್ಯಾಯವಾಗುತ್ತದೆ ಎಂದು ಪ್ರೇಮಾ ಪಾಟೀಲ ಸೇರಿದಂತೆ ಉಳಿದ ಕಟ್ಟಾ ಲಿಂಗಾಯತರು ಕುಮಾರಣ್ಣನಿಗೆ ಕಂಪ್ಲೆಂಟ್ ಮಾಡಿದ್ದಾರೆ. ಇದನ್ನು ಕಂಡು ಹೊಸ ಆ್ಯಕ್ಟಿಂಗ್ ಶುರು ಹಚ್ಚಿರುವ ಬಿ.ಸಿ.ಪಾಟೀಲ ಹತ್ತಿರ ಸಂಬಂಧಿ ಬ್ಯಾಡಗಿಯ ಬಿ.ಜೆ.ಪಿ. ಲೀಡರ್ ಸುರೇಶಗೌಡ ಪಾಟೀಲ್‌ನನ್ನು ಜೆಡಿಎಸ್‌ಗೆ ಕರೆತಂದು ಪ್ರಸಿಡೆಂಟ್ ಮಾಡತೇನಿ ಎಂದು ರಾಗ ಎಳೆಯುತ್ತಿದ್ದಾನೆ. ಯಾರು ಏನೇ ಮಾಡಿದರೂ ಹೊಸಮನಿ ತಪ್ಪಿದರೆ ಪಾಟೀಲ ಇಬ್ಬರಲ್ಲಿ ಒಬ್ಬರನ್ನು ಅಧ್ಯಕ್ಷ ಗಾದಿಗೆ ಕೂರಿಸಿಯೇ ತೀರುತ್ತೇನೆಂದು ಹಟಕ್ಕೆ ಬಿದ್ದಿರುವ ಬಿ.ಸಿ ಪಾಟೀಲ್‌ಗೆ ಈಗ ಜಿಲ್ಲೆಯ ಪಂಚಮಸಾಲಿಗಳೇ ಎದುರಾಳಿಗಳು.

ಇವರಲ್ಲದೇ ಕಾಂಗ್ರೆಸ್ಸಿನಿಂದ ವಲಸೆ ಬಂದ ಮಾಜಿ ಜಿ.ಪಂ. ಸದಸ್ಯ ಬದರಗದ್ದಿ ಮತ್ತು ಅವಿಭಜಿತ ಧಾರವಾಡ ಜಿಲ್ಲೆಯ ಜಿ.ಪಂ. ಅಧ್ಯಕ್ಷನಾಗಿದ್ದ ಬಿ.ಸಿ. ಪಾಟೀಲ ಕೂಡ ಅಧ್ಯಕ್ಷ ಗಾದಿಯ ರೇಸ್‌ನಲ್ಲಿದ್ದಾರೆ.

ಅಲ್ಪಸಂಖ್ಯಾತರಿಗೆ ಪಟ್ಟ?

ಸದ್ಯ ಜಾತ್ಯತೀತ ಜನತಾದಳದಲ್ಲಿ ಅಲ್ಪಸಂಖ್ಯಾತರಿಗೆ ಜಿಲ್ಲಾ ಅಧ್ಯಕ್ಷ ಸ್ಥಾನ ಸಿಕ್ಕಿಲ್ಲ, ಹಾವೇರಿಯಿಂದಲಾದರೂ ಈ ಕೊರತೆ ನಿಗಲಿ ಎಂದು ಮುಸ್ಲಿಮರು ಪಟ್ಟು ಹಿಡಿದಿದ್ದಾರೆ. ಪಾರ್ಟಿಯ ಹಳೇ ಧುರೀಣ ನ್ಯಾಯವಾದಿ ಎಂ.ಎಚ್. ಬೆಂಡಿಗೇರಿಗೆ ಅಧ್ಯಕ್ಷಗಿರಿ ಕೊಟ್ಟಲ್ಲಿ ಓಟ್ ಬ್ಯಾಂಕ್ ಸೃಷ್ಟಿಯಾಗುತ್ತೆ ಎಂಬ ಲೆಕ್ಕಾಚಾರವೀಗ ಜೋರಾಗಿದೆ. ಲಿಂಗಾಯತರ ಒಳ ಜಗಳ, ವೈಮನಸ್ಸು ದೂರಾಗಿಸಲು ರಾಜ್ಯ ನಾಯಕರು ಈ ಸೂತ್ರಕ್ಕೆ ಒಪ್ಪಿಗೆ ಸೂಚಿಸುವ ಇರಾದೆ ತೋರಿದ್ದಾರಂತೆ. ಸಚಿವ ಇಕ್ಬಾಲ್ ಅನ್ಸಾರಿ ಕೂಡ ಬೆಂಡಿಗೇರಿಗೆ ಸ್ಥಾನ ಕೊಡಿಸಲು ಸುಪ್ರೀಮೊಗೆ ದುಂಬಾಲು ಬಿದ್ದಿದ್ದರೆ, ಪ್ರೇಮಾ ಪಾಟೀಲ್ ಅಲ್ಪಸಂಖ್ಯಾತರಿಗಾದರೆ ಪಂಚಮಸಾಲಿಗಳ ವಿರೋಧವಿಲ್ಲವೆಂದು ಹಸಿರು ನಿಶಾನೆ



ತೋರಿಸಿದ್ದಾಳೆ. ಇತ್ತೀಚೆಗೆ ಹಿಂದುಳಿದವರು ಮತ್ತು ಅಲ್ಪಸಂಖ್ಯಾತರು ಹಾವೇರಿಯಲ್ಲೊಂದು ಸಮಾವೇಶ ಮಾಡಿ ಬೆಂಡಿಗೇರಿಗೆ ಬಂಬಲವಾಗಿ ನಿಂತು ಬ ಪ್ರದರ್ಶಿಸಿದ್ದಾರೆ.

ಮುಂದೆ ಎದುರಾಗುವ ಸ್ಥಳೀಯ ಸಂಸ್ಥೆ ಚುನಾವಣೆಯನ್ನು ಯಾರ ಅಧ್ಯಕ್ಷತೆಯಲ್ಲಿ ಎದುರಿಸಬೇಕು ಎನ್ನುರುವ ಪಕ್ಷದ ನಿಷ್ಠಾವಂತ ಕಾರ್ಯಕರ್ತರು, ಹೊಸಬರಿಮಣೆ ಹಾಕಿದರೆ ಮೂರು ಸೀಟು ಬರಲ್ಲಾ ಎಂದು ಗುಡುಗುತ್ತಿದ್ದಾರೆ. ಅಲ್ಪಸಂಖ್ಯಾತ ಬೆಂಡಿಗೇರಿಗೆ ಪ ಕಟ್ಟಿದರೆ ಜಾತ್ಯತೀತ ಎಂದು ಹೆಸರಿಟ್ಟುಕೊಂಡಿರುವ ದ ಅರ್ಥವಾದರೂ ಬರುತ್ತೆ ಎಂಬುದು ಹಲವರ ಅಂಬೋ

ಇಲ್ಲಿಯ ಪರಿಶುದ್ಧ ಗಾಳಿ ನನಗೆ ಸ್ವಾತಂತ್ರ್ಯಕ್ಕೆ ಸಮ - ಜೋಅನ್ ಬೈಲಿ

ಜಾವೇದ್ ಎಂಬಾತನ ಹೆಸರಿನಲ್ಲಿದೆ. ಅಲ್ಲದೇ ಮಲ್ಲಯ್ಯ, ಮಠಪತಿ, ರಫೀಕ್ ನದಾಫ್, ಬಸಪ್ಪ, ಮಲ್ಲಪ್ಪ, ಶಿರನೂರ್, ಶಿವರಡ್ಡಿ, ಶಿವಪ್ಪ ಬೆಳ್ಳಿಕೇರಿ ಎಂಬ ಖೈದಿಗಳಿಂದ ತಲಾ ಒಂದೊಂದು ಮೊಬೈಲ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಜೈಲಿನಲ್ಲಿ ಮೊಬೈಲ್ ಬಳಸುವುದು, ಮಾರಕಾಸ್ತ್ರಗಳನ್ನು ಹೊಂದುವುದು ನಿಷಿದ್ಧವಾದರೂ ಖೈದಿಗಳು ರಾಜಾರೋಷವಾಗಿ ಇವುಗಳನ್ನು ಬಳಸುತ್ತಲೇ ಜೈಲನ್ನು ತಮ್ಮ ದುಷ್ಟ ಚಟುವಟಿಕೆಗಳ ಪ್ಲಾನಿಂಗ್ ಸೆಂಟರ್ ರೀತಿಯಲ್ಲಿ ಬಳಸಿಕೊಳ್ಳುತ್ತಿದ್ದಾರೆಂದರೆ ಜೈಲಿನ ಅಧಿಕಾರಿಗಳು ಇವರೊಂದಿಗೆ ಎಷ್ಟರಮಟ್ಟಿಗೆ ಶಾಮೀಲಾಗಿಬಹುದೆಂದು ನೀವೇ ಯೋಚಿಸಿ.


ಆತ್ಮಹತ್ಯೆಗೆ ಯತ್ನಿಸಿದ ಖೈದಿಗಳು

ದುಡ್ಡೊಂದಿದ್ದರೆ ಸಾಕು

ಇಲ್ಲಿ ದುಡ್ಡೊಂದಿದ್ದರೆ ಸಾಕು, ಕೇಳಿದ್ದೆಲ್ಲ ಬಂದು ಬೀಳುತ್ತದೆ. ಖೈದಿಗಳಿಗೆ ಬೇಕಾಗುವ ಬೀಡಿ, ಸಿಗರೇಟ್, ಹೆಂಡ ಎಲ್ಲವನ್ನೂ ಜೈಲಿನ ಅಧಿಕಾರಿಗಳೇ ಸರಬರಾಜು ಮಾಡುತ್ತಾರೆ. ಆದರೆ ಬೆಲೆ ಮಾತ್ರ ದುಪ್ಪಟ್ಟು. ಇದೊಂದು ರೀತಿಯಲ್ಲಿ ದಂಧೆಯಾಗಿ ಬಿಟ್ಟಿದೆ ಇಲ್ಲಿನ ಅಧಿಕಾರಿಗಳಿಗೆ. ಅಂತೆಯೇ, ಹೊರಗಿನಿಂದ ಖೈದಿಗಳನ್ನು ನೋಡಲು ಅವರ ಸಂಬಂಧಿಕರು ಬಂದರೆ ಅವರು ತಂದ ತಿಂಡಿ, ತಿನಿಸುಗಳನ್ನು ಖೈದಿಗಳಿಗೆ ಕೊಡಬೇಕೆಂದರೆ ಮೊದಲು ಈ ಅಧಿಕಾರಿಗಳಿಗೆ ಹಣ ನೀಡಬೇಕು. ಸಸ್ಯಾಹಾರವಾದರೆ 50 ರೂಪಾಯಿ, ಮಾಂಸಾಹಾರವಾದರೆ 100 ರೂಪಾಯಿ. ಆದರೂ ಅಧಿಕಾರಿಗಳು ತಿಂದು ಉಳಿದದ್ದು ಮಾತ್ರವೇ ಖೈದಿಗಳಿಗೆ ಸೇರುತ್ತದೆ. ಸಂಬಂಧಿಗಳು ಖೈದಿಗಳೊಂದಿಗೆ ಮಾತನಾಡಬೇಕೆಂದರೂ ದುಡ್ಡು ತೆರಬೇಕು. 5 ನಿಮಿಷ ಮಾತನಾಡಬೇಕೆಂದರೆ 50 ರೂಪಾಯಿ, ಒಂದು ಗಂಟೆ ಮಾತನಾಡಬೇಕೆಂದರೆ 500 ರೂಪಾಯಿ! ಖೈದಿಗಳು ರಾತ್ರಿ "ಅಯ್ಯೋ ಎದೆನೋವು" ಎಂದರೂ ಆಸ್ಪತ್ರೆಯ ಮುಖ ನೋಡಲು ಹಣ ಕಕ್ಕಬೇಕು. ಆದರೆ ಅದರಲ್ಲೂ ತಾರತಮ್ಯ. 2000 ರೂಪಾಯಿ ಕೊಟ್ಟರೆ ಕಿಮ್ಸ್ ಆಸ್ಪತ್ರೆಯ ಸಾದಾ ಹಾಸಿಗೆ, 5000 ಕೊಟ್ಟರೆ ಸ್ಪೆಷಲ್ ವಾರ್ಡ್! ಈ ದಂಧೆಯಿಂದಲೇ ತಿಂಗಳಿಗೆ ಕನಿಷ್ಟವೆಂದರೂ 50-60 ಸಾವಿರ ರೂಪಾಯಿಗಳನ್ನು ಜೈಲು ಅಧಿಕಾರಿಗಳು ಕಮಾಯಿಸುತ್ತಾರೆ. ದುಡ್ಡಿಲ್ಲದವರು ಬಂದರೆ ತಮ್ಮ ಸಂಬಂಧಿಗಳಿಗೆ ತಿಂಡಿ-ತಿನಿಸುಗಳನ್ನು ಕೊಡುವುದಿರಲಿ, ಕನಿಷ್ಠ ಅವರ ಮುಖ ನೋಡಲೂ ಸಾಧ್ಯವಾಗುವುದಿಲ್ಲ. ಆದ್ದರಿಂದಲೇ ಈ ಜೈಲುಗಳು ದುಡ್ಡಿದ್ದವರಿಗೆ ಸ್ವರ್ಗಗಳಾಗಿಯೂ, ಇಲ್ಲದವರಿಗೆ ನರಕಗಳಾಗಿಯೂ ಪರಿಣಮಿಸಿಬಿಟ್ಟಿವೆ.



ಸಹಾಯಕ ಸೂಪರಿಂಟೆಂಡೆಂಟ್ ಟಿ.ಪಿ. ಶೇಷಾದ್ರಿ

ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಹುಬ್ಬಳ್ಳಿ-ಧಾರವಾಡ ಜೈಲುಗಳು ಖೈದಿಗಳ ಮನಪರಿವರ್ತನೆಯ ಕೇಂದ್ರಗಳಾಗುವ ಬದಲು ಅಪರಾಧಿಗಳನ್ನು ಸೃಷ್ಟಿಸುವ ಕಾರ್ಖಾನೆಗಳಾಗಿ, ಜೈಲು ಅಧಿಕಾರಿಗಳ ಜೇಬು ತುಂಬಿಸುವ ದಂಧೆಗಳಾಗಿ ಮಾರ್ಪಟ್ಟಿರುವುದಂತೂ ಸತ್ಯ. ಕೋ-ಜಾ ಸರ್ಕಾರದಿಂದ ರಾಜ್ಯದ ಸುಧಾರಣೆಯಂತೂ ಆಗುವುದಿಲ್ಲ. ಕನಿಷ್ಠ ಈ ಜೈಲುಗಳ ಸುಧಾರಣೆಯಾದರೂ ಆಗುತ್ತಾ?

-ವರದಿಗಾರ

ಹೊರಟ್ಟಿ ಹಾಳು ಮಾಡಿದ, ಬಿ.ಸಿ. ನೀರು ಹಾಕಿದ...

ಹಿಂದಿನ ಧರಂ ಸರಕಾರದಲ್ಲಿ ಜಿಲ್ಲೆಯ ಉಸ್ತುವಾರಿ ಹೊತ್ತಿದ್ದ ಹಾಲಿ ಶಿಕ್ಷಣ ಮಂತ್ರಿ ಬಸವರಾಜ ಹೊರಟ್ಟಿ ತನ್ನ ಶಿಕ್ಷಕರ ಕ್ಷೇತ್ರ ಕಾಯ್ದುಕೊಳ್ಳುವಲ್ಲಿ ಕಾಲಹರಣ ಮಾಡಿದನೇ ಹೊರತು ಪಾರ್ಟಿ ಬೆಳೆಸುವ ಕಡೆ ತಿರುಗಿ ನೋಡಲಿಲ್ಲ. ಜಿಲ್ಲಾ ಶಿಕ್ಷಕರ ಸಂಘದ ಅಧ್ಯಕ್ಷ ಮಾಸ್ತರ ಸಾವಜ್ಜಿ ಹೇಳಿದ ಮಾತಿಗೆ ತಲೆಯಾಡಿಸಿದ ಹೊರಟ್ಟಿ ಮೀಟರ ಬಡ್ಡಿಯ ಅಶೋಕ ಬೇವಿನಮರದ್‌ನಿಗೆ 'ನಿನ್ನನ್ನೇ ಜಿಲ್ಲಾ ಅಧ್ಯಕ್ಷನ ಮಾಡತೀನಿ' ಎಂದು ಹೇಳಿ ಮೂಗಿಗೆ ತುಪ್ಪಾ ಸವರಿದ. ಅದನ್ನು ಇದುವರೆಗೂ ನೆಕ್ಕುತ್ತಿರುವ ಬೇವಿನಮರದ್ ಇಂದಿಗೂ ಹಗಲುಗನಸು ಕಾಣುತ್ತಿದ್ದಾನೆ.


ಎಂ.ಎಚ್. ಬೆಂಡಿಗೇರಿ

ಇನ್ನು ನಟಭಯಂಕರ ಶಾಸಕ ಬಿ.ಸಿ. ಪಾಟೀಲ್ ಏನು ಮಾಡಿದ್ದಾನೆ? ಮಂತ್ರಿಗಿರಿಗಾಗಿ ಕಂಡವರ ಕೈಕಾಲು ಹಿಡಿದು ಸುಸ್ತಾಗಿದ್ದ ಈತ "ಹೊರಟ್ಟಿನೇ ತನ್ನ ಸ್ಥಾನ ತಪ್ಪಿಸಿದ" ಎಂದು ಹೊರಟ್ಟಿ ಜೊತೆ ಓಪನ್ನಾಗಿ ವಾರ್‌ಗೆ ಇಳಿದಿದ್ದಾನೆ.

ನೂತನ ಜಿಲ್ಲೆಯ ಪ್ರಥಮ ಜಿ.ಪಂ. ಅಧ್ಯಕ್ಷೆ ಸಿಲ್ಕ್ ರಾಣಿ ಪ್ರೇಮಾ ಪಾಟೀಲರಿಗೆ ಪಾರ್ಟಿಯಲ್ಲಿ ಯಾವ ಪೋಸ್ಟು ಇಲ್ದೇ ಇದ್ದರೂ ರಾಜ್ಯ ನಾಯಕಿ ಎಂದು ಸ್ವಯಂ ನಾಮಕರಣ ಮಾಡಿಕೊಂಡು ಟ್ರಾನ್ಸ್‌ಫರ್, ನೇಮಕಾತಿಗಳನ್ನು ಮಾಡುವುದನ್ನೇ ದಂಧೆಯಾಗಿಸಿಕೊಂಡಿದ್ದಾಳೆ. ಶಿಗ್ಗಾಂವಿಯ ಶಾಲೆಯ ಒಂದರಲ್ಲಿ ದೈಹಿಕ ಶಿಕ್ಷಕಿಯಾಗಿದ್ದ ಈಕೆ ಮಾತೆತ್ತಿದರೆ ಸಾವಿರ ಬಿಟ್ಟು ಲಕ್ಷ, ಕೋಟಿ ಎಂದೇ ಮಾತನಾಡುತ್ತಾಳೆ. ಈಕೆಗೆ ಎಂ.ಪಿ.ಪ್ರಕಾಶ್ ಮತ್ತು ಹೊರಟ್ಟಿ ಎಂಬ ಮಂತ್ರಿಗಳ ರಕ್ಷಣೆ ಬೇರೆ.

ಅತ್ತ ಎಂ.ಎಲ್.ಸಿ. ಶಿಗವಿಯಿಂದ ಕುರ್ಚಿಯ ಕನಸ್ಸಿನಲ್ಲಿರುವ ಸೋಮಾ ಸವಣೂರ ತಾಲೂಕಿಗೆ ತನ್ನ ಚೇಲಾ ಮುರಳೀಧರ ಸೆಂಡಗೆನನ್ನು ಅಧ್ಯಕ್ಷನನ್ನಾಗಿ ಮಾಡಲು ಹೋಗಿ ಸ್ಥಳೀಯ ಧುರೀಣ ಮೋಹನ ಮೆಣಸಿನಕಾಯಿಯಿಂದ ಉಗಿಸಿಕೊಂಡು ಕುಳಿತಿದ್ದಾಳೆ. ಒಟ್ಟಿನಲ್ಲಿ ಪಾರ್ಟಿ ಕಟ್ಟಲಿಲ್ಲ ಎಂದರೆ ಅಷ್ಟೇ ಹೋಯಿತು ಹೊಟ್ಟೆ ಗಟ್ಟಿಯಾದರೆ ಸಾಕು ಎನ್ನುವ ಶೋಕಿ ಲೀಡರಗಳಿಂದಲೇ ಇಂದು ಜಿಲ್ಲೆಯ ದಳ ಗಳಗಳ ಅನ್ನುತ್ತಿದೆ.


ಸಿಲ್ಕ್ ರಾಣಿ ಪ್ರೇಮಾ ಪಾಟೀಲ್

ಹಳಬರೆಲ್ಲಾ ಅವಕಾಶವಾದಿಗಳು

ಮಂತ್ರಿ ಉದಾಸಿ ಸೇರಿದಂತೆ ಈಗ ಜಿಲ್ಲೆಯಿಂದ ಆಯ್ಕೆಯಾಗಿರುವ ಮೂವರು ಶಾಸಕರೂ ಮೂಲತಃ ದಳದವರೆ. ಇವರೆಲ್ಲರೂ ಕಳೆದ ಚುನಾವಣೆ ಸಮಯದಲ್ಲಿ ಭ. ಫಾರಂನೊಂದಿಗೆ ಬಿ.ಜೆ.ಪಿ.ಗೆ ಹಾರಿ ಅಪ್ಪಟ ಚಿಡ್ಡಿಗಳಾದವರು. ಪಟೇಲರ ಸರಕಾರದಲ್ಲಿ ಮಂತ್ರಿಯಾದ ಉದಾಸಿ ಮರು ಚುನಾವಣೆಯಲ್ಲಿ ಸೋತನಂತರ ಬ್ಯಾಡಗಿಯ ನೆಹರೂ ಓಲೇಕಾರ, ರಾಣೇಬೆನ್ನೂರಿನ ಜಿ. ಶಿವಣ್ಣ ಹಾವೇರಿಯ ಶಿವರಾಜ ಸಜ್ಜನರನ್ನು ಕಟ್ಟಿಕೊಂಡು ಚಿಡ್ಡಿಗಳ ಪಾಲಾದ.

ಸದ್ಯ ಕಾಂಗ್ರೆಸ್ಸಿನಲ್ಲಿರುವ ಹಾವೇರಿಯ ಮಾಜಿ ಮಂತ್ರಿ ಬಸವರಾಜ ಶಿವಣ್ಣನವರ, ಕುರುಬರ ನಾಯಕ ಶಿವಾನಂದ ರಾಮಗೇರಿ ದಳದಿಂದ ರಾಜಕೀಯ ಪ್ರಾರಂಭಿಸಿ ನಂತರ ಅವಕಾಶವಾದಿಗ ಳಾಗಿ ಪಾರ್ಟಿಗೆ ಮುಖ ತೋರಿಸಿ ಹೋದವರೆ. ಬಹುತೇಕ ಜಿಲ್ಲೆಯ ಎಲ್ಲ ಪ್ರಮುಖರು ದಳದಿಂದ ತಮ್ಮ ಹಿಂಬಾಲಕರೊಂದಿಗೆ ಜಾಗ ಖಾಲಿ ಮಾಡಿದ್ದರಿಂದ ಅಂದು ಪ್ರಬಲವಾಗಿದ್ದ ಜನತಾದಳ ಈಗ ದುರ್ಬಲವಾಗಿದೆ. ಒಟ್ಟಿನಲ್ಲಿ, ಸ್ಥಳೀಯ ಸಂಸ್ಥೆಗಳ ಚುನಾವಣೆಯ ಹೊತ್ತಿಗಾದರೂ ಜಿಲ್ಲೆಯ ಜೆಡಿಎಸ್‌ಗೆ ಅಪ್ಪ-ಅಮ್ಮ ದೊರೆಯುತ್ತಾರೆಯೇ? ಕಾದು ನೋಡಬೇಕಷ್ಟೆ.

- ಹು. ವಿನಯ


ವಿಪ್ರರೇ. ಬಿಎಸ್‌ಪಿ ಸೇರಿದರೆ ನಿಮ್ಮ ಅವಸಾನ ಗ್ಯಾರಂಟಿ!

ಥೂತ್ತೇರಿ

ಯಾಹೂ

ನಮ್ಮ ಮಾಯಾವತಿಯ ಮಕ್ಕಳು ವಿಪ್ರೋತ್ತಮರ ಕೇರಿಗೆ ಹೋಗಿ "ಐನೋರಾ, ನಾವು ನೀವು ಒಂದಾದರೆ ಹೇಗೆ?" ಎಂದು ಕೇಳಿದವಂತಲ್ಲಾ. ಈ ಮಾತಿನಿಂದ ರೋಮಾಂಚಿತರಾದ ವಿಪ್ರೋತ್ತಮರು, ಭಕ್ಷ್ಯ - ಭೋಜನಗಳ ಐಟಂ ತುಂಬಿದ ಊಟದೆಲೆ ಕಡೆ ಧಾವಿಸಿದಂತೆ ಬಿ.ಎಸ್.ಪಿ ಜನರ ಹತ್ತಿರ ಬಂದು "ಒಳ್ಳೆ ಐಡಿಯಾ ಕಂಡ್ರಿ. ನಿಮ್ಮ ಪ್ರಯತ್ನ ನಿಜಕ್ಕೂ ತಡವಾಯ್ತು. ನಾವಿಬ್ಬರೂ ಇಷ್ಟರಲ್ಲೇ ಒಂದಾಗಿ ಮಧ್ಯಮ ಜಾತಿಗಳ ಸೊಂಟ ಮುರಿಯಬಹುದಿತ್ತು. ಈಗಲೂ ಅಂತಹ ಅನಾಹುತವೇನೂ ಜರುಗಿಲ್ಲ. ನಾವೂ, ನೀವೂ ಒಂದಾಗೋಣ. ಯಾವುದಕ್ಕೂ ನಮ್ಮ ಬ್ರಾಹ್ಮಣಸಭಾದ ಮುಖ್ಯಸ್ಥ ಪ್ರಸಾದನನ್ನು ಕೇಳಿ ಆತನಿಂದ ಒಪ್ಪಿಗೆ ಪ್ರಸಾದ ಪಡೆಯಿರಿ" ಎಂದರಂತಲ್ಲಾ. ಇದರಿಂದ ಪುಳಕಿತರಾದ ಮಾಯಾವತಿ ಮಕ್ಕಳು "ಐನೋರಾ, ನೀವು ಸುಮ್ಮನೆ ನಮ್ಮ ಜೊತೆ ಬಂದುಬಿಡಿ. ಹಿಂದೆಮುಂದೆ ನೋಡಬ್ಯಾಡಿ" ಎಂದರಂತಲ್ಲಾ, ಅದಕ್ಕೆ ಅಗ್ರಹಾರದ ವಿಪ್ರೋತ್ತಮರು "ಹಿಂದೆ ಮುಂದೆ ನೋಡುವ ಅಗತ್ಯವೇ ಇಲ್ಲ. ದೇವಸ್ಥಾನದಲ್ಲಿ ನಾವು ಪೂಜೆ ಮಾಡುತ್ತೇವೆ. ನೀವು ತಮಟೆ ಬಡಿಯುತ್ತಿರಿ. ನಮ್ಮ ದೇಶದ ಸಂಸ್ಕೃತಿ ಉಳಿಯಬೇಕಾದರೆ ನಾವಿಬ್ಬರೂ ಒಂದಾಗಲೇಬೇಕಿದೆ" ಎಂದರಂತಲ್ಲಾ, ಥೂತ್ತೇರಿ!

* * * * * * *




ಈ ವಿಪ್ರೋತ್ತಮರ ಸಲಹೆಯಿಂದ ಪುಳಕಿತರಾದ ಬಿ.ಎಸ್.ಪಿ. ಲೀಡರುಗಳು ವಿಪ್ರ ಸಮಾಜದ ಮುಖಂಡನನ್ನು "ನಮ್ಮ ಜೊತೆ ಬರುವಿರಾ" ಎಂದು ಕೇಳಲಾಗಿ, "ಅಯ್ಯಾ ಅದಕ್ಕಾಗಿಯೇ ಕಾಯುತ್ತ ಕುಳಿತಿದ್ದೆ. ನೋಡಿ, ಈ ದರಿದ್ರ ರಾಜಕೀಯ ಪಕ್ಷಗಳು ನಿಮ್ಮನ್ನು ಹೇಗೆ ಬಳಸಿಕೊಂಡವೊ ಅದೇರೀತಿ ನಮ್ಮನ್ನೂ ಕೂಡ ಬಳಸಿಕೊಂಡಿವೆ . ಪಾರ್ಟಿಗಳಿಗೆ ಪ್ರಣಾಳಿಕೆ ತಯಾರಿಸಿ ಕೊಡುವುದರಿಂದ ಹಿಡಿದು, ಸ್ಲೋಗನ್, ಭಾಷಣ ಬರೆಯಲು ಮಾತ್ರ ಮೀಸಲಾಗಿ ಉಳಿದುಬಿಟ್ಟಿದ್ದೇವೆ. ನಮ್ಮವರ ಸ್ಥಿತಿ ನೋಡಿದರೆ ಕನಿಕರವಾಗುತ್ತೆ. ಆ ದೇವೇಗೌಡರಿಗೆ ಭಾಷಣ ಬರೆದು ಕೊಡುತ್ತಿದ್ದವರೂ ನಮ್ಮವರೆ. ನಿಜಲಿಂಗಪ್ಪನಿಗೆ ಸಲಹೆ ಕೊಡುತ್ತಿದ್ದವರೂ ನಮ್ಮವರೆ. ನಾವು ಬರೀ ಇದೇ ಕೆಲಸ ಮಾಡುತ್ತ ಕೂರುವುದಾದರೆ ರಾಜ್ಯವಾಳುವುದು ಯಾವಾಗ? ನಾವು ನಿಮ್ಮ ಜೊತೆ ಕೈ ಜೋಡಿಸಲು ಸಿದ್ಧ. ನೀವು ಆ ತುದಿ, ನಾವು ಈ ತುದಿ. ಎರಡೂ ತುದಿಗಳು ಒಂದಾಗಿ ಈ ಮಧ್ಯಮ ಜಾತಿಗಳಿಗೆ ಉರುಳಾಗೋಣ. ಆ ಮುಖಾಂತರ ಇಲ್ಲಿ ದೇವಸ್ಥಾನಗಳ ಜೊತೆಗೆ ದಲಿತ ಕೇರಿಯೂ ಉದ್ಧಾರವಾಗುತ್ತದೆ" ಎಂದು ಮಾಯಾವತಿ ಮಕ್ಕಳ ಹಿಂದೆ ಹೋಗೇಬಿಟ್ಟರಂತಲ್ಲಾ, ಥೂತ್ತೇರಿ!!

* * * * * * *

ವಿಪ್ರ ಸಮಾಜದ ಮುಖಂಡರು ಬಿ.ಎಸ್.ಪಿ.ಜನರ ಹಿಂದೆ ಹೋಗೋದನ್ನ ನೋಡಿದ ಬಿ.ಜೆ.ಪಿ.ವಿಪ್ರರು ದುಸ್ವಪ್ನ ಕಂಡಂತೆ "ಕೂಡದು ಕೂಡದು, ಇದು ಎಂದೆಂದಿಗೂ ಅಸಂಭವ. ಶ್ರೇಷ್ಠ ಬಿ.ಜೆ.ಪಿ. ಬೆಂಬಲಿತರಾದ ನಾವು ದಲಿತ ಜನಾಂಗದ ಹಿಂದೆ ಹೋಗುವುದೆ? ಸಹೋದರರೆ ಇಲ್ಲಿ, ನಮ್ಮ ಮಾತನ್ನ ಕೇಳಿ. ನಮ್ಮ ಬಿ.ಜೆ.ಪಿ.ಯ ಪ್ರಧಾನ ಅಜೆಂಡಾವೇ ವಿಪ್ರರ ಹಿತ ಕಾಯುವುದಾಗಿದೆ. ಶ್ರೇಣೀಕೃತ ಸಮಾಜದಲ್ಲಿ ನಾವು ಪ್ರಧಾನವಾಗಿರಬೇಕೇ ಹೊರತು ಅಧೀನವಾಗಿರಬಾರದು. ನಮ್ಮ ಹಿರಿಯರು ಇಂತಹ ಹಠಹಿಡಿದ ಪ್ರಯುಕ್ತ ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾದ ನಂತರವಾದರೂ ನಮ್ಮ ವಾಜಪೇಯಿ ಪ್ರಧಾನಿಗಳಾಗಿ ಕನಿಷ್ಠ ಎರಡು ಡಜನ್ ವಿಪ್ರೋತ್ತಮರನ್ನು ಮಂತ್ರಿಗಳನ್ನಾಗಿ ಮಾಡಿದರು. ಆಗ ನಾವು ಪಡೆದುಕೊಂಡ ಸವಲತ್ತಿನಿಂದ ಬಿ.ಜೆ.ಪಿಯನ್ನು ಮತ್ತೆ ಬಲಪಡಿಸಬೇಕೇ ಹೊರತು, ಯಾವುದೇ ದಲಿತರ ಪಾರ್ಟಿ ಹಿಂದೆ ಹೋಗಬಾರದು" ಎಂದು ಕೂಗಿದರಂತಲ್ಲಾ, ಥೂತ್ತೇರಿ!!

* * * * * * *

ಬಿ.ಎಸ್.ಪಿ. ಹಿಂದೆ ಹೋದವರು ವಿಪ್ರೋತ್ತಮರ ಮಾತನ್ನ ಕೇಳಿಸಿಕೊಳ್ಳದೇ ಹೋದುದರಿಂದ, ಮತ್ತೂ ಮುಂದುವರಿದ ವಿಪ್ರ ಪಂಡಿತರು "ನೋಡಿ, ಮುಸ್ಲಿಮರು ಹೇಗೆ ಕಾಂಗ್ರೆಸ್ಸಿಗೆ ಓಟು ಮಾಡುತ್ತ ಬಂದಿದ್ದಾರೋ ನಾವು ಬ್ರಾಹ್ಮಣರು ಹಾಗೆ. ಬಿ.ಜೆ.ಪಿಗೆ ಓಟು ಮಾಡುತ್ತ ಬಂದಿದ್ದೇವೆ. ಬಿ.ಜೆ.ಪಿ ಒಂದು ಪಾರ್ಟಿಯಲ್ಲ, ಅದು ನಮ್ಮ ಧರ್ಮ. ಇಲ್ಲಿ ನಮ್ಮದೇ ಆದ ಆಚರಣೆಗಳಿವೆ. ನಮ್ಮದೇ ಆದ ಅಜೆಂಡಾಗಳಿವೆ. ಪ್ರಣಾಳಿಕೆಯಿದೆ. ಭಾಷಣಗಳಿವೆ, ಗರ್ಭಗುಡಿಯಿದೆ. ನಂತರ ನಮ್ಮದೇ ಶೈಲಿಯ ಭೋಜನವಿದೆ. ಇದೆಲ್ಲವನ್ನು ಬಿಟ್ಟು ಬಟ್ಟಂಬಯಲಲ್ಲಿರುವ ಬಿ.ಎಸ್.ಪಿ. ಸೇರುವುದು ಆತ್ಮಹತ್ಯಾತ್ಮಕ ತೀರ್ಮಾನ. ಇಂತಹ ತೀರ್ಮಾನ ತೆಗೆದುಕೊಂಡಿದ್ದೇ ಆದರೆ, ಈ ನಾಡಿನ ಲಿಂಗಾಯತರು ಮತ್ತು ಒಕ್ಕಲಿಗರು ನಮ್ಮನ್ನ ದಲಿತರೊಟ್ಟಿಗೆ ಸೇರಿಸಿ ವಿಚಾರಿಸಿಕೊಳ್ಳುತ್ತಾರೆ. ದಲಿತರೇನೋ ಶ್ರಮಿಕ ವರ್ಗ. ಅವರು ಲಿಂಗಾಯತರು. ಒಕ್ಕಲಿಗರ ಓಟುಗಳನ್ನು ಪಡೆದುಕೊಳ್ಳಬಲ್ಲರು. ನಾವು ಪಡೆಯಲು ಸಾಧ್ಯವೆ? ಕೈಮೀರಿ ಬಾರಿಸಿದ ಊಟದ ಒತ್ತಡವನ್ನೇ ತಡೆಯದೆ ನಿದ್ರೆ ಹೋಗುವ ನಾವು, ಒರಟು ಕೈನ ಒಕ್ಕಲಿಗರ ಏಟು ತಡೆಯಲು ಸಾಧ್ಯವೇ? ಯೋಚಿಸಿ! ಈಗಾಗಲೇ ಬದಲಾಗಿರುವ ರಾಜಕಾರಣದ ಪರಿಣಾಮವಾಗಿ ಕುಮಾರಸ್ವಾಮಿ ಅಭಿಮಾನಿಗಳ ಪಡೆ ರೆಡಿಯಾಗಿದೆ. ರೇವಣ್ಣನ ಗೂಂಡಾಪಡೆಯಿದೆ. ಡಿ.ಕೆ.ಶಿ.ರೆಜಿಮೆಂಟ್ ತನ್ನ ನಾಯಕನ ಆಜ್ಞೆಗೆ ಕಾಯುತ್ತಿದೆ. ಇನ್ನ ಎಡೂರಪ್ಪನ ಬೆಂಬಲಿತ ಮಠಗಳ ಪಡೆಯಂತೂ ನಮ್ಮನ್ನ ಸುಮ್ಮನೆ ಬಿಡುವುದಿಲ್ಲ. ನಮ್ಮ ಬಿ.ಜೆ.ಪಿ. ನಮಗೆ ಸುರಕ್ಷಿತವಾದ ಕೋಟೆ. ಈ ಕೋಟೆ ಹೊರಗೆ ವಿಪ್ರರು ಹೋದದ್ದೇ ಆದರೆ ಅವರ ಅವಸಾನ ಗ್ಯಾರಂಟಿ. ನೋಡಿ ಯೋಚಿಸಿ. ಬ್ರಾಹ್ಮಣ ಕುಲವನ್ನು ರಕ್ಷಿಸಿ" ಎಂದು ಗೋಳಾಡಿದ್ದಾರಂತಲ್ಲಾ, ಥೂತ್ತೇರಿ!!!



ಬಸವಗಂಗೋತ್ರಿ ಮಾಡುತ್ತೇನೆಂದು ಹೊರಟ ಮಾತೆ ಮಾರಿದ್ದು ಸೈಟುಗಳನ್ನು!

ಭೂ ಕಬಳಿಕೆ

ಮಾತೆ ಕ್ಯಾತೆ

ಬೆಂಗಳೂರು-ಮೈಸೂರು ರಸ್ತೆಯಲ್ಲಿ ಕೆಂಗೇರಿ ದಾಟಿ ಕುಂಬಳಗೋಡಿನ ಹತ್ತಿರ ಬಲಗಡೆ ಕಂಬೀಪುರ ಎಂಬ ಹಳ್ಳಿ ಇದೆ. ಅಲ್ಲಿ ಕುರುಬ ಸಮುದಾಯದ ಪುಟ್ಟಯ್ಯ ಕಾಳಮ್ಮ ಎಂಬ ಬಡ ರೈತರಿಗೆ ಸೇರಿರುವ ಎರಡು ಎಕರೆ ಜಮೀನು ಸ್ವಾಹ ಮಾಡಿ ಲೇಔಟ್ ಮಾಡಲು ಈ ಮಾತೆ ಒಂದು ಸ್ಕೆಚ್ ಹಾಕಿದ್ದಾರೆ.

ಕಾಯಿ ಬಿಟ್ಟರೆ ಬಸವಣ್ಣ ಎದ್ದು ನಿಂತರೆ ವಚನ, ಕುಂತರೆ ಆಧ್ಯಾತ್ಮ ಹರಿಸುವ ವೀರಶೈವರ ಜಾಗತಿಕ ನಾಯಕಿ ಮಾತೆ ಮಹಾದೇವಿ ಈಗ ಭೂಗಳ್ಳತನ ಶುರು ಮಾಡಿದ್ದಾರೆ.

ಬಿಂಜಗೆರೆಯವರ ಅನುದೇವಾ ಕೃತಿಯು ಬಸವಣ್ಣನ ಅವಹೇಳನ ಮಾಡಿದೆಯೆಂದು ಚೀರಿಕೊಂಡಿದ್ದ ಈಕೆ ಈಗ ಅದೇ ಬಸವಣ್ಣನಿಗೆ ತಾನು ಅಕ್ರಮವಾಗಿ ನುಂಗಲೆತ್ನಿಸಿರುವ ಜಮೀನು ಕಾಯುವ ವಾಚ್‌ಮನ್ ಸ್ಥಿತಿ ತಂದಿಟ್ಟಿದ್ದಾಳೆಂದರೆ ನೀವು ನಂಬುತ್ತೀರಾ!

ಬೆಂಗಳೂರು-ಮೈಸೂರು ರಸ್ತೆಯಲ್ಲಿ ಕೆಂಗೇರಿ ದಾಟಿ ಕುಂಬಳಗೋಡಿನ ಹತ್ತಿರ ಬಲಗಡೆ ಕಂಬೀಪುರ ಎಂಬ ಹಳ್ಳಿ ಇದೆ. ಅಲ್ಲಿ ಕುರುಬ ಸಮುದಾಯದ ಪುಟ್ಟಯ್ಯ-ಕಾಳಮ್ಮ ಎಂಬ ಬಡ ರೈತರಿಗೆ ಸೇರಿರುವ ಎರಡು ಎಕರೆ ಜಮೀನು ಸ್ವಾಹ ಮಾಡಿ ಲೇಔಟ್ ಮಾಡಲು ಈ ಮಾತೆ ಒಂದು ಸ್ಕೆಚ್ ಹಾಕಿದ್ದಾರೆ.

ಅದು ಉದ್ಭವ ಬಸವಮೂರ್ತಿ ಸ್ಥಾಪನೆ ಎಂಬ ಥರ್ಡ್ ಡಿಗ್ರಿ ಪ್ಲಾನ್!

ಬಸವಣ್ಣ 'ಪರಚಿಂತೆ ನಮಗೆ ಏಕೆ ಅಯ್ಯಾ' ಎಂದಿದ್ದರೆ ಈ ಮಾತೆ 'ಪರರ ಸ್ವತ್ತು ನಮಗೇ ಬೇಕು ಕಣಯ್ಯ' ಎನ್ನುತ್ತಾ ಆಡುತ್ತಿರುವ ಆಟ, ನಡೆಸುತ್ತಿರುವ ತಂತ್ರಗಾರಿಕೆ ನೋಡಿದರೆ ಸಾಕ್ಷಾತ್ ಬೆಂಗಳೂರಿನ ಎಕ್ಸ್‌ಪರ್ಟ್ ಭೂಗಳ್ಳರೇ ಬೆರಗಾಗಬೇಕು.



ರಾತ್ರೋರಾತ್ರಿ ಎದ್ದಿರುವ ಶೆಡ್ಡು



ಶೆಡ್ಡಿನೊಳಗೊಂದು 'ಉದ್ಭವ' ಬಸವಣ್ಣ

ಹಿಂದಿ ನಟ ಅಶೋಕ್‌ಕುಮಾರ್ ಆಸ್ತಿ

ಕುಂಬಳಗೋಡಿನ ರಾಜರಾಜೇಶ್ವರಿ ಡೆಂಟಲ್ ಕಾಲೇಜಿನ ಎದುರು ಮಾತೆ ಮಹಾದೇವಿಯ ಸುಪರ್ದಿಯಲ್ಲಿ ಸುಮಾರು 32 ಎಕರೆ ಜಮೀನಿದೆ. ಬಸವ ಗಂಗೋತ್ರಿ ಎಂದು ಇದಕ್ಕೆ ಹೆಸರಿಡಲಾಗಿದೆ. ಪ್ರಖ್ಯಾತ ಹಿಂದಿ ನಟ ಅಶೋಕ್ ಕುಮಾರ್‌ಗೆ ಸೇರಿದ್ದ ಈ ಜಮೀನನ್ನು ಮಾತೆ ಮಾದೇವಿ 12.10.1978 ರಲ್ಲಿ ಎರಡು ಲಕ್ಷ ಚಿಲ್ಲರೆ ಕೊಟ್ಟು ಖರೀದಿಸಿದ್ದರು. ಅಲ್ಲಿ ತಾನೊಂದು ಅನಾಥಾಶ್ರಮ, ಶಾಲೆ ಇತ್ಯಾದಿ ಕಟ್ಟುತ್ತೇನೆಂದು ಅಶೋಕ್‌ಕುಮಾರ್‌ಗೆ ಗೋಗರೆದು, ನಂಬಿಸಿ ಕಡಿಮೆ ರೇಟಿಗೆ ಜಾಗ ಗಿಟ್ಟಿಸಿದ್ದರು. ಮತ್ತೊಂದೆಡೆ ತನ್ನ ಪ್ರವಚನಗಳಿಗೆ ಬರುತ್ತಿದ್ದ ಭಕ್ತಾದಿಗಳಿಗೂ ಅದೇ ಕತೆ ಹೇಳಿ "ಉದಾರವಾಗಿ ದಾನ ಮಾಡಿ, ನೀವು ಬಂದಿಗೆಯೊಳಗೆ ಹಾಕುವ ದಾನದ ಹಣ ಶಬ್ದ ಮಾಡಬಾರದು" (ಅಂದರೆ ಚಿಲ್ಲರೆ ಕಾಸು ಹಾಕಬೇಡಿ ಅಂತ) ಎಂದೆಲ್ಲಾ ಗಿಮಿಕ್ ಮಾಡಿ ಕಾಸೆತ್ತಿ ಈ ಆಸ್ತಿ ಖರೀದಿಸಲಾಗಿತ್ತು.

ಇದು ಹೆಚ್ಚುಕಡಿಮೆ 30 ವರ್ಷದ ಹಿಂದಿನ ಕತೆ. ಆದರೆ ಈಗ ಪರಿಸ್ಥಿತಿ ಏನಾಗಿದೆ ಗೊತ್ತೆ? ಬೆಂಗಳೂರು ಬೆಳೆದು ಬೆಳೆದೂ 15 ಕಿಲೋಮೀಟರ್ ದೂರದ ಕುಂಬಳಗೋಡನ್ನು ದಾಟಿ ಹೋಗುತ್ತಿದೆ. ಅದೇ ಏರಿಯಾದಲ್ಲಿ ರಾಜರಾಜೇಶ್ವರಿ ಡೆಂಟಲ್ ಕಾಲೇಜ್, ಡಾನ್ ಬಾಸ್ಕೋ ಇಂಜಿನಿಯರಿಂಗ್ ಕಾಲೇಜುಗಳು ಬಂದಿವೆ. ತಾನು ಖರೀದಿಸಿದ ಜಾಗದಲ್ಲಿ ಅನಾಥಾಶ್ರಮ ಸ್ಥಾಪಿಸಬೇಕಿದ್ದ ಮಾತೆ ಅದರ ಬದಲಾಗಿ ಅಚ್ಚುಕಟ್ಟಾದ ಲೇಔಟ್ ಮಾಡಿ ಸೈಟಿಗೆ 10 ಲಕ್ಷದಂತೆ ಮಾರಿಕೊಳ್ಳುತ್ತಿದ್ದಾರೆ. ರೆಗ್ಯುಲರ್ ಆದಾಯ ಅಂತಲೂ ಕಾಸು ಬರಲಿ ಎಂದು ಎರಡು ಮದುವೆ ಛತ್ರಗಳನ್ನು ಕಟ್ಟಿಸಿಬಿಟ್ಟಿದ್ದಾರೆ. ಈ ಬ್ಯುಸಿನೆಸ್‌ನಲ್ಲೇ ಪೂರ್ತಿ ಮುಳುಗಿ ಹೋದ ಮೇಲೆ ಅನಾಥಾಶ್ರಮ, ವೃದ್ಧಾಶ್ರಮ ನೆನಪಾಗಬೇಕು ಹೇಗೆ?

ಆದರೂ ನೆಪ ಮಾತ್ರಕ್ಕಾದರೂ ಇರಲಿ ಎಂದು ಎರಡು ಬಿಲ್ಡಿಂಗ್ ಎಬ್ಬಿಸಿ ಉತ್ತರ ಕರ್ನಾಟಕದ ಆರು ಬಾಲಕರನ್ನು ಕರೆತಂದು ಅಲ್ಲಿರಿಸಲಾಗಿದೆ.

ಇದೆಲ್ಲಾ ಹೋಗಲಿ, ಅವರ ಜಾಗ, ಅವರ ಭಕ್ತರ ದುಡ್ಡು ಏನಾದರೂ ಮಾಡಿಕೊಳ್ಳಲಿ ಎಂದು ಸುಮ್ಮನಿರಬಹುದಿತ್ತು. ಆದರೆ ಯಾವಾಗ ಬಸವ ಗಂಗೋತ್ರಿ ಜಾಗವನ್ನು ಸೈಟ್ ಮಾಡಿ ಮಾರಿದ ದುಡ್ಡು ಹರಿದು ಬಂತೋ ಮಾತೆ ಮಹಾದೇವಿ ಆಧ್ಯಾತ್ಮವನ್ನು ಕೊಂಚ ಪಕ್ಕಕ್ಕಿಟ್ಟು ಈಗ ಫುಲ್‌ಟೈಂ ರಿಯಲ್ ಎಸ್ಟೇಟ್ ದಂಧೆ ಶುರು ಮಾಡಿಕೊಂಡಿದ್ದಾರೆ.

ಈಗ ಈಕೆಯ ಭೂದಾಹಕ್ಕೆ ಕಂಬೀಪುರದ ಅಮಾಯಕ ರೈತರು ಬಲಿಯಾಗುವ ಸನ್ನಿವೇಶ ಬಂದಿದೆ.

ಕಂಬೀಪುರದ ಪುಟ್ಟಯ್ಯ ಅವರಲ್ಲೊಬ್ಬ. ಈ ಪುಟ್ಟಯ್ಯನಿಗೆ ಕಂಬೀಪುರ ಸರ್ವೆ ನಂಬರ್ 43 ರಲ್ಲಿ ಒಟ್ಟು 8 ಎಕರೆ ಜಮೀನಿದೆ. ಆ ಪೈಕಿ 6 ಎಕರೆ ಆತನ ತಾಯಿ ದೊಡ್ಡಮ್ಮ ಎಂಬುವರಿಗೆ ಸರ್ಕಾರವೇ ದರಖಾಸ್ತಿನಲ್ಲಿ ಮಂಜೂರು ಮಾಡಿತ್ತು. ನಂತರ ಪುಟ್ಟಯ್ಯನಿಗೆ ಸರ್ವೆ ನಂಬರ್ 43/20 ರಲ್ಲಿ ಸರ್ಕಾರವೇ ಇನ್ನೆರಡು ಎಕರೆ ಮಂಜೂರು ಮಾಡಿದೆ. ಕಳೆದ 50 ವರ್ಷಗಳಿಂದ ಈ ಜಮೀನಿನಲ್ಲಿ ಉಳುಮೆ ಮಾಡಿಕೊಂಡು ಬದುಕುತ್ತಿದ್ದ ಈ ಬಡ ರೈತ ಕುಟುಂಬದ ಪಾಲಿಗೆ ಮಾತೇ ಮಹಾದೇವಿಯೇ ಈಗ ಕಂಟಕವಾಗಿ ಬಂದೆರಗಿದ್ದಾರೆ.

ಏನಾಗಿದೆಯೆಂದರೆ ಮಾತೆ ಮಹಾದೇವಿಗೆ ಸೇರಿರುವ ಬಸವಗಂಗೋತ್ರಿ ಹಾಗೂ ಪುಟ್ಟಯ್ಯನ ಜಮೀನು ಒಂದರ ಪಕ್ಕ ಇನ್ನೊಂದಿದೆ. ಬಸವ ಗಂಗೋತ್ರಿ ಜಾಗ ಮೈಸೂರು ರಸ್ತೆಯ ಬೆನ್ನಿಗೇ ಶುರುವಾಗಿ ಹಿಂಭಾಗಕ್ಕೆ ಒಟ್ಟು 32 ಎಕರೆ ವರೆಗೆ ಹರಡಿಕೊಂಡಿದೆ. ಈ ಜಮೀನು ಸರ್ವೆ ನಂಬರ್ 19, 30/5, 124, 125, 126, 127 ರಲ್ಲಿವೆ. ಇದೆಲ್ಲಾ ಪೂರ್ತಿ ಕುಂಬಳಗೋಡು ಗ್ರಾಮದ ಸರ್ವೆ ನಂಬರುಗಳು. ಇದರ ಬೆನ್ನಿಗೆ ಪುಟ್ಟಯ್ಯನ ಜಮೀನಿದ್ದು ಅದು ಕಂಬೀಪುರ ಗ್ರಾಮಕ್ಕೆ ಸೇರಿದೆ.

18ನೇ ಪುಟಕ್ಕೆ





ಪುಟ್ಟಯ್ಯನ ಮನೆ

'ವಾಚ್‌ಮನ್' ಬಸವಣ್ಣನ ಶೆಡ್ಡು

ಗೋ ಹತ್ಯೆಯೂ ನಡೆದಿದೆ



ಪೊಲೀಸರು ಕೆಡವಿದ ಶೆಡ್ಡು

ಇಲ್ಲಿರುವ ಎರಡು ಫೋಟೋಗಳನ್ನು ನೋಡಿ. ಒಂದರಲ್ಲಿ ಕಾಣುತ್ತಿರು... ಹಸುಗಳು ಪುಟ್ಟಯ್ಯ ಸಾಕಿಕೊಂಡಿದ್ದಂತವು. ಇನ್ನೊಂದು ಫೋಟೋದಲ್ಲಿ ಕಾಣು... ಮೂಳೆ-ತಲೆಬುರುಡೆಗಳು ಅವೇ ಹಸುಗಳದ್ದು.

ಹಾಲಿ ಭೂವಿವಾದವೇ ಈ ಹಸುಗಳ ಸಾವಿಗೆ ಕಾರಣವಾಗಿದೆ.

ಈ ಕಂಬೀಪುರದ ಪುಟ್ಟಯ್ಯನಿಗೆ ಪಿತ್ರಾರ್ಜಿತವಾಗಿ 6 ಎಕರೆ ಹಾಗೂ ... ಸ್ವಂತದ ಎರಡು ಎಕರೆ ಹೀಗೆ ಒಟ್ಟು 8 ಎಕರೆ ಜಮೀನಿತ್ತು, ಸರ್ವೆ ನಂಬ... 43/20 ರಲ್ಲಿರುವ ಎರಡು ಎಕರೆ ಪೈಕಿ ಒಂದೂವರೆ ಎಕರೆಯನ್ನು ಮಾ... ಮಹಾದೇವಿ ಈಗ ಅತಿಕ್ರಮಿಸಿ ಒತ್ತುವರಿ ಮಾಡಿ ಅಲ್ಲಿ ಉದ್ಭವ ಬಸವ... ಮೂರ್ತಿ ಸ್ಥಾಪಿಸಿ ತನ್ನ ಗ್ಯಾಂಗ್‌ನೊಂದಿಗೆ ಅಟ್ಟಹಾಸ ಮಾಡುತ್ತಿದ್ದಾ... ಮತ್ತೊಂದೆಡೆ ಸರ್ವೆ ನಂಬರ್ 43 ರಲ್ಲಿದ್ದ 6 ಎಕರೆಗೆ ಟಿ. ತಿಮ್ಮಯ್ಯನೆಂ... ಇನ್ನೊಬ್ಬ ಭೂಗಳ್ಳ ತಲೆ ಹಾಕಿದ್ದಾನೆ. ಇವನೊಬ್ಬ ನಿವೃತ್ತ ಐಎಎಸ್ ಅಧಿಕಾ... ಮತ್ತು ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನ ಅಳಿಯ. ಪುಟ್ಟಯ್ಯ... ಹೊಲದ ಇನ್ನೊಂದು ಬದಿಯಲ್ಲಿ ದೊಡ್ಡ ಹುಚ್ಚಮ್ಮ ಎಂಬುವರಿಗೆ ಸರ್ಕಾರದಿಂ... ಎಂದೋ ಮಂಜೂರಾಗಿದ್ದ ಭೂದಾಖಲೆಗಳನ್ನೇ ತಿರುಚಿ, ನಕಲಿ ಡೆ... ಸರ್ಟಿಫಿಕೇಟ್‌ಗಳನ್ನು ಸೃಷ್ಟಿಸಿಕೊಂಡು ಆಕೆ ತನ್ನ ತಾಯಿ ಎಂದು ಬಿಂಬಿ... ತಿಮ್ಮಯ್ಯ ಆಕೆಯ ಜಮೀನು ಕಬಳಿಸಿದ್ದಾನೆ. ಅಷ್ಟು ಸಾಲದೆಂಬಂತೆ ಪಕ್ಕದ... ಪುಟ್ಟಯ್ಯನಿಗೆ ಸೇರಿದ್ದ ಐದು ಎಕರೆ ಭೂಮಿಯನ್ನು ಈ ತಿಮ್ಮಯ್ಯ ಅತಿಕ್ರಮಿಸಿ ಬೇಲಿ ಹಾಕಿಕೊಂಡಿದ್ದಾನೆ. ಪುಟ್ಟಯ್ಯ ಇದನ್ನು ವಿರೋಧಿಸಿದಾಗ ತಲಘಟ್ಟಪುರ ಪೊಲೀಸರನ್ನು ಛೂಬಿಟ್ಟು ಪುಟ್ಟಯ್ಯ ಪತ್ನಿ ತಾಯಮ್ಮ, ಮಗ ಲೋಕೇಶ್‌ರನ್ನೆಲ್ಲಾ ಎಳೆದೊಯ್ದು ಲಾಕಪ್‌ನಲ್ಲಿಡಲಾಗಿತ್ತು. ಹೊಲದಲ್ಲೇ ಕಟ್ಟಿಕೊಂಡಿದ್ದ ಪುಟ್ಟಯ್ಯನ ಮನೆಯನ್ನು ಪೊಲೀಸರೇ ಮುಂದೆ ನಿಂತು ಕೆಡವಿ ಹಾಕಿದ್ದಾರೆ. ಆಗ ನೋಡಿಕೊಳ್ಳುವವರಿಲ್ಲದೆ, ಹುಲ್ಲು-ನೀರು ಸಿಗದೆ ಪುಟ್ಟಯ... ಎಂಟು ಹಸುಗಳು ಸತ್ತವು. ತಲಘಟ್ಟಪುರ ಪೊಲೀಸರು ತಮ್ಮ ಗೂಂಡಾಗಿರಿ... ಲಂಚದ ಶುಲ್ಕ ಪಡೆದು ನಿರ್ಗಮಿಸಿದ್ದರು. ಅತ್ತ ಯಾವಾಗ ತಿಮ್ಮಯ... ಗೂಂಡಾಗಿರಿ ಮಾಡಿ ಪುಟ್ಟಯ್ಯನ ಜಮೀನು ಕಬಳಿಸಿದನೋ ಆಗ ... ತುದಿಯಲ್ಲಿದ್ದ ಮಾತೆ ಮಹಾದೇವಿಗೂ ಜ್ಞಾನೋದಯವಾಗಿಬಿಟ್ಟಿತು. ಬಸ... ಕಲ್ಯಾಣ ಮಿಷನ್‌ಗೆ ಲಗತ್ತಾಗಿದ್ದ ಪುಟ್ಟಯ್ಯನ ಇನ್ನೆರಡು ಎಕರೆ ಮೇಲೆ ... ದಿವ್ಯದೃಷ್ಟಿ ಬೀರಿ ಈಗ ನುಂಗಲು ನಿಂತಿದ್ದಾರೆ. ಈಕೆ ಎಂಥ ಹೆಂಗಸೆಂದ... ತನ್ನ ಭೂಗಳ್ಳತನ ಮರೆಮಾಚಲು ಹಾಗೂ ಬಡಪುಟ್ಟಯ್ಯನನ್ನು ಬೆದರಿಸ... ಸಾಕ್ಷಾತ್ ಬಸವಣ್ಣನನ್ನೇ ಬೆದರುಬೊಂಬೆಯಂತೆ ಬಳಸುತ್ತಿದ್ದಾಳೆ.





ಸತ್ತ ಹಸುಗಳ ಎಲುಬುಗಳ...

ಬಸವಣ್ಣ ಅವತ್ತು
'ಕಳಬೇಡ, ಕೊಲಬೇಡ
ಹುಸಿಯ ನುಡಿಯಲು ಬೇಡ....'

ಎಂದೆಲ್ಲಾ ವಿವೇಕ ಹೇಳಿದ್ದು ನಿಜ. ಆದರೆ ಬಸವಣ್ಣ ಅನುಯಾ... ಎಂದು ಹೇಳಿಕೊಳ್ಳುವ ಮಾತೆ ಮಹಾದೇವಿ ಪರರ ಜಮೀನು ಕಳ... ಗೋಹತ್ಯೆ ನಿತ್ಯಸುಳ್ಳುಗಳ ಕಾಯಕ ನಡೆಸುತ್ತಿದ್ದಾರೆ.

ರಾಜ್ಯದ ವೀರಶೈವರು, ಮಾತೆಯ ಮುಗ್ಧ ಭಕ್ತರು ಸತ್ಯಾಂಶ ತಿಳಿಯಬೇಕೆಂದಿ... ಒಮ್ಮೆ ಕಂಬೀಪುರಕ್ಕೆ ಹೋಗಿ ಬರಲಿ.

ಬೆರಳು ತೋರಿಸಿದರೆ ಹಸ್ತ ನುಂಗುವವರನ್ನು ನೀವು ನೋಡಿರಬಹುದು. ಆದರೆ ಕಿರುಬೆರಳನ್ನು ತೋರಿಸಿದ್ದರೂ ಇಡೀ ಮನುಷ್ಯನನ್ನೇ ನುಂಗುವ ಜನರೂ ಇರುತ್ತಾರೆಂದರೆ ನೀವು ನಂಬಲೇಬೇಕು!


ಸಂಸದೆ ತೇಜಸ್ವಿನಿ ಬಗ್ಗೆ ಹೇಳಬೇಕಾದ ಮಾತಿದು.

ಕನಕಪುರ ಸಂಸದೆ ತೇಜಸ್ವಿನಿ ಶ್ರೀರಮೇಶ್.... ಕ್ಷಮಿಸಿ ಈಗ ತೇಜಸ್ವಿನಿ ಗೌಡ ಹಾಲಿ ಯಾವ ಪಾರ್ಟಿಲಿದ್ದಾರೆಂಬುದು ನಿಮಗೆ ಗೊತ್ತಾ?

ಈಕೆ ಎಲೆಕ್ಷನ್ ಗೆದ್ದಿದ್ದು ಕಾಂಗ್ರೆಸ್‌ನಿಂದ ಹಾಗೂ ಸೋಲಿಸಿದ್ದು ಜೆಡಿಎಸ್‌ನ ದೇವೇಗೌಡರನ್ನು ಎಂಬುದು ಬಹಳ ಪುರಾತನವಾದ ವಿಷಯ. ಆದರೆ ಈಗ ಅದೇ ತೇಜಸ್ವಿನಿ ದೇವೇಗೌಡರಿಗೆ ಬಹಳ ಕ್ಲೋಸು. ಅಷ್ಟೇ ಅಲ್ಲ, ಹೋದ ಬಂದಲ್ಲೆಲ್ಲಾ 'ಕುಮಾರಸ್ವಾಮಿ ಬಹಳ ದಕ್ಷ ಆಡಳಿತಗಾರ, ಅವರೇ ಸಿಎಂ ಆಗಿ ಮುಂದುವರೆಯಬೇಕು' ಎಂತಲೂ ಪ್ರಚಾರ ಕಾರ್ಯ ನಡೆಸುತ್ತಿದ್ದಾರೆ.

ಇದು ಈಕೆಯ ಒಂದು ಮುಖ.

ಮತ್ತೊಂದೆಡೆ 'ರಾಹುಲ್ ಗಾಂಧಿ ನನಗೆ ಬಹಳ ಕ್ಲೋಸ್. ಮೊನ್ನೆ ಉತ್ತರ ಪ್ರದೇಶ ಎಲೆಕ್ಷನ್ ಆದಾಗ ನಾನು ರಾಹುಲ್ ಜೊತೆಗೇನೇ ಪೂರ್ತಿ ಇದ್ದೆ, ಎಲ್ಲದಕ್ಕೂ ಅವರು ನನ್ನ advice ಕೇಳ್ತಿದ್ರು, ನಾನು ಹೇಳ್ತಿದ್ದೆ' ಅಂತ ಒಂದು ಸೂಪರ್ ಫಾಸ್ಟ್ ಸುಳ್ಳಿನ ರೈಲೂ ಓಡಿಸುತ್ತಿದ್ದಾರೆ. ಕಾಂಗ್ರೆಸ್ ಹೈಕಮಾಂಡಿನ ಮುಖವನ್ನೇ ನೋಡಿರದ ಎಷ್ಟೋ ಜನ ಲೋಕಲ್ ಕಾಂಗ್ರೆಸ್ ಲೀಡರ್‌ಗಳೆಲ್ಲಾ ಬೆಕ್ಕಸಬೆರಗಾಗುವಂತೆ ತೇಜಸ್ವಿನಿ-ಸೋನಿಯಾ ಮೇಡಂಗೂ ಬಹಳ ಕ್ಲೋಸಂತೆ ಎಂಬ ಕತೆಗಳೂ ಹಬ್ಬುತ್ತಿವೆ. ಒಂದು ಸೈಡ್‌ನಲ್ಲಿ ಇವೆಲ್ಲವನ್ನೂ ಮಾಡುತ್ತಿರುವ ತೇಜಸ್ವಿನಿ ಮತ್ತೊಂದೆಡೆ ಉದ್ಯಮ ಪ್ರಪಂಚದ ಬಹುದೊಡ್ಡ ಕುಳಗಳೊಂದಿಗೂ ವ್ಯವಹಾರಿಕ ಕನೆಕ್ಷನ್‌ಗಳನ್ನೂ ಸ್ಥಾಪಿಸಿಕೊಂಡಿದ್ದಾರೆ. ಲಗಡಪತಿ ರಾಜಗೋಪಾಲ್ ಅಂತವರಲ್ಲೊಬ್ಬ.





ಲಗಡಪತಿ ರಾಜಗೋಪಾಲ್

44 ವರ್ಷದ ಈ ಲಗಡಪತಿ ಕರೋಡ್‌ಪತಿಯೂ ಹೌದು. ಆಂಧ್ರದ ವಿಜಯವಾಡದಿಂದ ಕಾಂಗ್ರೆಸ್‌ನಿಂದ ಗೆದ್ದು ಮೊದಲ ಬಾರಿಗೆ ಎಂಪಿಯಾಗಿರುವ ಈ ರಾಜಗೋಪಾಲ್ ಒಡೆತನದಲ್ಲಿ ಒಂದು ಡಜನ್‌ಗಿಂತಲೂ ಜಾಸ್ತಿ ಕಂಪನಿಗಳಿವೆ. ಈತ ರಸ್ತೆ ನಿರ್ಮಾಣ, ವಿದ್ಯುತ್, ರಿಯಲ್ ಎಸ್ಟೇಟ್ ಅಂತೆಲ್ಲಾ ಕನಿಷ್ಠ 5 ಸಾವಿರ ಕೋಟಿ ರೂ.ಗಳ ವ್ಯವಹಾರ ಇಟ್ಟುಕೊಂಡಿದ್ದಾನೆ. LANCO ಎನ್ನುವುದು ಇವನ ಎಲ್ಲಾ ಕಂಪನಿಗಳ ಬ್ರಾಂಡ್ ನೇಮ್. ಅಂತಹ ಕಾಂಗ್ರೆಸ್‌ನ ಸಂಸದ ರಾಜಗೋಪಾಲ್‌ಗೆ ಈಗ ಕರ್ನಾಟಕದಲ್ಲಿ ರಸ್ತೆ, ವಿದ್ಯುತ್, ಕಟ್ಟಡ ನಿರ್ಮಾಣ, ಆರೋಗ್ಯ ಇಲಾಖೆ ಕಾಮಗಾರಿ ಎಂದು ಒಂದೂವರೆ ಸಾವಿರ ಕೋಟಿ ತನಕದ ಗುತ್ತಿಗೆ ಸಿಕ್ಕಿದೆ. ಇದನ್ನು ಬಹುಪಾಲು ಮಾಡಿಸಿಕೊಟ್ಟಿರುವುದು ಮತ್ತದೇ ಕಾಂಗ್ರೆಸ್‌ನ ಸಂಸದೆ ತೇಜಸ್ವಿನಿ.

ರಾಹುಲ್ ಗಾಂಧಿಗೇ ಗಾಳ!



ಕರ್ನಾಟಕದಲ್ಲಿ ಕಾಂಗ್ರೆಸ್ ವಿರೋಧಿಗಳಾದ ದಳ-ಬಜೆಪಿ ಸರ್ಕಾರವಿದೆ. ಆದರೂ ಕಾಂಗ್ರೆಸ್‌ನ ತೇಜಸ್ವಿನಿ ಯಾವ ತರದ ಲಿಂಕುಗಳನ್ನಿಟ್ಟುಕೊಂಡು ಆಂಧ್ರ ಎಂಪಿ ರಾಜಗೋಪಾಲನಿಗೆ ಈ ಡೀಲು ಕುದುರಿಸಿ ಕೊಟ್ಟದ್ದಾರೆಂಬುದು ಮಾತ್ರ ಸಸ್ಪೆನ್ಸ್.

ರಾಹುಲ್ ಗಾಂಧಿ ಎಷ್ಟು ಕ್ಲೋಸು?

ಕಳೆದ ವಾರ ಉಪರಾಷ್ಟ್ರಪತಿ ಎಲೆಕ್ಷನ್ ನಡೆದ ದಿನ ಸೋನಿಯಾ ಮತ ಚಲಾವಣೆಗೆಂದು ಸಂಸತ್ ಭವನಕ್ಕೆ ಬಂದಾಗ ಸಚಿವೆ ರೇಣುಕಾ ಚೌಧುರಿ ಹಾಗೂ ಕರ್ನಾಟಕ ಸಂಸದೆ ಪ್ರೇಮಾ ಕಾರಿಯಪ್ಪ ಅವರ ಜೊತೆ ಇದ್ದರು. ಆದರೆ ಸೋನಿಯಾ ನಡೆದು ಬರುತ್ತಿದ್ದಾಗ ಯಾವುದೋ ಮೂಲೆಯಲ್ಲಿದ್ದ ತೇಜಸ್ವಿನಿ ಚಕ್ಕೆಂದು ಮಧ್ಯೆ ನುಗ್ಗಿ ಸೋನಿಯಾಗೇ ಅಂಟಿಕೊಂಡು ನಾಲ್ಕು ಹೆಜ್ಜೆ ಹಾಕಿ ಫೋಟೋ ತೆಗೆಸಿಕೊಂಡಿದ್ದರು. ಮಾರನೇ ದಿನದ ಪತ್ರಿಕೆಗಳಲ್ಲೆಲ್ಲಾ ಅದೇ ಫೋಟೋ ಪ್ರಿಂಟಾಗಿತ್ತು, ಆ ಫೋಟೋಗಳನ್ನೇ ಈಗ ಊರಿಗೆಲ್ಲಾ ತೋರಿಸಿಕೊಂಡು ತಿರುಗುತ್ತಿರುವ ತೇಜಸ್ವಿನಿ "ನಾನು ಸೋನಿಯಾ ಮೇಡಂಗೆ ಬಹಳ ಕ್ಲೋಸು" ಅಂತ ಹೇಳುತ್ತಿದ್ದಾರೆ. ಕೆಲ ಕಾಂಗ್ರೆಸಿಗರು 'ಇದ್ದರೂ ಇರಬಹುದು' ಅಂತ ನಂಬಿಯೂ ಇವೆ. ಆದರೆ ಅದಕ್ಕಿಂತಲೂ ಮಜಾ ವಿಚಾರ ಇನ್ನೊಂದಿದೆ.

ಬಿಳಿದಾಳೆ ಈಶ

ಅದು 'ನಾನು ರಾಹುಲ್ ಬಹಳ ಫ್ರೆಂಡ್ಸ್' ಎಂದು ಇದೇ ತೇಜಸ್ವಿನಿ ರೂಮರ್ ಹಬ್ಬಿಸುತ್ತಿರುವುದು. ಕ್ಲೋಸು ಅಂದರೆ ಯಾವ ತರದ್ದು, ಯಾವಾಗಿನಿಂದ ಮತ್ತು ಯಾಕೆ ಎಂಬ ಡೌಟುಗಳಿಗೆ ತೇಜಸ್ವಿನಿ ಹತ್ತಿರ ಉತ್ತರ ಇಲ್ಲ. ಇಂದಿರಾಗಾಂಧಿ ಫ್ಯಾಮಿಲಿ ಬಗ್ಗೆ ತಿಳಿದಿರುವವರಿಗೆ, ಕಾಂಗ್ರೆಸ್ ಹೈಕಮಾಂಡ್ ಸೋನಿಯಾ ಅಂದರೇನು ಅಂತ ಗೊತ್ತಿರುವವರಿಗೆ ಈಕೆಯ ಮಾತೆಲ್ಲಾ ಬರೀ ಬೊಗಳೆ ಎಂಬುದು ಗೊತ್ತಿರುತ್ತದೆ. ಆದರೂ ತೇಜಸ್ವಿನಿ ಪದೇಪದೇ 'ನಂಗೆ ರಾಹುಲ್ ಗಾಂಧಿ ಕ್ಲೋಸು' 'ಯುಪಿ ಎಲೆಕ್ಷನ್ ನಡೆದಾಗ ರಾಹುಲ್ ನನ್ನ ಜೊತೇಲೇ ಇರಿಸಿಕೊಂಡಿದ್ದರು' 'ರಾಹುಲ್‌ಗೆ ನಾನೇ ಅಡ್ವೈಸರ್' ಅಂತೆಲ್ಲಾ ಹೋದಲ್ಲಿ ಬಂದಲ್ಲಿ ಟಾಂಟಾಂ ಹೊಡೆಯುತ್ತಿದ್ದರೆ ಕೇಳಿಸಿಕೊಂಡವರಿಗೆ ಇದೇನಿದು ವಿಚಿತ್ರ ಅನ್ನಿಸದಿರುತ್ತದೆಯೇ?

ಇಷ್ಟಕ್ಕೂ ಯುಪಿ ಎಲೆಕ್ಷನ್‌ನಂಥ ದೊಡ್ಡ ವ್ಯವಹಾರ ನಿಭಾಯಿಸಲು ತೇಜಸ್ವಿನಿ ಯಾವ ಎಕ್ಸ್‌ಪರ್ಟ್ ಹೇಳಿ?

ಹೀಗೆ ಕಾಂಗ್ರೆಸ್ ಅಧಿನಾಯಕಿ ಸೋನಿಯಾ ಹಾಗೂ ಇನ್ನೂ ಅವಿವಾಹಿತ ರಾಜಕುಮಾರ ರಾಹುಲ್ ಹೆಸರೇಳಿಕೊಂಡು ತನ್ನ ಇಮೇಜ್ ಬೆಳೆಸಿಕೊಳ್ಳುವ ಸರ್ಕಸ್ ನಡೆಸುತ್ತಿರುವ ತೇಜಸ್ವಿನಿ ಅದರಲ್ಲಿ ಸ್ವಲ್ಪ ಸಕ್ಸಸ್ ಆಗಿರುವಂತಿದೆ.


ಈ ಹಿನ್ನೆಲೆಯಲ್ಲೇ ತೇಜಸ್ವಿನಿಗೆ ಆಂಧ್ರ ಸಂಸದ ಲಗಡಪತಿ ರಾಜಗೋಪಾಲ್ ಲಿಂಕ್ ಸಿಕ್ಕಿರುವುದು.

ರಾಜಗೋಪಾಲ್-ಕುಮಾರಣ್ಣ ಡೀಲ್‌ಗಳು

ಹೈದರಾಬಾದ್, ಮುಂಬೈ, ದೆಹಲಿ- ಹೀಗೆ ಎಲ್ಲೆಂದರಲ್ಲಿ ರಾಜಗೋಪಾಲ್ ಜೊತೆ ಮುಖಾಮುಖಿಯಾಗುತ್ತಿರುವ ತೇಜಸ್ವಿನಿ ತನ್ನ ಸ್ವಪಕ್ಷದ ಸಂಸದನ ಬ್ಯುಸಿನೆಸ್ ಕರ್ನಾಟಕದಲ್ಲೂ ಬೆಳೆಯಲು ಅರೇಂಜ್ ಮಾಡಿಕೊಟ್ಟದ್ದಾರೆ.



[illegible] ಚುನಾವಣೆ ಸಂದರ್ಭ: ಸೋನಿಯಾಗಾಂಧಿ ಬರುವಾಗ ಮೂಲೆಯಲ್ಲಿ ನಿಂತಿರುವುದು



ಸೋನಿಯಾಗಾಂಧಿಗೆ ವಿಶ್ ಮಾಡುವ ನೆಪದಲ್ಲಿ ಅವರ ಹತ್ತಿರಕ್ಕೆ ಬರುವುದು



ಸೋನಿಯಾ ಜೊತೆ ಒಂದೆರಡು ಹೆಜ್ಜೆ ಹಾಕಿ ಅವರು ಕ್ಲೋಸ್ ಎನ್ನುವ ಪೋಜು ನೀಡುತ್ತಿರುವುದು

LANCO ಗ್ರೂಪ್ ಆಫ್ ಕಂಪನೀಸ್‌ನ ಒಡೆಯ ರಾಜಗೋಪಾಲ್‌ಗೆ ಈಗಾಗಲೇ ಬೆಂಗಳೂರು ಹೊಸಕೋಟೆ-ಮುಳಬಾಗಿಲು 81 ಕಿ.ಮೀ. ರಸ್ತೆ ಕಾಮಗಾರಿ, ನೆಲಮಂಗಲ-ದೇವನಹಳ್ಳಿ ನಡುವೆ 6 ಲೇನ್‌ಗಳ 16 ಕಿ.ಮೀ. ರಸ್ತೆ ಕಾಂಟ್ರಾಕ್ಟ್ ಸಿಕ್ಕಿದೆ. ಒಟ್ಟು 1006 ಕೋಟಿ ಮೊತ್ತದ ಈ ಕಾಮಗಾರಿ ಪಿಡಬ್ಲ್ಯೂಡಿ ಇಲಾಖೆದು. ಅಂದರೆ ಗೌಡರ ಸುಪುತ್ರ ರೇವಣ್ಣನ ಇಲಾಖೆ ಇದು. ಇದಲ್ಲದೆ ಆರೋಗ್ಯ ಇಲಾಖೆಯ 'ಸಾರ್ವಜನಿಕ ಆರೋಗ್ಯ ಕೇಂದ್ರಗಳ ಉನ್ನತೀಕರಣ' ಯೋಜನೆಯ 55 ಕೋಟಿ ರೂ. ಗುತ್ತಿಗೆಯೂ ಇದೇ ರಾಜಗೋಪಾಲ್‌ಗೆ ಸಿಕ್ಕಿದೆ. ಬೆಳಗಾಂನಲ್ಲಿ ತಲೆ ಎತ್ತುತ್ತಿರುವ 45 ಕೋಟಿ ವೆಚ್ಚದ ಸರ್ಕಾರಿ ಮೆಡಿಕಲ್ ಕಾಲೇಜ್ ಕಟ್ಟಡದ ಕಾಮಗಾರಿಯೂ ರಾಜಗೋಪಾಲ್‌ಗೆ ಸಿಕ್ಕಿದೆ.

ಇದಿಷ್ಟೇ ಅಲ್ಲ, ಈಗ ವಿವಾದಕ್ಕೆ ತುತ್ತಾಗಿರುವ ನಾಗಾರ್ಜುನ ಕಂಪನಿಯ ಮಂಗಳೂರು ಉಷ್ಣ ವಿದ್ಯುತ್ ಸ್ಥಾವರವೂ ತೇಜಸ್ವಿನಿ ಮಿತ್ರ ರಾಜಗೋಪಾಲ್‌ದೇನೆ! ಒಂದು ಸಾವಿರ ಕೋಟಿ ಬಂಡವಾಳದ ಈ ವ್ಯವಹಾರದ 74% ಷೇರುಗಳು ರಾಜಗೋಪಾಲ್ ಕೈಲಿದೆ.

ಹೀಗೆ ನೆರೆಯ ಆಂಧ್ರದ ಕಾಂಗ್ರೆಸ್ ಎಂಪಿ ರಾಜಗೋಪಾಲ್‌ಗೆ ಕರ್ನಾಟಕದಲ್ಲಿ ಅದರಲ್ಲೂ ಬದ್ಧವೈರಿ ಜೆಡಿಎಸ್ ಸರ್ಕಾರದ ಮೂಲಕ ಒಂದೂವರೆ ಸಾವಿರ ಕೋಟಿ ರೂ.ನಷ್ಟು ಕಾಂಟ್ರಾಕ್ಟ್ ಸಿಗುತ್ತದೆ ಎಂದರೆ ಹುಡುಗಾಟದ ಮಾತಲ್ಲ, ರಾಜಗೋಪಾಲ್ ಹಾಗೂ ಕುಮಾರಸ್ವಾಮಿ ನಡುವೆ ಡೀಲ್ ಕುದುರಿದ್ದೆ ಇದು ಸಾಧ್ಯವಿಲ್ಲ.

ತೇಜಸ್ವಿನಿ ಕೈವಾಡ ಇದು.

ಒಂದೆಡೆ ನಾನು ರಾಹುಲ್ ಗಾಂಧಿಗೆ ಕ್ಲೋಸು ಎಂದು ಬಿಂಬಿಸಿಕೊಂಡೇ ಅನೇಕ ಉದ್ಯಮಪತಿಗಳ ಸ್ನೇಹಗಳಿಸುವುದು, ಮತ್ತೊಂದೆಡೆ ದೇವೇಗೌಡ ಅಂಡ್ ಸನ್ಸ್‌ರನ್ನು ಹೊಗಳುತ್ತಾ ಅನೇಕ ವ್ಯವಹಾರಗಳನ್ನು ಕುದುರಿಸುವುದು ನಡೆಯುತ್ತಿದೆ. ಮುಖ್ಯವಾಗಿ ರಾಹುಲ್‌ಗಾಂಧಿಗೇ ತೇಜಸ್ವಿನಿ ಗಾಳ ಹಾಕುತ್ತಿದ್ದಾರೆ.

ಇದು ಹೀಗೇ ಮುಂದುವರೆದರೆ ಆ ರಾಹುಲ್ ಗಾಂಧೀನ [illegible] ಮಹಾತ್ಮ ಗಾಂಧಿ [illegible] [illegible]!

ಕಸ್ತೂರಿ ಚಾನಲ್ಲೂ, ಸೈಟು, ಸಿನಿಮಾ, ಯೋಗೀಶ್ವರಾ... ಒಂದಾ ಎರಡಾ!

ತೇಜಸ್ವಿನಿಯ ಮುಂದುವರೆದ ಪ್ರತಾಪ ಇದು. ತನ್ನ ರಾಜಕೀಯ ಗುರು ಡಿ.ಕೆ. ಶಿವಕುಮಾರ್‌ಗೇ ಕೈಕೊಟ್ಟು ಈಗ ದೇವೇಗೌಡರ ಪಾಳಯ ಸೇರಿರುವ ತೇಜಸ್ವಿನಿಗೆ ಸದ್ಯದಲ್ಲೇ ಕಸ್ತೂರಿ ಚಾನಲ್ ನಿರ್ದೇಶಕಿ ಹುದ್ದೆ ಸಿಗಲಿದೆ ಎಂಬ ರೂಮರ್‌ಗಳಿವೆ. ಅದಿಷ್ಟೇ ಆಗಿದ್ದರೆ ಯಾರೂ ಗಾಬರಿಯಾಗಬೇಕಿರಲಿಲ್ಲ, ಮುಂಗಾರು ಮಳೆ ನಿರ್ಮಾಪಕ ಕೃಷ್ಣಪ್ಪ ಸದ್ಯದಲ್ಲೇ ತೇಜಸ್ವಿನಿಯನ್ನೇ ಹೀರೋಯಿನ್ ಮಾಡಿ ಹೊಸ ಸಿನಿಮಾ ತೆಗೀತಾರಂತೆ ಎಂಬ [illegible] ಸುದ್ದಿ ಕೂಡ ಕೇಳಿಬರುತ್ತಿದೆ. ಜೊತೆಗೆ ಕುಮಾರಸ್ವಾಮಿಯ ಪುಂಡ ಪುತ್ರ, [illegible] ಗೌಡನನ್ನು [illegible] [illegible] ಮಾಡಲು ಕೃಷ್ಣಪ್ಪ [illegible].

ಈ ಮಧ್ಯೆ, [illegible] ಕಾಂಗ್ರೆಸ್ [illegible] ಯೋಗೇಶ್ವರ್ [illegible] [illegible]



ತೇಜಮ್ಮ ರಾಜರಾಜೇಶ್ವರಿ ನಗರದಲ್ಲೇ 25 ಲಕ್ಷಕ್ಕೆ ಮನೆಯೊಂದನ್ನು ಲೀಸ್‌ಗೆ ಹಾಕಿಸಿಕೊಂಡಿದ್ದಾರೆ. ಈ ಮಧ್ಯೆ ಯೋಗಿ..... ಯೋ....ಗಿ ಅಂತ ತೇಜಮ್ಮ ಹುಡುಕಿಕೊಂಡು ತಿರುಗಿದರೂ ಅವನು ಕೈಗೆ ಸಿಗದೆ ತಪ್ಪಿಸಿಕೊಂಡು ಓಡಾಡುತ್ತಿದ್ದಾನೆ. ಅಂತ ಕರ್ಮ ಯೋಗೇಶ್ವರ್ ಯಾಕೆ ತಂದುಕೊಂಡನೋ ಭಗವಂತನೇ ಬಲ್ಲ.



ಈ ಮಧ್ಯೆ, ಮೊನ್ನೆ ರಾಜರಾಜೇಶ್ವರಿ ನಗರದಲ್ಲೇ ತೇಜಮ್ಮ ಎರಡೂವರೆ ಸಾವಿರ ಚದರಡಿಯ ಜಾಗ ಒಂದನ್ನು ಖರೀದಿಸಿದ್ದಾರೆ. ಚದರಡಿಗೆ ಸಾವಿರದೈನೂರಂತೆ ಲಗಡಪತಿ ರಾಜಗೋಪಾಲನೆ ಕಾಸು ಕಳಿಸಿಕೊಟ್ಟನಂತೆ ಅಂತ ಇನ್ನೊಂದು ರೂಮರ್ ಇದೆ.

ಇಷ್ಟಾದರೆ ಪರವಾಗಿಲ್ಲ, ಅದುಬಿಟ್ಟು 'ರಾಹುಲ್ ಗಾಂಧೀನೇ ನನಗೆ ಈ ಸೈಟು ಕೊಡಿಸಿದ್ದು ನಾಳೆ ಮನೇನೂ ಕಟ್ಟಿಸಿ ಕೊಡ್ತಾರೆ' ಅಂತ ತೇಜಮ್ಮ ಹೇಳಿಕೊಂಡು ಓಡಾಡಿದರೆ ಏನು ಮಾಡೋಕಾಗುತ್ತೆ ಹೇಳಿ?

ಅಂದಹಾಗೆ ತೇಜಮ್ಮ ಈಗ ತಾನೆ ತೇಜಸ್ವಿನಿ ಶ್ರೀರಮೇಶ್ ಎಂದಿದ್ದ ತನ್ನ ಹೆಸರಲ್ಲಿ 'ಶ್ರೀರಮೇಶ'ನನ್ನು ಕಿತ್ತು ಬಿಸಾಕಿ ಬರೀ ತೇಜಸ್ವಿನಿ ಗೌಡ ಎಂದು ಬದಲಾಯಿಸಿಕೊಂಡಿದ್ದಾರೆ. ಈ ಸುದ್ದಿ ಕೇಳಿದ ಯಾರೋ 'ರಮೇಶ್ ಪದ ಬೇಕಿರದಿದ್ದರೆ 'ತೇಜಸ್ವಿನಿ. ಆರ್' ಅಂತ ಬದಲಾಯಿಸಬಹುದಿತ್ತಲ್ಲ ಅಂತ ಕೇಳಿದರಂತೆ.

ಅದಕ್ಕೆ ಇನ್ಯಾರೋ 'ಬೇಡ ಸುಮ್ಮನಿರಿ, ಆಮೇಲೆ ಇದರರ್ಥ ತೇಜಸ್ವಿನಿ ರಾಹುಲ್ ಇರಬಹುದು ಅಂತ ಜನ ಡೌಟು ಪಡೋ ರೀತೀಲಿ ತಾನೇ ವರ್ತಿಸುತ್ತಾ ಪ್ರಚಾರ ಮಾಡಿಕೊಂಡು ಖುಷಿಪಡೋ ಜನಾ ಇದ್ದಾರೆ' ಅಂದರಂತೆ!

ಕಲಬುರ್ಗಿ: ಪಾಯಿಖಾನೆಯನ್ನು ಹೊತ್ತು ಬಂದ ಸುಮಾರುಸ್ವಾಮಿ ನಾಟಕ ಮಂಡಳಿ

ಮುಖ್ಯಮಂತ್ರಿಗಳ ಊಳಿಗಕ್ಕೆ ನಿಂತಿರುವ ಕೆಲವು ಜನ ಪಿಂಜರಾಪೋಲು ಪತ್ರಕರ್ತರು ಕುಮಾರಸ್ವಾಮಿಯನ್ನು ಇತ್ತೀಚೆಗೆ 'ದೊರೆ' ಎಂದು ಸಂಬೋಧಿಸತೊಡಗಿದ್ದಾರೆ. ಹಾಗಾಗಿ ಈ ದೊರೆ ತಿನಿದರೂ, ಕೆಮ್ಮಿದರೂ, ಏನು ಮಾಡಿದರೂ ಅದು ಸುದ್ದಿಯಾಗುತ್ತದೆ. ರಾತ್ರಿ ಹಳ್ಳಿಗಳಲ್ಲಿ ವಾಸ್ತವ್ಯ ಹೂಡುತ್ತೇನೆ ಎಂಬುದನ್ನೇ ಸರ್ಕಾರದ ಬಹುದೊಡ್ಡ ಸಾಧನೆ ಎಂಬಂತೆ ಬಿಂಬಿಸುತ್ತಿರುವ ಕುಮಾರಸ್ವಾಮಿಯ ನಾಟಕಕ್ಕಂತೂ ಮಿತಿಯೇ ಇಲ್ಲವಾಗಿದೆ. ಇಷ್ಟು ದಿನ ದೂರದ ಊರುಗಳಲ್ಲಿ ವಾಸ್ತವ್ಯ ಹೂಡಿ ಸುದ್ದಿ ಮಾಡಿದ್ದ ಸು(ಕು)ಮಾರ ಸ್ವಾಮಿಯ ನಾಟಕ ತಂಡ ಇತ್ತೀಚೆಗೆ ಕಲಬುರ್ಗಿ ಜಿಲ್ಲೆಗೆ ಕಾಲಿಕ್ಕಿತ್ತು.




ಸುರಪುರ ತಾಲ್ಲೂಕಿನ ಕನ್ನೆಳ್ಳಿ ಹಾಗೂ ಚಿತ್ತಾಪುರ ತಾಲ್ಲೂಕಿನ ದೋಣಗಾಂವ್ ಗ್ರಾಮದಲ್ಲಿ ಒಂದೊಂದು ರಾತ್ರಿ ತಂಗುವ ನಾಟಕ ಮಾಡಿದರು. 'ದೊರೆ' ಹೆಲಿಕಾಪ್ಟರ್ ಮೂಲಕ ಹಳ್ಳಿಗೆ ಕಾಲಿಕ್ಕುತ್ತಾನೆಂದರೆ ಈ ಹಳ್ಳಿಗಳು ಸಿಂಗಾರಗೊಳ್ಳದೆ ಉಳಿದಾವೆಯೇ? ಅವು ಮೇಲ್ನೋಟಕ್ಕೆ ಸಿಂಗಾರಗೊಂಡು ಥಳಥಳಿಸುವಂತೆ ಕಂಡುಬಂದರೂ ಅವುಗಳ ಒಡಲೊಳಗೆ ನೂರಾರು ಸಮಸ್ಯೆಗಳ ಹೆಗ್ಗಣಗಳನ್ನು ಇಟ್ಟುಕೊಂಡೆ ಇದ್ದವು. ಆದರೆ ಅವನ್ನು ನೋಡುವ ವ್ಯವಧಾನವಾಗಲಿ, ಕೇಳಿಸಿಕೊಳ್ಳುವ ಕಿವಿಯಾಗಲಿ ನಮ್ಮ ಯಾವುದೇ ರಾಜಕಾರಣಿಗೆ ಇರಲಿಲ್ಲ. ಹೋಗಲಿ, ಪ್ರಜಾಪ್ರಭುತ್ವದ ನಾಲ್ಕನೆಯ ಕಂಬ ಎಂದೇ ಕರೆಯುವ ಪತ್ರಕರ್ತ ಮಿತ್ರರಿಗೆ ಇದು ಕಾಣದೇ ಹೋದದ್ದು ಪರಿಸ್ಥಿತಿಯ ದುರಂತವೆನ್ನದೆ ವಿಧಿ ಇಲ್ಲವಾಗಿದೆ. ಹೀಗಾಗಿ ಕುಮಾರಸ್ವಾಮಿ ನಾಟಕ ಮಂಡಳಿ ಒಂದೆರಡು ದಿನ ತನ್ನ ಸರ್ಕಸ್ ಪ್ರದರ್ಶಿಸಿ ಮತ್ತೆ ಮೂಲ ಡ್ರಾಮಾ ಸ್ಥಳಕ್ಕೆ (ಬೆಂಗಳೂರಿಗೆ) ಹೋಗಿ ನಿಂತಿದೆ.

ಆದರೆ ಈ ನಾಟಕದ ಹೆಸರಿನಲ್ಲಿ ಸರ್ಕಾರದ ಬೊಕ್ಕಸಕ್ಕೆ ಇಟ್ಟ ಕನ್ನಕ್ಕಂತೂ ಲೆಕ್ಕವೇ ಇಲ್ಲ. ಓಬಿರಾಯನ ಕಾಲದಲ್ಲಿ ನಿರ್ಮಿಸಿದ್ದ ರಸ್ತೆಗಳಿಗೆ ಅಲ್ಲಲ್ಲಿ ತೇಪೆ ಹಾಕಿ, ಕೆಲವು ಕಡೆ ಕೆಂಪು ಮರಮ್ಮ ಚೆಲ್ಲಿ ಕೋಟ್ಯಂತರ ಬಿಲ್‌ಗಳನ್ನು ನುಂಗಿದ್ದೇ ಸಾಧನೆಯಾಯ್ತು. ಒಂದು ವಾರಕ್ಕೂ ಹೆಚ್ಚು ಕಾಲ ಮುಖ್ಯಮಂತ್ರಿಗಳು ಬರುತ್ತಾರೆ ಎಂಬುದನ್ನೇ ಮುಂದಿಟ್ಟುಕೊಂಡ ಅಧಿಕಾರಿ ವರ್ಗ ಯಾವ ಕೆಲಸವನ್ನೂ ಮಾಡದೆ ಗಪ್‌ಚುಪ್ ಕುಳಿತುಬಿಟ್ಟಿತ್ತು. ಜಿಲ್ಲೆಯ ಮುಖ್ಯಾಧಿಕಾರಿಯಾದ ಡಿ.ಸಿ. ಪಂಕಜಕುಮಾರ ಪಾಂಡೆ, ಪೊಲೀಸ್ ಜಿಲ್ಲಾ ವರಿಷ್ಠಾಧಿಕಾರಿ ಖರ್ಚೆಕರ್ ಮುಖ್ಯಮಂತ್ರಿಗಳ ಅಂಡು ಕಾಯಲು ತುದಿಗಾಲ ಮೇಲೆ ನಿಂತಿರುವಾಗ ಉಳಿದವರ ಪಾಡೇನು? ಯಾವುದೇ ಸಾರ್ವಜನಿಕರ ಕೆಲಸಗಳು ಜರುಗದೆ ಸಂಪೂರ್ಣ ಜಿಲ್ಲಾಡಳಿತವೇ ಕುಸಿದು ಕುಳಿತಿತ್ತು.

ಈ ಯಾವುದರ ಖಬರು ಇಲ್ಲದ ತಿಳಿಗೇಡಿ ಪುಢಾರಿಗಳು ಮಾತ್ರ ನಾಲ್ಕೆಂಟು ದಿನ ಬಿಳಿಯ ಜುಬ್ಬ ಧೋತಿ ಹಾಕಿ ಟ್ರಿಮ್ ಆಗಿ ತಿರುಗಾಡಿದ್ದೇ ತಿರುಗಾಡಿದ್ದು! ಮಂತ್ರಿ ದರ್ಶನಾಪುರ, ಬಂಡೆಪ್ಪ ಕಾಶಂಪುರ, ಶಾಸಕರಾದ ವೀರಬಸವಂತರೆಡ್ಡಿ ಮುದ್ನಾಳ್, ನರಸಿಂಹನಾಯಕ, ವಿಶ್ವನಾಥ ಪಾಟೀಲ್ ಹೆಬ್ಬಾಳ್ ಮುಂತಾದ ಜಿ.ಪಂ. ಹಾಗೂ ತಾಲ್ಲೂಕ್ ಪಂಚಾಯತಿಯ ಪುಢಾರಿ ವರ್ಗ ಕು(ಸು)ಮಾರ ಸ್ವಾಮಿ ಹೋದಲ್ಲಿ ಬಂದಲ್ಲಿ ಉಘೇ ಉಘೇ ಎಂಬ ಬಹುಪರಾಕಿನ ಮಾತುಗಳನ್ನೇ ಆಡುತ್ತ ಜನಸಾಮಾನ್ಯರಲ್ಲಿ ಹೇಸಿಗೆ ಹುಟ್ಟಿಸಿದ್ದರು. ಕುಮಾರಸ್ವಾಮಿ ಹೋದಲ್ಲಿ ಬಂದಲ್ಲಿ ಅವರ ಹಿಂದೆ ಹಿಂಡಿಂಡು ವಾಹನಗಳನ್ನು ತಕ್ಕೊಂಡು ಧೂಳೆಬ್ಬಿಸುತ್ತ ಹೋದ ದೃಶ್ಯ ಹೈದ್ರಾಬಾದ್ ನಿಜಾಮನ ಶೈಲಿ ಮೀರಿಸುತ್ತಿತ್ತು. ಎಲ್ಲಿ ನೋಡಿದರಲ್ಲಿ ಡಿಜಿಟಲ್ ಬ್ಯಾನರುಗಳ ಹಾವಳಿ ಯಂತೂ ಮೇರೆ ಮೀರಿತ್ತು. ಸರ್ಕಾರಿ ಅರೆ ಸರ್ಕಾರಿ ಕಟ್ಟಡಗಳು ಎಂಬ ಯಾವುದೇ ವ್ಯತ್ಯಾಸ ಗಮನಿಸದ ಎಬಡ ರಾಜಕಾರಣಿಗಳು ಸಿಕ್ಕಸಿಕ್ಕಲ್ಲಿ ತಮ್ಮ ಬ್ಯಾನರ್ ಗಳನ್ನು ಕಟ್ಟಿ ವಾತಾವರಣವನ್ನು ಸಂಪೂರ್ಣ ಹದಗೆಡಿಸಿತ್ತು, ಚಿತ್ತಾಪುರದ ಜಿಡಿಸಿಸಿ ಬ್ಯಾಂಕ್ ಕಟ್ಟಡ ಸಂಪೂರ್ಣ ಪಕ್ಷದ ಕಚೇರಿಯಾಗಿ ಮಾರ್ಪಟ್ಟಿದ್ದು ನೋಡಿ ಜನಸಾಮಾನ್ಯ ದಂಗಾಗಿ ಹೋದ. ಶಾಸನ ಸಭೆಯಲ್ಲಿ ಕಾನೂನುಗಳನ್ನು ನಿರ್ಮಿಸಿ ಆಡಳಿತ ನಡೆಸುವ ಈ ಜನಗಳೇ ಅವನ್ನು ಇಲ್ಲಿ ಕಾಲಕಸಕ್ಕಿಂತ ಕಡೆಯಾಗಿ ತೊತ್ತಲ ತುಳಿದು ಹಾಕಿದ್ದು ನಾಚಿಕೆ ಬರಿಸುವಂತಿತ್ತು.

ನಾಲ್ಕಾರು ಕಡೆ ಜನರ ಅಹವಾಲುಗಳನ್ನು ಸ್ವೀಕರಿಸಿ, ಐದಾರು ಕಡೆ ಕೋಟ್ಯಂತರ ರೂಪಾಯಿಗಳ ಕಾಮಗಾರಿಗೆ ಶಿಲಾನ್ಯಾಸ ಮಾಡಿ, ಹತ್ತೆಂಟು ಕಡೆ ಭಾಷಣ ಬಗಿದು ಹೋದ ಮಾತ್ರಕ್ಕೆ ಮುಖ್ಯಮಂತ್ರಿಗಳ ಕರ್ತವ್ಯ ಮುಗಿದು ಹೋಗಲಿಲ್ಲ. ನಿಜಾಮ್‌ಶಾಹಿಯ ಆಡಳಿತ ದಿಂದ ಇತ್ತೀಚಿನ ಸರ್ಕಾರಗಳಿಲ್ಲವೂ ಇಲ್ಲಿಯ ಜನರ ನೋವು-ನಲಿವುಗಳಿಗೆ ಸ್ಪಂದಿಸಿಲ್ಲ. ಇವರು ತಿರುಗಾಡುವ ರಸ್ತೆ-ಕುಡಿಯುವ ಶುದ್ಧ ನೀರಿಗೂ ಇನ್ನೂ ಪರದಾಟ ತಪ್ಪಿಲ್ಲ. ಪ್ರತಿ ಹಳ್ಳಿಗಳ ಸಾರ್ವಜನಿಕರ ಬಯಲು ಸಂಡಾಸು ವ್ಯವಸ್ಥೆಯಂತೂ ಯಾವ ವೈರಿಗೂ ಬೇಡ. ಯಾವ ಗದ್ದಲ ಗೌಜುಗಳಿಲ್ಲದೆ ಏಕಾಂತದಲ್ಲಿ ನಡೆಯಬೇಕಾದ ಶೌಚಕ್ರಿಯೆಗೂ ಸರಿಯಾದ ಅವಕಾಶ ಕಲ್ಪಿಸದ ಸರ್ಕಾರಗಳು ಇಲ್ಲಿಯ ಜನರಿಗೆ ಮಂಕುಬೂದಿ ಎರಚುತ್ತ ಸಾಗಿದೆ. ಆದರೆ ಕುಮಾರಸ್ವಾಮಿ ಮಾತ್ರ ತಾನು ಹೋದಲ್ಲಿ ಬಂದಲ್ಲಿ ಪಾಯಿಖಾನೆಯನ್ನೇ ಹೊತ್ತುಕೊಂಡು ಹೋಗುತ್ತಿರುವುದು ನಮ್ಮ ಸರ್ಕಾರಿ ವ್ಯವಸ್ಥೆಗೆ ಹಿಡಿದ ಕನ್ನಡಿಯಾಗಿದೆ. ಸರ್ಕಾರಿ ಶಾಲಾ ಕಾಲೇಜುಗಳ ವಿದ್ಯಾಭ್ಯಾಸ ಮಟ್ಟ ವಂತೂ ಕೊಂಡವಾಡಿಯ ಕಲಿಕೆ ಗಿಂತಲೂ ಕಡೆಯಾಗಿದೆ. ಖಾಸಗಿ ಶಾಲೆಗಳ ಕಲಿಕೆ ಇದ್ದುದರಲ್ಲೇ ಪರವಾಗಿಲ್ಲ ಎನ್ನಬಹುದಾ ದರೂ ಅವುಗಳಂತೂ ಅಕ್ಷರಶಃ ಸುಲಿಗೆಯ ಕೇಂದ್ರಗಳಾಗಿವೆ. ಖಾಸಗಿ ಶಾಲೆಯ ಆಡಳಿತ ಮಂಡಳಿಯಂತೂ ತಮಗೆ ಎಷ್ಟು ತೋಚುತ್ತದೋ ಅಷ್ಟು ಡೊನೇಷನ್ ಕೀಳುತ್ತ ಬಲಿಷ್ಠವಾಗತೊಡಗಿವೆ. ಯಾವುದೇ ಕಚೇರಿಗೆ ಹೋದರೂ ಅಧಿಕಾರಶಾಹಿ ವರ್ಗ ಆಗ ಬಾ, ಈಗ ಬಾ ಹೋಗಿ ಬಾ, ಎಂಬ ಸಬೂಬುಗಳಲ್ಲಿ ನಿರತವಾಗಿವೆ. ಆದರೆ ಜನರು ಕಚೇರಿಗಳಿಗೆ ಅಂಡಲೆದು 'ತಬರ'ನ ಕತೆ ನೆನಪಿಸುವಂತಾ ಗಿದ್ದಾರೆ.




ಇದೇನೇ ಇದ್ದರೂ ಕಲ್ಬುರ್ಗಿ ಜಿಲ್ಲಾ ಉಸ್ತುವಾರಿ ಮಂತ್ರಿ ಮಾತ್ರ ಗಡದ್ದಾಗಿ ಉಂಡುಟ್ಟು ಸಂಪದ್ಭರಿತರಾಗಿದ್ದಾರೆ. ಇವರಷ್ಟೇ ಅಲ್ಲದೆ ಇವರ ಬಂಧು-ಬಳಗ ಮುಂತಾದವರ ಬಡತನ ಒಮ್ಮೆಂದೊಮ್ಮೆ ನೀಗಿ ಹೋಗಿದೆ. ಮಂತ್ರಿಗಿರಿಯೆಂಬ ಅಲ್ಲಾವುದ್ದೀನನ ದೀಪ ಉಜ್ಜುತ್ತಲೇ ಹಗಲುದರೋಡೆ ನಡೆಸಿದ್ದಾರೆ. ಆದರೆ ಇವರನ್ನು ಗೆಲ್ಲಿಸಿದ ಶಹಾಪುರ ಮತ ಕ್ಷೇತ್ರದ ಜನತೆ ಮಾತ್ರ ಬಸವಳಿದುಹೋಗಿದ್ದಾರೆ. ಕಲಬುರ್ಗಿ ಜಿಲ್ಲೆಯ ವಸೂಲಿಗಾಗಿ ತಮ್ಮ ಸಹೋದರ ಅಮರೇಶಗೌಡನನ್ನು ನೇಮಿಸಿದರೆ, ಶಹಾಪುರ ಉಸ್ತುವಾರಿಯನ್ನು ಕಾಕ ಬಸವರಾಜಪ್ಪಗೌಡನಿಗೆ ನೀಡಿದ್ದಾರೆ. ಆವಾಗವಾಗ ಎಚ್ಚರ ವಾದಾಗೊಮ್ಮೆ "ನಾನು ಅಧಿಕಾರದಲ್ಲಿ ಇರುವವರೆಗೂ ಯಾದಗಿರಿ ಜಿಲ್ಲೆಯಾಗಲು ಬಿಡುವುದಿಲ್ಲ" ಎಂದು ಬಡಾಯಿ ಕೊಚ್ಚಿಕೊಳ್ಳುವುದನ್ನು ಮಾತ್ರ ಮರೆತಿಲ್ಲ. ಬದಲಾಗಿ ಜಿಲ್ಲಾ ಸ್ಥಳಕ್ಕೆ ಬೇಕಾದ ಸರ್ಕಾರಿ ಕಚೇರಿಗಳೊಂದನ್ನೂ ದರ್ಶನಾಪುರ ಶಹಾಪುರಕ್ಕೆ ಮಾಡಿಸದಿರುವುದು ಮತ್ತೊಂದು ಚೋದ್ಯವಾಗಿದೆ. ಯಾದಗಿರಿಯ ಶಾಸಕ ಡಾ. ವೀರಬಸವಂತರೆಡ್ಡಿ ಮುದ್ನಾಳ್ ಸಂಭಾವಿತರೇನೋ ಹೌದು. ಆದರೆ ಸಂಬಂಧಿ ವಿಶ್ವನಾಥರೆಡ್ಡಿ ಮುದ್ನಾಳ್ ಎಂಬ ಖಲು ಆಸಾಮಿಯ ಕೈಗೆ ಸಿಕ್ಕು ಒದ್ದಾಟಕ್ಕೆ ಬಿದ್ದಿದ್ದಾರೆ. ಸುರಪುರ ಶಾಸಕ ನರಸಿಂಹನಾಯಕ ಗೆದ್ದು ಬಂದು ವೆಂಕಟಪ್ಪ ನಾಯಕ, ದೊರೆ ರಿಗ್ಗಪ್ಪ (ರಂಗಪ್ಪ) ನಾಯಕ ಮುಂತಾದ ರಾಜಶಾಹಿ ಮನೆತನದ ಹುಟ್ಟಡಗಿಸಿದ್ದೊಂದೇ ಸಾಧನೆಯಾಗಿದೆ. ಚಿತ್ತಾಪುರದ ಶಾಸಕ ವಿಶ್ವನಾಥ ಪಾಟೀಲ ಹೆಬ್ಬಾಳ, ಅಫ್ಜಲಪುರ ಶಾಸಕ ಎಂ.ವೈ. ಪಾಟೀಲ್ ಮುಂತಾದವರು ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬ ಸ್ಥಿತಿ ಇದೆ. ಆದರೆ ಆಗಾಗ ಬಿ.ಆರ್. ಪಾಟೀಲ್ ಮಾತ್ರ ಸರ್ಕಾರದ ಲೋಪದೋಷಗಳ ಕುರಿತು ಗುಟುರು ಹಾಕುತ್ತಿರುವುದು ಕಾಣಿಸುತ್ತದೆ. ಧರ್ಮಸಿಂಗ್, ಖರ್ಗೆ ಎಂಬ ಜೋಭದ್ರಗೇಡಿಗಳು ನಾಟಕೀಯ ಪತ್ರಿಕಾ ಹೇಳಿಕೆಗಳನ್ನು ಕೊಡುವುದೊಂದು ಬಿಟ್ಟು ಆಡಳಿತದ ಚುಕ್ಕಾಣಿ ಹಿಡಿದ ಸರ್ಕಾರದ ಭ್ರಷ್ಟಾಚಾರ, ಸ್ವಜನಪಕ್ಷಪಾತದ ವಿರುದ್ಧ ಸೊಲ್ಲೆತ್ತುತ್ತಿಲ್ಲ. ಏಕೆಂದರೆ ಇವರೂ ಮೂಲತಃ ಭ್ರಷ್ಟಾಚಾರದ ಗಂಗೋತ್ರಿಯೇ ಆಗಿದ್ದಾರೆ. ಜನತೆ ಮಾತ್ರ ಈ ಪುಢಾರಿಗಳೆಲ್ಲರ ಖಲುತನಗಳನ್ನು ನೋಡಿ ನೋಡಿ ಸುಸ್ತಾಗಿಹೋಗಿದ್ದಾರೆ.

-ವಿಶ್ವಾರಾಧ್ಯ ಸತ್ಯಂಪೇಟೆ

ಕಾಸರಗೋಡಿಗೆ ಬಂದುಹೋದ ಜೆಹಾದಿ ಮಾಡೂರು ಇಸುಬು!

ಕಳೆದ ವಾರದ ಸಂಚಿಕೆಯಲ್ಲಿ ಮೂಲ್ಕಿ ರಫೀಕ್ ಹತ್ಯೆ ಸೇಡು ಕುರಿತ ವರದಿ ಪ್ರಕಟವಾಗಿತ್ತು. ಪೊಲೀಸ್ ಖಬರಿ (ಮಾಹಿತಿದಾರ) ಗುಲಾಂ ಮಾರಣಾಂತಿಕ ಹಲ್ಲೆಯಿಂದ ಚೇತರಿಸಿಕೊಳ್ಳುತ್ತಿರುವ ಬೆನ್ನಲ್ಲೇ ಇದೀಗ ಆಘಾತಕಾರಿ ಮಾಹಿತಿಯೊಂದು ಈ ವರದಿಗಾರ್ತಿಯ ಕಿವಿಗೆ ಬಿದ್ದಿದೆ. ಮೂಲ್ಕಿ ರಫೀಕನ ಹತ್ಯೆಯಿಂದ ಕನಲಿಹೋಗಿರುವ ಮಾಡೂರು ಇಸುಬು, ಇದೀಗ ರಿಯಾದ್‌ನಲ್ಲಿ ಕುಳಿತೇ ಪ್ರತೀಕಾರಕ್ಕಾಗಿ ತಹತಹಿಸುತ್ತಿದ್ದು ಹತ್ತು ದಿನದ ಹಿಂದೆಯಷ್ಟೇ ತೀರಾ ಸೀಕ್ರೆಟ್ ಆಗಿ ಕಾಸರಗೋಡಿಗೆ ಬಂದು ಅಲ್ಲಿ ತನ್ನ ಬಂಟರನ್ನು ಕರೆಸಿ ಸ್ಕೆಚ್ ರೂಪಿಸಿ ಹೋಗಿದ್ದಾನೆ. ಮಂಗಳೂರಿನ ಪೊಲೀಸರು ಯಾಮಾರಿದ್ದೇ ಆದರೆ ಸದ್ಯದಲ್ಲೇ ಇನ್ನೊಬ್ಬ ಹಿಂದೂ ಮುಖಂಡನ ತಲೆ ಉರುಳುವುದಂತೂ ಗ್ಯಾರಂಟಿ!



ಇಸುಬು

ಮಾಡೂರು ಇಸುಬು ಕಾಸರಗೋಡಿಗೆ ಬಂದ ಸುದ್ದಿ ಬಹಿರಂಗವಾದದ್ದು ಹೇಗೆಂದರೆ ಆತನನ್ನು ಅಲ್ಲಿ ಭೇಟಿಯಾಗಿ ಮರಳುತ್ತಿದ್ದ ಫೈಸಲ್‌ನಗರದ ಖಲಂದರ್ ಉಳ್ಳಾಲದ ಪಿ.ಎಸ್. ಜಯಂತ್ ಶೆಟ್ಟಿಯವರ ಬಲೆಗೆ ಅಚಾನಕ್ ಆಗಿ ಬಿದ್ದಾಗ. ಸುಖಾನಂದಶೆಟ್ಟಿಯ ಹತ್ಯೆ ಅದಕ್ಕೂ ಮೊದಲು ಪೊಳಲಿ ಅನಂತು, ಹತ್ಯೆಯಲ್ಲಿ ನೇರಭಾಗಿಯಾಗಿದ್ದು, ಪೊಲೀಸರಿಗೆ ತೀರಾ ಬೇಕಾಗಿದ್ದ ವ್ಯಕ್ತಿಯೇ ಈ ಫೈಸಲ್‌ನಗರದ ಖಲಂದರ್. ಆತನನ್ನು ಹಿಡಿದಿದ್ದೇ ಆತನ ಬಟ್ಟೆಬಿಚ್ಚಿಸಿ, ಬರೀ ಚೆಡ್ಡಿಯಲ್ಲಿರಿಸಿ ಮುಂದಿನ ತನಿಖೆಗೆಂದು ತೀರಾ ಗುಪ್ತವಾಗಿ ಕೋಣಾಜೆ ಪೊಲೀಸ್ ಠಾಣೆಯಲ್ಲಿರಿಸಿ, ಜಯಂತ ಶೆಟ್ಟಿ ಮರಳಿದ್ದರು.

ಈತ ಅದೆಂತಹ ಪ್ರಳಯಾಂತಕ ಅನ್ನೋದು ಸ್ವತಃ ಕೋಣಾಜೆ ಪೊಲೀಸರಿಗೇ ಆ ಹೊತ್ತಿಗೆ ಗೊತ್ತಿರಲಿಲ್ಲ. ಜಯಂತ್ ಶೆಟ್ಟಿ ಅತ್ತ ಹೋಗಿ ಕತ್ತಲಾದದ್ದೇ ಪ್ರಳಯಾಂತಕ ಖಲಂದರ್ ವಾಂತಿ ಬರುತ್ತಿದೆ ಎಂದು ನಾಟಕವಾಡಿ, ಹೊರಗೆ ಬಂದವನು, ಪೊಲೀ ಸರು ನೋಡುತ್ತಿರುವಂತೆಯೇ ಚೆಡ್ಡಿಯಲ್ಲೇ ಓಡಿ ತಲೆಮರೆಸಿಕೊಂಡಿದ್ದಾನೆ. ಈತನಕ ಪತ್ತೆಯಾಗಿಲ್ಲ. ಪತ್ತೆ ಮಾಡೋದಕ್ಕೆ ಒಂದು ಸಣ್ಣ ಫೋಟೋ ಕೂಡಾ ಈತನಕ ಪೊಲೀಸರಿಗೆ ಸಿಕ್ಕಿಲ್ಲ. ಪೊಲೀಸರ ನಿದ್ದೆ ಕೆಡಿಸಿರೋದೇ ಇದು.

ಜೆಹಾದಿಯಾಗಿರುವ ಮಾಡೂರು ಇಸುಬು!

ದಕ್ಷಿಣ ಕನ್ನಡ ಜಿಲ್ಲೆಯ ನೋಟೆಡ್ ಹಿಂದೂ ಮುಖಂಡರನ್ನು ಒಬ್ಬರನಂತರ ಒಬ್ಬ ಎಂಬಂತೆ ಮುಗಿಸಲು ಇಸುಬು ಪಣ ತೊಟ್ಟಂತೆ ಕಾಣುತ್ತಿದೆ, ಅಲ್‌ಖೈದಾದಂತಹ ಉಗ್ರಗಾಮಿ ಸಂಘಟನೆಯ ಸಖ್ಯದಿಂದ ಈಗ ಪಕ್ಕಾ ಜೆಹಾದಿಯಾಗಿ ರೂಪಾಂತರಗೊಂಡಿದ್ದಾನೆ ಮಾಡೂರು ಇಸುಬು. ಈತನ ಸದ್ಯದ ನೆಲೆ ರಿಯಾದ್‌ನ 'ಬತ್ತಾ' ಎಂಬ ಹೆಸರಿನ ಊರು. ಒಂದು ಕಾಲಕ್ಕೆ ಮಂಗಳೂರಿನ ರೌಡಿ ರಾಜಕಾರಣಿ ಕಂ ರಮಾನಾಥ ರೈಯ ಬಲಗೈ ಬಂಟನಾಗಿದ್ದ ಎಂ.ಡಿ. ಜಬ್ಬಾರ್‌ನ ಬಾಡಿಗಾರ್ಡ್‌ನಂತಿದ್ದು ಸದಾ ಆತನ ಜೇಬಲ್ಲಿ ತಿರುಗುತ್ತಿದ್ದ ಇಸುಬು. ಕೊಣಾಜೆ-ಬಿ.ಸಿ. ರೋಡ್ ನಡುವಿನ ಮಾಡೂರು ಎಂಬ ಊರಿನ ನಿವಾಸಿಯಾದ ಈತ ಸ್ಥಳೀಯವಾಗಿ ಒಂದೆರಡು ಪುಡಿ ಗಲಾಟೆಗಳಲ್ಲಿ ಕಾಣಿಸಿಕೊಂಡದ್ದು ಬಿಟ್ಟರೆ ಈತನ ಮೇಲೆ ಒಂದೇ ಒಂದು ಹತ್ಯೆ ಪ್ರಕರಣ ದಾಖಲಾದದ್ದಿಲ್ಲ.

ಅದೊಂದು ದಿನ ಬತ್ತುಪಾದೆ ರಹಮತ್, ಫೈಸಲ್‌ನಗರದ ಖಲಂದರ್ ಜತೆಗೂಡಿ ಚಂದ್ರಶೇಖರ್ ಉಚ್ಚಿಲನನ್ನು ಅಡ್ಡಗಟ್ಟಿ ಹಲ್ಲೆ ನಡೆಸಿದ್ದೇ ಕೊನೆ. ಈ ಒಂದು 307 ಕೇಸಿನಲ್ಲಿ ತಲೆಮರೆಸಿಕೊಂಡಿದ್ದ ಇಸುಬುನನ್ನು ಎಂ.ಡಿ. ಜಬ್ಬಾರ್ ಪೊಲೀಸರಿಗೆ ಶರಣ ಮಾಡಿದರೂ ಆಮೇಲೆ ಪೊಲೀಸರ ಕಾಟ ಶುರುವಾಯಿತು. ಯಾವಾಗ ಭಾಗಿಯೇ ಆಗದ ಪ್ರಕರಣಗಳಲ್ಲಿ ಈತನನ್ನು ಪೊಲೀಸರು ಫಿಕ್ಸ್




ರಫೀಕ್

ಮೂಲ್ಕಿ ರಫೀಕ್ ಹತ್ಯೆ ಪ್ರತೀಕಾರ!

ಮಾಡತೊಡಗಿದರೋ, ಅದೊಂದು ದಿನ ನಕಲಿ ಪಾಸ್‌ಪೋರ್ಟ್ ಮೂಲಕ ರಿಯಾದ್‌ಗೆ ಪರಾರಿಯಾಗಿಯೇ ಬಿಟ್ಟ.

ಹಿಂದೂ ಮುಖಂಡರ ಬಗ್ಗೆ ಮೊದಲೇ ಕೆರಳುತ್ತಿದ್ದ ಇಸುಬುಗೆ ಅಲ್ಲಿ 'ಅಲ್‌ಖೈದಾ'ದ ಪರಿಚಯವಾಯಿತು. ಉದ್ಯೋಗ ನಿಮಿತ್ತ ಅಲ್ಲಿ ನೆಲೆಸಿರುವ ಸ್ವಜಾತಿ ಉದ್ಯಮಿಗಳಿಂದ ಚಂದಾ ಎತ್ತಿದ ಇಸುಬು, ಅಲ್ಲಿ ಕುಳಿತೇ ಕಲ್ಲಡ್ಕ ಪ್ರಭಾಕರ ಭಟ್, ಸತ್ಯಜಿತ್, ಪ್ರಸಾದ್ ಆಪ್ತಾವರರಂಥವರ ಹತ್ಯೆಗೆ ಸ್ಕೆಚ್ ರೂಪಿಸುವುದನ್ನೇ ವೃತ್ತಿಯನ್ನಾಗಿಸಿಕೊಂಡ.

ತನ್ನ ಸುಪಾರಿ ಕೊಲೆಗೆ ಇಲ್ಲಿ ಈತ




ಖಲಂದರ್ ಪರಾರಿಯಾದರೆ, ಕ್ಯಾಂಡಲ್ ಸಂತುನನ್ನು ಪೊಲೀಸರೇ ಕಾಪಾಡಿದರು!

ಉಳ್ಳಾಲದ ವೃತ್ತ ನಿರೀಕ್ಷಕ ಜಯಂತ ಶೆಟ್ಟರು ಕೋಣಾಜೆ ಪೊಲೀಸರ ದೆಸೆಯಿಂದ ಖಲಂದರ್ ಪರಾರಿಯಾದ ಸಿಟ್ಟಲ್ಲಿ ಕೈಕೈ ಹೊಸಕಿಕೊಳ್ಳುತ್ತಿದ್ದರು. ಆದರೆ ಅದೇ ಹೊತ್ತಿಗೆ ಇನ್ನೊಂದು ಬಹುಮುಖ್ಯ ಬೇಟೆ ಶೆಟ್ಟರ ಬಲೆಗೆ ತಾನಾಗಿಯೇ ಬಿತ್ತು. ತೊಕೊಟ್ಟು ಬಾರ್‌ವೊಂದರಲ್ಲಿ ಕುಡಿದು ತೂರಾಡುತ್ತಿದ್ದ ಕ್ಯಾಂಡಲ್ ಸಂತು ಸುಲಭದಲ್ಲಿ ಪೊಲೀಸರ ಅತಿಥಿಯಾದ. ಇತ್ತೀಚೆಗೆ ಮಂಗಳೂರಲ್ಲಿ ನಡೆದ ಕೋಮು ಗಲಭೆ ಸಂದರ್ಭದಲ್ಲಿ ಸುಳ್ಯದ ಉಸ್ತಾದ್ ಗಫೂರ್ ಎಂಬುವವರನ್ನು ಬಜ್ಪೆ ಎಂಬಲ್ಲಿ ದುಷ್ಕರ್ಮಿಗಳ ತಂಡ ಚೂರಿಯಿಂದ ಇರಿದು ಕೊಂದು ಹಾಕಿತ್ತು, ಈ ಹತ್ಯಾ ಪ್ರಕರಣದ ಪ್ರಮುಖ ಆರೋಪಿಯಾಗಿ ತಲೆಮರೆಸಿಕೊಂಡು ತಿರುಗುತ್ತಿದ್ದ ಆರೋಪಿಯೇ ಕ್ಯಾಂಡಲ್ ಸಂತು. ಕೈಕಂಬ ರಫೀಕ್‌ನ ಕೊಲೆ, ಮಲ್ಲೂರು ಹಮೀದ್‌ನ ಹತ್ಯೆ ಸೇರಿದಂತೆ ಹತ್ತಾರು ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾಗಿರುವ ರೌಡಿ ಷೀಟರ್ ಕ್ಯಾಂಡಲ್ ಸಂತುಗೆ ಜಯಂತ್ ಶೆಟ್ಟಿಗೆ ಪೊಗದಸ್ತಾದ ಬೇಟೆಯೇ ಆಗಿತ್ತು, ಆದರೆ ಈತನನ್ನು ಹಿಡಿದು ಒಂದು ಗಂಟೆಯ ತಾಸಲ್ಲಿ ಅದ್ಯಾವ ಪುಣ್ಯಾತ್ಮರ ಕಡೆಯಿಂದ ಫೋನ್ ಬಂತೋ, ಹುಲಿ ಹಿಡಿದ ಜಯಂತ ಶೆಟ್ಟರೇ ಇಲಿಯಂತಾಗಿ ಬಿಟ್ಟರು! ಕ್ಯಾಂಡಲ್ ಸಂತುಗೆ ತೊಡಿಸಿದ ಕೈಕೋಳ ಸಡಿಲಿಸಿ ಕಳುಹಿಸಿಯೇ ಬಿಟ್ಟರು.

ಜಿಲ್ಲೆಗಳನ್ನು ವಿಭಜಿಸುವ ತಾಕತ್ತು ಕುಮಾರಸ್ವಾಮಿಗೆ ಇದೆಯೇ?

ಕಲಬುರ್ಗಿ ಜಿಲ್ಲೆಗೆ ಭೇಟಿ ನೀಡಲೇಬೇಕಾದ ಸಂದರ್ಭ ಬಂದಾಗಲೆಲ್ಲ ಮುಖ್ಯಮಂತ್ರಿ ಕುರ್ಚಿಗೆ ಅಮರಿಕೊಂಡಿರುವ ಆ ರಾಜಕಾರಣಿಗಳೆಲ್ಲ ತಮ್ಮ ಆಡಳಿತ ವಿಫಲತೆಯನ್ನು ಮುಚ್ಚಿಕೊಳ್ಳಲು ಈಗಾಗಲೇ ವಿವಾದಾತ್ಮಕವಾಗಿರುವ ಜಿಲ್ಲಾ ವಿಭಜನೆಯ ಕುರಿತು ಮಾತನಾಡುತ್ತಾರೆ. ಆದರೆ ಅದನ್ನು ಮಾಡಿ ತೋರಿಸುವ ಎದೆಗಾರಿಕೆಯನ್ನು ಯಾರೂ ತೋರಿಸುತ್ತಿಲ್ಲ. ಜೆ.ಎಚ್. ಪಟೇಲ್ ಎಂಬ ಯಾರಿಗೂ ಹಣಿಯದ ರಾಜಕಾರಣಿಯೇ ಈ ವಿಷಯವಾಗಿ ಸೋತು ಹೋಗಿರುವಾಗ ಈ ಕುಮಾರಸ್ವಾಮಿಯ ಕೋ-ಜಾ ಸರ್ಕಾರದಿಂದ ಅದು ಹೇಗೆ ಸಾಧ್ಯವಾದೀತು?



ಹಾಗೆ ನೋಡಿದರೆ ಜಿಲ್ಲಾ ಕೇಂದ್ರ ಸ್ಥಳವಾದ ಕಲಬುರ್ಗಿಗೆ ಇದೇ ತಾಲ್ಲೂಕಿನ ನಾರಾಯಣಪುರದಿಂದ ಬರಬೇಕಾದರೆ 145 ಕಿ.ಮೀ. ದೂರ ಕ್ರಮಿಸಿ ಬರಬೇಕು. 10 ತಾಲ್ಲೂಕುಗಳನ್ನು ತನ್ನ ಒಡಲಲ್ಲಿ ಇಂಬಿಟ್ಟುಕೊಂಡಿರುವ, ಸುಮಾರು 16,174 ಚ.ಕಿ.ಮೀ. ವಿಸ್ತಾರ ಹೊಂದಿರುವ ಬಹುದೊಡ್ಡ ಜಿಲ್ಲೆ ವಿಭಜನೆ ಆಗದೆ ಅನ್ಯ ಮಾರ್ಗವೇ ಇಲ್ಲವಾಗಿದೆ. ಆದರೆ ಜಿದ್ದಾಜಿದ್ದಿಗೆ ಬಿದ್ದಿರುವ ದರ್ಶನಾಪುರ, ಖರ್ಗೆ, ಡಾ. ಎ.ಬಿ. ಮಲಕರೆಡ್ಡಿ ಹಾಗೂ ಡಾ. ವೀರಬಸವಂತರೆಡ್ಡಿ ಮುಂತಾದವರಿಗೆ ಜಿಲ್ಲಾ ವಿಭಜನೆ ಆಗುವುದು ಬೇಕಾಗಿಲ್ಲ. ಏಕೆಂದರೆ ಜನಸಾಮಾನ್ಯರ ಕೆಲಸಗಳನ್ನಂತೂ ಮಾಡಿಸಿಲ್ಲ. ಇದೊಂದು ಸಂಗತಿಯ ಮೂಲಕವಾದರೂ ಜನಸಾಮಾನ್ಯನ ನಡುವೆ ನಾವು ಹಾಗೇ ಜೀವಂತವಾಗಿ ಉಳಿಯುವ ಹುನ್ನಾರ ಮಾಡಿದ್ದಾರೆನಿಸುತ್ತದೆ.

ಯಾದಗಿರಿ ಜಿಲ್ಲೆಯೆಂದು ಘೋಷಿಸಲು ಅದಕ್ಕೆ ತನ್ನದೇ ಆದ ಕೆಲವು ಅರ್ಹತೆಗಳಿವೆ. ಕಲಬುರ್ಗಿಯ ಉಪಕೇಂದ್ರವಾಗಿರುವ ಲೋಕೋಪಯೋಗಿ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಜಿ.ಪಂ. ಇಂಜಿನಿಯರಿಂಗ್ ಉಪವಿಭಾಗ, ಕಂದಾಯ ಇಲಾಖೆಯ ಉಪವಿಭಾಗ, ಎಸ್.ಪಿ., ಡಿ.ಎಚ್.ಓ. ಕಚೇರಿಗಳಿಗೆ ಅಲ್ಲದೆ ರೈಲ್ವೆ ನಿಲ್ದಾಣವೂ ಇದೆ. ಬೃಹತ್ ಬ್ರಾಡಗೇಜ್ ಮಾರ್ಗವೂ ಹೊಂದಿದೆ.

ಹಾಗಂತ ಶಹಾಪುರವನ್ನೂ ಕಡೆಗಣಿಸುವಂತಿಲ್ಲ, 'ಸಗರ ನಾಡು' ಎಂದು ಚಾರಿತ್ರಿಕ ಪುಟಗಳಲ್ಲಿ ತನ್ನದೇ ಮಹತ್ವ ಹೊಂದಿದ ಶಹಾಪುರ ಬೆಳವಣಿಗೆ ಆಗಬಲ್ಲ ಹಲವಾರು ಅಂಶಗಳನ್ನು ತನ್ನ ಒಡಲಲ್ಲಿ ಇಟ್ಟುಕೊಂಡಿದೆ. ಜಿಲ್ಲಾ ಆಡಳಿತ ವ್ಯವಸ್ಥೆಗೆ ಬೇಕಾಗುವ ಕಟ್ಟಡವನ್ನು ಇಲ್ಲಿ ಮತ್ತೊಮ್ಮೆ ನಿರ್ಮಿಸುವ ಅವಶ್ಯಕತೆ ಇಲ್ಲ. ಈಗ ಭೀಮರಾಯನ ಗುಡಿಯ ಆಡಳಿತಾಧಿಕಾರಿಗಳ ಕಚೇರಿಯನ್ನೇ ಜಿಲ್ಲಾಧಿಕಾರಿಗಳ ಕಚೇರಿ ಎಂದು ಮಾತ್ರ ಬೋರ್ಡ್ ಬದಲಿಸಿದರೆ ಸಾಕು. ಜೊತೆಗೆ ಜಿಲ್ಲಾಡಳಿತದ ಅಧಿಕಾರಿಗಳಿಗೆ ಬೇಕಾದ ವಸತಿ ಸೌಕರ್ಯವೂ ಭೀ-ಗುಡಿಯ ಕ್ಯಾಂಪ್ ಒದಗಿಸಬಲ್ಲದು. ಜಿಲ್ಲಾಡಳಿತಕ್ಕೆ ಬೇಕಾಗುವ ಸಾಕಷ್ಟು ಭೂಮಿಯೂ ಇಲ್ಲುಂಟು. ನೆರೆಯ ಸುರಪುರ, ಜೇವರ್ಗಿ ತಾಲ್ಲೂಕಿನ ಜನತೆ ಶಹಾಪುರ ಜಿಲ್ಲೆಯಾಗಲು ತಮ್ಮ ಭೇಷರತ್ ಬೆಂಬಲ ವ್ಯಕ್ತಪಡಿಸಿದ್ದಾರೆ.

ಇದನ್ನೆಲ್ಲ ಆರೋಗ್ಯಕರವಾಗಿ ಪರಿಶೀಲಿಸಿ ಮುಖ್ಯಮಂತ್ರಿ ಕುಮಾರಸ್ವಾಮಿ ನೆರೆಯ ಎರಡು ತಾಲ್ಲೂಕು ಕೇಂದ್ರಗಳನ್ನು ಜಿಲ್ಲಾ ಕೇಂದ್ರಗಳಾಗಿ ಘೋಷಿಸಿದರೆ, ಜನಸಾಮಾನ್ಯರಿಗೆ ಆಗಾಗ ಯಾಮಾರಿಸುವ ರಾಜಕಾರಣಿಗಳಿಂದಲಾದರೂ ಮುಕ್ತಿ ಸಿಕ್ಕಂತಾಗುತ್ತದೆ. ಆದರೆ ಆ ತಾಕತ್ತು ಕುಮಾರಸ್ವಾಮಿಗೆ ಇದೆಯೇ? ■




ಹತ್ಯೆಯ ನಂತರ ಬೇರೆಬೇರೆ ಮೂಲಗಳಿಂದ ರಫೀಕನಿಗೆ ಒಂದು ಲಕ್ಷ ಇಪ್ಪತ್ತು ಸಾವಿರದಷ್ಟು ರೂಪಾಯಿ ಹಣ ಕೂಡಾ ಬಂದಿತ್ತು. ಯಾವಾಗ ಮೂಲ್ಕಿ ರಫೀಕ್ ಪೊಲೀಸರ ವಶ ವಾಗಿ ಎನ್‌ಕೌಂಟರ್ ಶಿಕ್ಷೆಯಲ್ಲಿ ಸತ್ತು ಹೋದನೋ ಮಾಡೂರು ಇಸುಬುಗೆ ಪಶ್ಚಾತ್ತಾಪ ಕಾಡತೊಡ ಗಿದೆ. ಅದು ತಕ್ಷಣವೇ ಇದ ಕ್ಕೊಂದು ಪ್ರತೀಕಾರ ತೆಗೆದು ಕೊಂದು ಸರಿದೂಗಿಸುವ ಹಪಾಹಪಿಗೆ ಮಾಡೂರು ಇಸುಬುನ ಮನಸ್ಥಿತಿಯನ್ನು ದೂಡಿದೆ. ವಿಮಾನವೇರಿ ಸೀದಾ ಕಲ್ಲಿಕೋಟೆ ವಿಮಾನ ನಿಲ್ದಾಣ ಮೂಲಕ ಕಾಸರಗೋಡಿಗೆ ಬಂದ ಇಸುಬು, ಕ್ರಿಮಿನಲ್‌ಗಳ ಗಮ್ಮವೆಂದೇ ಕುಖ್ಯಾತಿಯಿರುವ 'ಮಲಖ್ ದಿನಾರ್' ಎಂಬಲ್ಲಿಗೆ ತನ್ನ ಬಂಟರನ್ನು ಕರೆಸಿ ಸ್ಕೆಚು ರೂಪಿಸಿದ್ದಾನೆ.


ಹಾಗೆ ಅಲ್ಲಿಗೆ ಹೋಗಿ ಮಾಡೂರು ಇಸುಬುನನ್ನು ಖುದ್ದು ಭೇಟಿಯಾಗಿ ಬಂದವರಲ್ಲಿ ಪೈಸಲ್‌ನಗರದ ಲಂದರ್ ಕೂಡಾ ಒಬ್ಬ.

...ಬಳಸಿಕೊಂಡದ್ದೇ ಈಗ ಮೋಸ್ಟ್‌ವಾಂಟೆಡ್ ಆಗಿದ್ದ ಮೂಲ್ಕಿ ರಫೀಕನನ್ನು.

ಇವರ ಮೊದಲ ಸ್ಕೆಚ್ ಕಲ್ಲಡ್ಕ ಪ್ರಭಾಕರ ಭಟ್ಟರದ್ದಾಗಿತ್ತು! ಸುಖಾನಂದ ಶೆಟ್ಟಿ ಹತ್ಯೆಯ 15 ದಿನಗಳ ಹಿಂದೆಯಷ್ಟೇ ಮೂಲ್ಕಿ ರಫೀಕ್ ತನ್ನ ಸಹಚರ ರಾದ ಬುಲೆಟ್ ಸುಧೀರ್ ಮತ್ತು ದಾದಾಪಾಲ್ ರಹಿ ಮಾನ್ ಜೊತೆ ಸೇರಿಕೊಂಡು ಕಲ್ಲಡ್ಕ ಹಸೀಫ್ ಮನೆಯಲ್ಲಿ ಕುಳಿತು ಕಲ್ಲಡ್ಕ ಪ್ರಭಾಕರ ಭಟ್ಟರ ಹತ್ಯೆಗೆ ಸ್ಕೆಚ್ ರೂಪಿಸಿದ್ದ. ಆದರೆ ನಿಗದಿತ ದಿನದಂದು ಭಟ್ಟರು ಕಲ್ಲಡ್ಕದಲ್ಲಿ ಕಾಣಿಸಿಕೊಳ್ಳದೇ ಹೋದದ್ದು, ಪ್ಲಾನ್ ಫ್ಲಾಪ್ ಆಗಿ ಅನಾಹುತ ತಪ್ಪಿತ್ತು.

ಆನಂತರ ಇವರು ಕೈ ಹಾಕಿದ್ದೇ ಸುಖಾನಂದ ಶೆಟ್ಟಿಯ ಹತ್ಯೆಗೆ. ತನ್ನ ದೋಸ್ತ್ ಆಗಿದ್ದ [illegible] ಜೈಲಲ್ಲಿದ್ದಾಗ ಹಣ [illegible] ಸಹಕರಿಸಿದ್ದ ಸುಖಾನಂದ ಶೆಟ್ಟಿಯನ್ನು ಕೊಲ್ಲಲು ಮೂಲ್ಕಿ ರಫೀಕ್ [illegible] ಹಿಂದೇಟು ಹಾಕಿದ್ದರೂ, ಮೂಲ್ಕಿಯ [illegible] ರಫೀಕನ ಬ್ರೈನ್‌ವಾಷ್ ಮಾಡಿ 3 ಲಕ್ಷಕ್ಕೆ [illegible] ಆಗಿತ್ತು, ಅಡ್ವಾನ್ಸ್ ರೂ. 25,000 [illegible] ಹೋಟೆಲಿನ [illegible] ರಫೀಕನ ಹೆಂಡತಿಗೆ ಕಳುಹಿಸಿತ್ತು.





ಮಾಡೂರು ಇಸುಬು ಈಗ ರಿಯಾದ್‌ಗೆ ಮರಳಿದ್ದಾನೆ. ಸೆರೆಸಿಕ್ಕ ಪೊಳಲಿ ಅನಂತು, ಸುಖಾನಂದ ಶೆಟ್ಟಿ ಹತ್ಯೆಯ ಪ್ರಮುಖ ಆರೋಪಿ ಪೈಸಲ್ ನಗರದ ಖಲಂದರ್ ಕೂಡಾ ಪೊಲೀಸರಿಗೆ ಕೈಗೆ ಬಂದದ್ದು ಬಾಯಿಗಿಲ್ಲದಂತಾಗಿದೆ. ಅಪಾಯದ ಮುನ್ಸೂಚನೆ ಎಂಬಂತೆ ಗುಲಾಂಗ ಮೇಲೆ ಹಲ್ಲೆ ಯಾಗಿದೆ! ಇನ್ನಾರಿಗೆ ಇಲ್ಲಿ ಸಾವು ಕಾಟದೆಯೋ? ಕಾದು ನೋಡಬೇಕಾಗಿದೆ.

-ಭೂಮಿಕಾ


ಯಲಬುರ್ಗಾ: ದುರಹಂಕಾರಿ ಶಾಸಕ ರಾಯರೆಡ್ಡಿಗೆ ಕಲ್ಲೇಟು



ದುರಹಂಕಾರವೇ ಮೈವೆತ್ತಂತಿರುವ ಕೊಪ್ಪಳ ಜಿಲ್ಲೆ ಯಲಬುರ್ಗಾದ ಶಾಸಕ ಬಸವರಾಜ ರಾಯರೆಡ್ಡಿಗೆ ಕಲ್ಲೇಟು ಬಿದ್ದು ಮಣ್ಣು ತೂರಲಾಗಿದೆ. ಕುರ್ಚಿ ಎಸೆಯಲಾಗಿದೆ. ಜನಸಂಪರ್ಕ ಸಭೆಯಲ್ಲಿ ಆದ ಈ ಕೃತ್ಯಕ್ಕೆ ಉಳಿದ ತಾಲ್ಲೂಕಿನ ಕಾಂಗ್ರೆಸಿಗರು ಖಂಡಿಸುವುದರ ಬದಲು ಹೀಗೇ ಆಗಬೇಕಾಗಿತ್ತು ಅಂತ ಹಬ್ಬ ಆಚರಿಸುತ್ತಿವೆ.

ಇಡೀ ಯಲಬುರ್ಗಾ ಜನತೆಗೆ ಅರ್ಧರ್ಧ ಕಿಲೋ ಅಹಂಕಾರ ಹಂಚಿದರೂ ರಾಯರೆಡ್ಡಿ ಮೈಯಲ್ಲಿ ಇನ್ನೂ ಟನ್‌ಗಟ್ಟಲೆ ಅಹಂಕಾರ ಉಳಿಯುತ್ತೆ. ಅಂತಹ ದುರಹಂಕಾರಿ ರಾಯರೆಡ್ಡಿ ಇತ್ತೀಚೆಗೆ ತಾಲ್ಲೂಕಿನಲ್ಲಿ ಜನಸಂಪರ್ಕ ಸಭೆ ಎಂಬ ಬೀದಿ ನಾಟಕಗಳನ್ನು ನಡೆಸುತ್ತಿದ್ದಾನೆ. ಅಂತಹದ್ದೊಂದು ಬೀದಿ ನಾಟಕ ನಡೆದದ್ದು ಮೊನ್ನೆ 22 ರ ಬುಧವಾರ ರಾತ್ರಿ 8 ಕ್ಕೆ ಕುಕನೂರಿನಲ್ಲಿ.

ಆ ಸಭೆಯಲ್ಲಿ ಪಡಿತರ ಚೀಟಿದಾರರಿಗೆ ಕಡಿಮೆ ಅಕ್ಕಿ ಗೋಧಿ ಕೊಡುತ್ತಿರುವ ಬಗ್ಗೆ ಜನರು ಕೇಳಿದರೆ -ಕುತ್ಕೊಳಯ್ಯ ಸುಮ್ನೆ ಅಂತ ಜಬರಿಸಿದ್ದಾನೆ ರಾಯರೆಡ್ಡಿ. ನಂತರ ಬಿಜೆಪಿಯ ಐವರು ಕಾರ್ಯಕರ್ತರು ಕುಕನೂರು ಪಕ್ಕದ ಕೆರೆ ಕಾಮಗಾರಿ ಹೆಸರಲ್ಲಿ ಎರಡು ಸಾರಿ ಬಿಲ್ ಎತ್ತಿದ್ದಾರೆ, ಈ ಬಗ್ಗೆ ಹಿಂದೆಯೂ ನಿಮಗೆ ಮನವಿ ನೀಡಿದ್ದೇವೆ ಎಂದಾಗ ಅರೆಸ್ಟ್ ಹಿಂ ಎಂದಿದ್ದಾನೆ. ಅಷ್ಟಾದರೂ ಪೊಲೀಸರು ಸುಮ್ಮನೆ ಇದ್ದಾರೆ. ನ್ಯಾಯ ಕೇಳೋದು ತಪ್ಪಾ? ಅಂತ ಮರು ಪ್ರಶ್ನಿಸಿದಾಗ ಗಲಾಟೆ ಆರಂಭವಾಗಿದೆ. ರಾಯರೆಡ್ಡಿ ಬಾಲಗಳು ಏರಿ ಹೋಗಿದ್ದಾಗಲೇ ಪರಿಸ್ಥಿತಿ ಕೈ ಮೀರತೊಡಗಿದಾಗ ಬಿಜೆಪಿ ಕಾರ್ಯಕರ್ತರು ಮತ್ತು ಶಾಸಕ ರಾಯರೆಡ್ಡಿ ನಡುವೆ ಅಕ್ಷರಶಃ ಅವಾಚ್ಯ ಶಬ್ದಗಳ ವಿನಿಮಯವಾಗಿದೆ. ಗಂಡುಸುತನಕ್ಕೆ ಪರಸ್ಪರ ಸವಾಲು ಹಾಕಿಕೊಂಡಿದ್ದಾರೆ. ಮರ್ಮಾಂಗಗಳ ಹೆಸರಲ್ಲಿ ಬೈದಾಡಿಕೊಂಡಿದ್ದಾರೆ. ಬೈಗುಳದ ಮಧ್ಯೆಯೇ ಕುರ್ಚಿಗಳ ತೂರಾಟ ಆರಂಭವಾಗಿದೆ. ಎಲ್ಲಿಂದಲೋ ತೂರಿ ಬಂದ ಕಲ್ಲುಗಳು ನೇರ ರಾಯರೆಡ್ಡಿಯ ಎಡಗೈಗೆ ಸಣ್ಣ ಗಾಯ ಮಾಡಿದೆ.



ಈಶಣ್ಣ



ದೇವಪ್ಪ

ಬಿಜೆಪಿ ಕಾರ್ಯಕರ್ತರ ಮೇಲೆ ಹಲ್ಲೆಯತ್ನ ವಿಷಯವನ್ನು 10 ಕಿ.ಮೀ. ದೂರದ ಇಟಗಿಯಲ್ಲಿದ್ದ ಮಾಜಿ ಜಿಲ್ಲಾಧ್ಯಕ್ಷ ಈಶಣ್ಣ ಗುಳಗಣ್ಣವರ್‌ಗೆ ತಿಳಿಸಿದ್ದಾರೆ. ಹತ್ತೇ ನಿಮಿಷದಲ್ಲಿ ಹಾಜರಾದ ಈಶಣ್ಣ ಆಗ ತೋರಿದ ವರ್ತನೆ ಕೆಲವರಿಗೆ ಆಶ್ಚರ್ಯ ಉಂಟು ಮಾಡಿದ್ದೆ. ಸದಾ ಶಾಂತ, ಮೌನವಾಗಿರುವ ಸರಳ ವ್ಯಕ್ತಿ ಈಶಣ್ಣನ ಆ ಸಿಟ್ಟು ಕಂಡು ಸ್ವತಃ ರಾಯರೆಡ್ಡಿಯೇ ದಂಗು. ಬಂದ ಕೂಡಲೇ ಎರಡೂ ಕೈಯಲ್ಲಿ ಚೇರುಗಳನ್ನೆತ್ತಿಕೊಂಡು, ಗದ್ದಲದಲ್ಲಿಯೇ ಜನರನ್ನು ನೂಕಿಕೊಂಡು ವೇದಿಕೆಯತ್ತ ಆಗಮಿಸಿದ ಈಶಣ್ಣನ ವರ್ತನೆ ಆತನ ಮೇಲಿದ್ದ ಗೌರವ, ಎರಡು ಬಾರಿ ಸೋತ ಅನುಕಂಪ ಎಲ್ಲವೂ ಮಣ್ಣುಪಾಲಾಗಿದೆ. ರಾಯರೆಡ್ಡಿಯೇ ಅಹಂಕಾರಿ. ಆದರೆ ಈಶಣ್ಣನಿಗೇನಾಗಿತ್ತು ಧಾಡಿ? ಪೊಲೀಸರು ಅಷ್ಟೊತ್ತಿಗೆ ಲಾಠಿ ಬೀಸಿ ಎಲ್ಲರನ್ನೂ ಓಡಿಸಿದ್ದಾರೆ.

ಬೆಳಿಗ್ಗೆ ನೋಡಿಕೊಳ್ಳುವ ಅಂತ ಕಾಂಗ್ರೆಸ್-ಬಿಜೆಪಿಗಳು ಮನೆಗೆ ಹೋಗಿವೆ. ಗುರುವಾರ ಈಶಣ್ಣನ ಗುಂಪು, ಜಿಲ್ಲಾಧ್ಯಕ್ಷ ಸಂಗಪ್ಪ ವಕ್ಕಳದ ಸೇರಿದಂತೆ ಅನೇಕರು ಕೊಪ್ಪಳದಲ್ಲಿ ಎಸ್.ಪಿ.ಗೆ ಮನವಿ ಸಲ್ಲಿಸಿದರೆ, ಅತ್ತ ಯಲಬುರ್ಗಾದಲ್ಲಿ ರಾಯರೆಡ್ಡಿ ಹಿಂಬಾಲಕರು ಕರೆದಿದ್ದ ಪ್ರತಿಭಟನಾ ಸಭೆಯಲ್ಲಿ ಇರಲಾರದೆ ಇರುವೆ ಬಿಟ್ಟುಕೊಂಡರು ಎಂಬಂತೆ ತಾಲ್ಲೂಕ್ ಪಂಚಾಯ್ತಿ ಅಧ್ಯಕ್ಷ ಶಿವಕುಮಾರ ನಾಗಲಾಪೂರ ಮಠ ಬಿಜೆಪಿ ನಾಯಕನೊಬ್ಬನ ಬೀಜ ತೆಗೀತೇನೆ ಎಂದದ್ದೇ ಇನ್ನಷ್ಟು ಜಗಳಕ್ಕೆ ಕಾರಣವಾಗಿದೆ. ಬಿಜೆಪಿಯವರು ಹುಡುಕುತ್ತಿರುವ ನಾಗಲಾಪೂರಮಠ ನಾಪತ್ತೆಯಾಗಿದ್ದಾನೆ. ಇತ್ತ ಗುರುವಾರ ಪೊಲೀಸರು ಈಶಣ್ಣ ಗುಳಗಣ್ಣವರ, ದೇವಪ್ಪ ಸೋಬಾನದ, ಹನುಮಂತ ಪೂಜಾರ, ವೀರಯ್ಯ ಹಿರೇಮಠ, ಸಂಜೀವಪ್ಪ ಸಂಗಟಿ, ಶರಣಪ್ಪ [illegible] ಬಾಪು ಸೇರಿದಂತೆ 15-20 ಮಂದಿ ಮೇಲೆ ಕೇಸು [illegible] ಅರೆಸ್ಟಾಗಲೂ [illegible] ಆದರೆ [illegible] ರಾಯರೆಡ್ಡಿ [illegible]

ದಿನ ಕುಕನೂರು ಬಂದ್‌ನ್ನು ಹಿಂದಕ್ಕೆ ಪಡೆದುಕೊಂಡಿದೆ.

ರಾಯರೆಡ್ಡಿಯ ಕಿರಿಕ್ಕು ಇದೇ ಮೊದಲೇನಲ್ಲ. ಮುಂದೆ ನಾನು ಮುಖ್ಯಮಂತ್ರಿಯಾಗುತ್ತೇನೆ ಎನ್ನುವ ಶಾಸಕ ರಾಯರೆಡ್ಡಿ ಜನಸಂಪರ್ಕ ಸಭೆಗಳಿಗೆ ತಾಲೂಕಿನ ಅರ್ಧದಷ್ಟು ಹಳ್ಳಿಗಳಲ್ಲಿ ವಿರೋಧ ವ್ಯಕ್ತವಾಗಿದೆ. ಅಭಿವೃದ್ಧಿ ಇಲ್ಲದೇ ಬರೀ ರೀಲು, ಕೀಳುಮಟ್ಟದ ರಾಜಕಾರಣದಿಂದ, ಆಫ್ರಿಕಾ ಖಂಡದ ಹಳ್ಳಿಗಳ ಸಮೂಹದಂತಿರುವ ಯಲಬುರ್ಗಾ ಕ್ಷೇತ್ರದಲ್ಲಿ ಜಾಗೃತಿ ಉಂಟಾಗುತ್ತಿದೆ. ಆದರೆ ರಾಯರೆಡ್ಡಿಗೆ ಯಾರೂ ಏನೂ ಕೇಳಬಾರದು. ಕೇಳಿದವರಿಗೆ ಇದೆಯಲ್ಲ ಪೊಲೀಸು, ಜೈಲು! ಹಿಂದೆ -ಬಿಎಸ್‌ಪಿಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಯುವಕ ಡಿ.ಕೆ. ಪರಶುರಾಮ ಯಲಬುರ್ಗಾದ 11 ವಾರ್ಡ್‌ಗಳ 4 ವಾರ್ಡ್‌ಗಳಲ್ಲಿ ದಲಿತರು, ಹಿಂದುಳಿದವರು, ಶೋಷಿತರು ವಾಸಿಸುತ್ತಿದ್ದಾರೆ. ಅಲ್ಲಿ ಮೂಲಭೂತ ಸೌಲಭ್ಯಗಳೇ ಇಲ್ಲ. ಸಮಸ್ಯೆ ಬಗೆಹರಿಸಿ ಅಂತ ಮನವಿ ಕೊಟ್ಟರೆ ಅದನ್ನು ಓದದೇ ಪಕ್ಕದಲ್ಲಿದ್ದ ಬೆಂಬಲಿಗನಿಗೆ ದಾಟಿಸಿದ್ದಾರೆ. ಸಾರ್ ಅದನ್ನು ಓದಿ ಏನಾದರೂ ಹೇಳಿ ಅಂತ ಕೇಳಿದ್ದಕ್ಕೇನೆ ಡಿ.ಕೆ. ಪರಶುರಾಮನ ಮೇಲೆ ಸುಳ್ಳು ಕೇಸ್ ಹಾಕಿಸಿ ಜೈಲಿಗೆ ಕಳಿಸಲಾಯಿತು. ಇನ್ನು ಜರಕುಂಟಿ ಗ್ರಾಮದ ಜನಸಂಪರ್ಕ ಸಭೆಯಲ್ಲಿ ಗ್ರಾಮಸ್ಥನೊಬ್ಬ ಪ್ರಶ್ನೆ ಕೇಳಿದ್ದಕ್ಕೆ ಸುಮ್ನೆ ಕುತ್ಕೊ ಅಂದ ರಾಯರೆಡ್ಡಿ ತಾಲ್ಲೂಕ್ ಪಂಚಾಯ್ತಿ ಉಪಾಧ್ಯಕ್ಷೆ ಹೊಳೆಯಮ್ಮಳ ಪತಿರಾಯ ಆ ಗ್ರಾಮಸ್ಥನ ಮೇಲೆ ಏರಿಹೋಗಿ ಪೊಲೀಸರಿಗೆ ಹಿಡಿದುಕೊಟ್ಟ. ಆಗ ಇಡೀ ಗ್ರಾಮದ ಜನ ವ್ಯಾನ್‌ಗೆ ಅಡ್ಡ ಕುಳಿತು ಗ್ರಾಮಸ್ಥನನ್ನು ಬಿಡಿಸಿಕೊಂಡು ರಾಯರೆಡ್ಡಿಗೆ ನೀರಿಳಿಸಿದ್ದರು.


ಹಿರೇ ಅರಳಿ ಕಾಲೇಜ್‌ನ ಎಸ್‌ಡಿಎಂಸಿಗೆ ಪರವೂರಿನವರನ್ನು ಅಧ್ಯಕ್ಷರನ್ನಾಗಿಸಿ ಗಲಾಟೆ ಮಾಡಿಸಿಕೊಂಡ ರಾಯರೆಡ್ಡಿ ಸರ್ವ ಶಿಕ್ಷಣ ಇಲಾಖೆಗೆ ಬಂದ ಶಾಲಾಕಟ್ಟಡ ನಿರ್ಮಾಣ ಕೆಲಸವನ್ನು ಎಸ್‌ಡಿಎಂಸಿಗೆ ಬದಲು ZP ನಿರ್ಮಿತಿ ಕೇಂದ್ರಗಳಿಗೆ ಕೊಡುತ್ತಾನೆ. ಕರಮುಡಿ ಗ್ರಾಮ ಪಂಚಾಯ್ತಿ ಸೆಕ್ರೆಟರಿ ವಿಷಯದಲ್ಲೂ ರಾದ್ಧಾಂತ.

ರಾಯರೆಡ್ಡಿಯ ಇಂತಹ ಕಿರಿಕ್ಕುಗಳ ಒಟ್ಟು ಮೊತ್ತವೇ ಮೊನ್ನೆ ಈಶಣ್ಣನ ವರ್ತನೆ. ಎರಡು ಬಾರಿ ಸೋತಿರುವ ಈಶಣ್ಣ ಮೂಲತಃ ಕಾಂಗ್ರೆಸ್ಸಿಗ. ಬಿಜೆಪಿ ಸೇರಿದ ಮೇಲೆ ಅನಂತಕುಮಾರ್‌ಗೆ ಕ್ಲೋಜು. ಎನ್‌ಡಿಎ ಸರ್ಕಾರವಿದ್ದಾಗ ಜಲಾನಯನದ ಅನೇಕ ಯೋಜನೆಗಳನ್ನು ಈಶಣ್ಣ ತಂದಿದ್ದ. ಈಗ ಗೆದ್ದಿರುವ ರಾಯರೆಡ್ಡಿ ರಹಸ್ಯವಾಗಿ ಪ್ರಭಾವ ಬಳಸಿ ಅಂದಿನ ಜಲಾನಯನ ಯೋಜನೆಯಲ್ಲಿ ಅವ್ಯವಹಾರ ನಡೆದಿದೆ ಅಂತ ದಿಲ್ಲಿಯಿಂದ ಒಂದು ತಂಡ ತನಿಖೆಗೆ ಕಳಿಸಿದ್ದರಂತೆ. ಯಾವುದೇ ಅವ್ಯವಹಾರ ಪತ್ತೆಯಾಗದೇ ಅದು ವಾಪಸ್ಸು ಹೋಗಿದೆ. ಅವ್ಯವಹಾರ ಬಯಲಿಗೆ ತಂದು ಈಶಣ್ಣನನ್ನು ಮೆತ್ತಗೆ ಮಾಡಿ ಎದುರಾಳಿ ಇಲ್ಲದಂತೆ ಮಾಡುವ ತಂತ್ರ ಫೇಲಾಗಿದೆ. ಇನ್ನೋರ್ವ ಎದುರಾಳಿ ಜೆಡಿಎಸ್‌ನ ಶಿವಶರಣಪ್ಪಗೌಡ. ಆಗ ಧರಂಸಿಂಗ್ ಕಾರಿಗೆ ಚಪ್ಪಲಿ ಒಗೆದ ಪ್ರಕರಣ ಎದುರಿಸುತ್ತಿದ್ದಾನೆ.

ಒಟ್ಟಿನಲ್ಲಿ ರಾಯರೆಡ್ಡಿಯ ಒಂದು [illegible] ಇಷ್ಟು ಉದ್ವಿಗ್ನತೆ ತಂದು ಒಡ್ಡಿದೆ. [illegible] ಸಾಮಾನ್ಯರೀಗ ಪೊಲೀಸರ ಅಡಿ ಕತ್ತರಿಯಲ್ಲಿ ಸಿಕ್ಕಿಕೊಂಡಿದ್ದಾರೆ. [illegible] ನಾಗಲಾಪೂರ ಮಠ [illegible] ಬೆಂಗಳೂರಿಗೆ [illegible] ಶಾಂತ [illegible] ಲಕ್ಷಣಗಳು ಇಲ್ಲ.

-ವಿನಯ್ [illegible]

ಪ್ರತಿಭಟನೆ ಹೀಗಿರಬಾರದು



ಆ. 12ರಂದು ಪ್ರಜಾವಾಣಿ ಪತ್ರಿಕೆಯ ಮುಖಪುಟದಲ್ಲಿ ಪ್ರಕಟವಾದ ಪಿ. ಮಹಮ್ಮದ್ ಅವರ ವ್ಯಂಗ್ಯ ಚಿತ್ರ ನನ್ನ ಗಮನ ಸೆಳೆಯಿತು. ನಾವು ಪುಟಗಟ್ಟಲೆ ಬರೆಯುವುದನ್ನು ಅವರು ಒಂದು ವ್ಯಂಗ್ಯ ಚಿತ್ರದ ಮೂಲಕ ವಿವರಿಸಿದ್ದಾರೆ. ಹೈದರಾಬಾದಿನ ಮೂಲಭೂತವಾದಿ ಮುಸ್ಲಿಮರು ತಸ್ಲೀಮಾ ನಸ್ರೀನ್ ಎಂಬ ಲೇಖಕಿಯ ಮೇಲೆ ಮಾಡಿದ ಆಕ್ರಮಣವನ್ನು ಇವರು ಬಹಳ ಮಾರ್ಮಿಕವಾಗಿ ವ್ಯಂಗ್ಯಚಿತ್ರದ ಮೂಲಕ ಚಿತ್ರಿಸಿದ್ದಾರೆ.

ಒಂದೆಡೆಯಲ್ಲಿ ಮುಸ್ಲಿಮರು ನಿರಕ್ಷರತೆ, ನಿರುದ್ಯೋಗ ಹಾಗೂ ಬಡತನದಿಂದ ನರಳುತ್ತಿದ್ದರೆ ಇನ್ನೊಂದೆಡೆಯಲ್ಲಿ ಲೇಖಕ, ಲೇಖಕಿಯರ ಮೇಲೆ ದೌರ್ಜನ್ಯವೆಸಗಿ ತಮ್ಮ ಪರಾಕ್ರಮ ತೋರಿಸುತ್ತಾ ಗೂಂಡಾಗಳಂತೆ ವರ್ತಿಸುವ 'ಮಜ್ಲಿಸ್ ಇತ್ತೆಹಾದುಲ್ ಮುಸ್ಲಿಮೀನ್' ಎಂಬ ಸಂಘಟನೆಯ ಪುರುಷ ತನ್ನ ಈ ಪರಾಕ್ರಮವನ್ನು ಬಡ ಮುಸ್ಲಿಮರ ಮುಂದೆ ಕೊಚ್ಚಿಕೊಳ್ಳುವ ಈ ಚಿತ್ರ ಪ್ರಜ್ಞಾವಂತ ಮುಸ್ಲಿಮರನ್ನು ನಾಚಿಕೆಯಿಂದ ತಲೆತಗ್ಗಿಸುವಂತೆ ಮಾಡಿದೆ. ಸೌದಿ ಅರೇಬಿಯಾದಿಂದ 70 ವರ್ಷ ಪ್ರಾಯ ದಾಟಿದ ಮುದುಕರು ಬಂದು ಒಂದೇ ವಾರದಲ್ಲಿ ಹೈದರಾಬಾದಿನ ಹದಿಹರೆಯದ ಮೂವರು ಹೆಣ್ಣುಮಕ್ಕಳನ್ನು ಮದುವೆಯಾಗಿ ಒಂದೆರಡು ವಾರಗಳಲ್ಲಿ ಅವರನ್ನು ಬೀದಿಗೆಸೆದು ಹೊರಟು ಹೋಗುವಾಗ ಅವರ ಮೇಲೆ ಯಾವ ರೀತಿಯ ಫತ್ವಾವೂ ಹೊರಡುವುದಿಲ್ಲ, ಆಮೇಲೆ ಈ ಹೆಣ್ಣುಮಕ್ಕಳು ವೇಶ್ಯಾವೃತ್ತಿಗಿಳಿದರೂ ಇವರಿಗೆ ಅದು ಅವಮಾನವೆನ್ನಿಸುವುದಿಲ್ಲ. ಅಂತಹ ಕೃತ್ಯಗಳನ್ನು ಪ್ರತಿಭಟಿಸಿದರೆ ಈ ರಾಜಕಾರಣಿಗಳಿಗೆ ಟಿ.ವಿ.ಗಳಲ್ಲಿ ಇಷ್ಟೊಂದು ಪ್ರಚಾರ ಸಿಗುವುದಿಲ್ಲವಲ್ಲಾ? ಈ ಜನರು ಈ ಕೃತ್ಯವೆಸಗುತ್ತಿರುವಾಗ ಟಿ.ವಿ. ಕ್ಯಾಮರಾಗಳಿಗೆ ಮುಖ ಮಾಡಿದ್ದನ್ನು ಎಲ್ಲರೂ ನೋಡಿರಬಹುದು.

ತಸ್ಲೀಮಾ ನಸ್ರೀನರ 'ಲಜ್ಜಾ' ಎಂಬ ಕಾದಂಬರಿ ಒಂದು ಉತ್ತಮ ಕೃತಿಯೇನೂ ಅಲ್ಲ, ಇಂಡಿಯಾದಲ್ಲಿ ಬಾಬರಿ ಮಸೀದಿ ಕೆಡವಿದ ಸಂದರ್ಭದಲ್ಲಿ ಬಾಂಗ್ಲಾದೇಶದಲ್ಲಿ ಬಹುಸಂಖ್ಯಾತರಾದ ಮುಸ್ಲಿಮರು ಅಲ್ಲಿನ ಅಲ್ಪಸಂಖ್ಯಾತರಾದ ಹಿಂದೂಗಳ ಮೇಲೆ ಯಾವ ರೀತಿ ದೌರ್ಜನ್ಯ ವೆಸಗಿದರು ಎಂಬುದರ ಒಂದು ಚಿತ್ರಣವನ್ನು ಇವರು ನೀಡಿದ್ದಾರೆ. ಈ ಕಾದಂಬರಿಯನ್ನೋದಿದ ಹಿಂದೂಗಳು ಇದನ್ನು ಮುಸ್ಲಿಮರ ವಿರುದ್ಧ ಬಳಸಿಕೊಂಡು 'ಹಿಂದೂಗಳ ಮೇಲೆ ಮುಸ್ಲಿಮರ ದೌರ್ಜನ್ಯ' ಎಂಬಂತೆ ಪ್ರಚಾರ ನೀಡಿದರು. ಇದರಿಂದ ಕೆರಳಿದ ಮುಸ್ಲಿಮರು ತಸ್ಲೀಮಾರನ್ನು ಬಹಿಷ್ಕರಿಸಿ ಫತ್ವಾ ಹೊರಡಿಸಿ ದೇಶ ಬಿಟ್ಟೋಡಿಸಿದರು. ಈ ಪುಸ್ತಕವನ್ನು ದೂರದಿಂದಲಾದರೂ ಕಣ್ಣಲ್ಲಿಯೂ ನೋಡಿರದಿದ್ದ ಮಂಗಳೂರಿನ ಪುಡಿ ಪತ್ರಿಕೆಯೊಂದು 'ತಸ್ಲೀಮಾ ನಸ್ರೀನ್ ಎಂಬ ಸೂಳೆ!' ಎಂದು ಮುಖಪುಟದಲ್ಲಿ ಮುದ್ರಿಸಿ ತಮ್ಮ ಸಂಸ್ಕೃತಿ ಎಂತಹ ಕೊಳಚೆ ಗುಂಡಿಯಂತಿದೆ ಎಂಬುದನ್ನು ತೋರಿಸಿಕೊಂಡದ್ದು ನನಗೆ ಇಂದಿಗೂ ನೆನಪಿದೆ.

'ಲಜ್ಜಾ' ಕೃತಿ ತೀರಾ ಕಾಲ್ಪನಿಕವಾಗಿರಬಹುದೆಂದು ನನಗನ್ನಿಸುವುದಿಲ್ಲ; ಅಲ್ಲಿ ನಡೆಯುತ್ತಿದ್ದ ಆ ದೌರ್ಜನ್ಯವನ್ನು ತಸ್ಲೀಮಾ ಯಾವುದೇ ಕಲೆಗಾರಿಕೆ ಇಲ್ಲದೆ ತೀರಾ ಒರಟೊರಟಾಗಿ ಬರಹಕ್ಕಿಳಿಸಿದ್ದಾರೆನ್ನಿಸಿತು. ಆ ವಿಷಯವನ್ನೆತ್ತಿಕೊಂಡು ಸ್ವಲ್ಪ ಕಲಾತ್ಮಕವಾಗಿ, ನಯವಾಗಿ ಬರೆದೂ ಜನರ ಗಮನ ಸೆಳೆಯಬಹುದಿತ್ತು, ನಿರಕ್ಷರತೆ ಮತ್ತು ಮತಾಂಧತೆ ತುಂಬಿದ ಒಂದು ಸಮಾಜವನ್ನು ಬರಹದಿಂದ ಎಚ್ಚರಿಸುವುದು ಸುಲಭದ ಕೆಲಸವಲ್ಲ, ಅದಕೆ ಸ್ವಲ್ಪ ಜಾಣತನವೂ ಸೂಕ್ಷ್ಮತೆಯೂ ಬೇಕಾಗುತ್ತದೆ. ತಮ್ಮ ಸುತ್ತಮುತ್ತಲ ಜನ ಸಮುದಾಯದ ಮಾನಸಿಕ ಸ್ಥಿತಿಗತಿಯನ್ನು ಅರ್ಥ ಮಾಡಿಕೊಳ್ಳುವಲ್ಲಿ ಇವರು ಸೋತಿದ್ದಾರೆ. ಅವರ ಮನೋಭಾವವನ್ನು ತಸ್ಲೀಮಾ ಸಮನಾಗಿ ಅರ್ಥ ಮಾಡಿಕೊಂಡಿಲ್ಲ, ಹತ್ತು ಜನಕೆಟ್ಟವರಿರುವಲ್ಲಿ ಒಬ್ಬನಾದರೂ ಹೃದಯವಂತಿಕೆಯುಳ್ಳವನಿರಬಹುದು ಎಂಬುದೂ ಇವರಿಗೆ ಹೊಳೆದಂತಿಲ್ಲ, ಹೀಗಾಗಿಯೇ ಈ ಎಲ್ಲ ಗೊಂದಲಗಳೂ ದೌರ್ಜನ್ಯಗಳೂ ಉಂಟಾಗಿರಬಹುದು ಎಂಬುದು ನನ್ನ ಅನಿಸಿಕೆ.

'ಲಜ್ಜಾ' ಎಂಬ ಕೃತಿಯಲ್ಲಿ ತಸ್ಲೀಮಾ ಚಿತ್ರಿಸಿದಂತೆ ಇಂಡಿಯಾದಲ್ಲಿ ಅಲ್ಪಸಂಖ್ಯಾತ ಮುಸ್ಲಿಮರ ಮೇಲೆ ಬಹುಸಂಖ್ಯಾತ ಹಿಂದೂಗಳು ದೌರ್ಜನ್ಯವೆಸಗುವುದು ನಡೆದೇ ಇದೆ. ಆದರೆ ಅದನ್ನು ಎಲ್ಲ ಹಿಂದೂಗಳು ಒಪ್ಪುತ್ತಾರೆಯೇ? ಆ ಕುರಿತೇ ಹಿಂದೂಗಳು ಕತೆ, ಕಾದಂಬರಿ ಬರೆದಿಲ್ಲವೇ? ಗುಜರಾತ್ ಹತ್ಯಾಕಾಂಡದ ವರದಿ ಮಾಡುತ್ತಿದ್ದ ರಾಜ್‌ದೀಪ್ ಸರ್ದೇಸಾಯಿಯವರ ಮೇಲೆ ಆ ದೌರ್ಜನ್ಯವೆಸಗುತ್ತಿದ್ದವರು ಕಲ್ಲೆಸೆದು ಅವರ ಮೇಲೆಯೇ ದೌರ್ಜನ್ಯವೆಸಗುತ್ತಿದ್ದುದನ್ನು ಟಿ.ವಿ.ಗಳು ಪ್ರಸಾರ ಮಾಡಿವೆ. ತಮ್ಮ ಜನರ ಈ ನಡವಳಿಕೆಯನ್ನು ಎಲ್ಲ ಹಿಂದೂಗಳೂ ಒಪ್ಪಿಕೊಂಡಿದ್ದಾರೆಯೇ? ಹಾಗಿದ್ದಿದ್ದರೆ ಆ ಸುದ್ದಿಯನ್ನು ಯಾವ ಪತ್ರಿಕೆಗಳೂ ಪ್ರಕಟಿಸುತ್ತಿರಲಿಲ್ಲವಲ್ಲ?

ಬಾಂಗ್ಲಾದೇಶದಲ್ಲಿ ಮುಸ್ಲಿಮರು ಹಿಂದೂಗಳ ಮೇಲೆ ನಡೆಸಿದ ದೌರ್ಜನ್ಯಕ್ಕೂ ಗುಜರಾತಿನಲ್ಲಿ ಹಿಂದೂಗಳು ಮುಸ್ಲಿಮರ ಮೇಲೆ ನಡೆಸಿದ ದೌರ್ಜನ್ಯಕ್ಕೂ ವ್ಯತ್ಯಾಸವೇನೂ ಇಲ್ಲ, ಹಾಗೆ ನೋಡಿದರೆ ಗುಜರಾತಿನಲ್ಲಿ ಗರ್ಭಿಣಿ ಮಹಿಳೆಯ ಹೊಟ್ಟೆ ಸೀಳಿ ಆ ಭ್ರೂಣವನ್ನು ತ್ರಿಶೂಲದಲ್ಲಿ ಚುಚ್ಚಿ ತೆಗೆದು ಬೆಂಕಿಗೆ ಎಸೆದಂತಹ ದೌರ್ಜನ್ಯ ಜರ್ಮನಿಯ ಸರ್ವಾಧಿಕಾರಿ ಹಿಟ್ಲರ್ ಕೂಡಾ ನಡೆಸಿದ ದಾಖಲೆ ಇಲ್ಲ, ಅಂತಹ ವಿಷಯ 'ಲಜ್ಜಾ' ಕಾದಂಬರಿಯಲ್ಲೂ ಇಲ್ಲ, ನಾಳೆ ಹಿಂದೂ ಲೇಖಕರೊಬ್ಬರು ಈ ಘಟನೆಯನ್ನು ಕಾದಂಬರಿಯಾಗಿ ಹೀಗೆಯೇ ಚಿತ್ರಿಸಿದರೆ ಹಿಂದೂಗಳು ಕೂಡಾ ಆ ಲೇಖಕರ ಮೇಲೆ ಹೀಗೆಯೇ ದೌರ್ಜನ್ಯ ನಡೆಸುವರೇ? ಆ ಲೇಖಕನನ್ನು ಬಹಿಷ್ಕರಿಸಿ ದೇಶದಿಂದಲೇ ಹೊರದೂಡುವರೇ?

ಇಂದು ಹೈದರಾಬಾದಿನ ಮುಸ್ಲಿಮರು ಮಾಡಿದ್ದನ್ನು ನಾಳೆ ಬಾಂಗ್ಲಾದೇಶದ ಹಿಂದೂಗಳು ಮಾಡುವಂತೆ ಈ ಘಟನೆ ಪ್ರಚೋದನೆ ನೀಡಬಹುದಲ್ಲವೇ? ಅಂದರೆ ನಮ್ಮ ಸುತ್ತಮುತ್ತಲೂ ಧರ್ಮದ ಹೆಸರಿನಲ್ಲಿ ನಡೆಯುತ್ತಿರುವ ಅನ್ಯಾಯ, ಶೋಷಣೆ, ದೌರ್ಜನ್ಯವನ್ನು ಪ್ರಶ್ನಿಸಲು ಯಾರಿಗೂ ಅಧಿಕಾರವಿಲ್ಲ ಎಂಬುದು ಈ ಆಕ್ರಮಣದ ಅರ್ಥವೇ ಅಥವಾ, 'ನಾವು ನಮ್ಮ ದೇಶದಲ್ಲಿ ನಮ್ಮ ನಾಗರಿಕರನ್ನು, ವಿದೇಶೀಯರನ್ನೂ ಕೂಡಾ ಏನಾದರೂ ಮಾಡಿಕೊಳ್ಳುತ್ತೇವೆ. ನೀವ್ಯಾರು ಕೇಳುವುದಕ್ಕೆ' ಎಂಬುದು ಇದರ ಅರ್ಥವೇ?

ಅದಲ್ಲ, ಹಾಗಾಗಬಾರದು. ಎಲ್ಲ ರೀತಿಯ ಅನ್ಯಾಯವನ್ನೂ, ಶೋಷಣೆಯನ್ನೂ, ದೌರ್ಜನ್ಯವನ್ನೂ ಲೇಖಕರು ಪ್ರಶ್ನಿಸಬೇಕು; ಅದರ ಮೇಲೆ ಬೆಳಕು ಚೆಲ್ಲಬೇಕು. ಆ ಸಮಸ್ಯೆಗೆ ಪರಿಹಾರ ಹುಡುಕುವತ್ತ ಜನರ ಗಮನ ಸೆಳೆಯಬೇಕು. ನಾನು ಮುಸ್ಲಿಮರಲ್ಲಿ ಕೇಳಿಕೊಳ್ಳುವುದಿಷ್ಟೆ, ಬರೆಯುವವರನ್ನು ತಡೆಯಬೇಡಿ. ಬರೆಯುವವರು ಬರೆಯುತ್ತಿರಲಿ. ಯಾರು ಏನು ಬರೆದರೂ 1400 ವರ್ಷಗಳಿಂದಲೂ ಎಲ್ಲ ಆಕ್ರಮಣಗಳನ್ನು ತಾಳಿಕೊಂಡು ಸ್ಥಿರವಾಗಿ ಉಳಿದಿರುವ ಇಸ್ಲಾಂ ಧರ್ಮಕ್ಕೆ ಯಾವ ಕಳಂಕವೂ ತಟ್ಟುವುದಿಲ್ಲ, ಲೇಖಕರನ್ನು ಅವರ ಪಾಡಿಗೆ ಬಿಟ್ಟರೆ ಸಮಾಜಕ್ಕೆ ಒಳಿತಾಗುತ್ತದೆಯೇ ಹೊರತು ಕೆಟ್ಟದಾಗುವುದಿಲ್ಲ, ಲೇಖಕರನ್ನು, ಪತ್ರಕರ್ತರನ್ನು ಯಾವುದೇ ಒಂದು ಧರ್ಮಕ್ಕೆ ಕಟ್ಟಿ ಹಾಕುವುದು ಸಲ್ಲದು. ಎಲ್ಲ ದೌರ್ಜನ್ಯಗಳನ್ನೂ, ಅನ್ಯಾಯಗಳನ್ನು ಪ್ರಶ್ನಿಸುವುದು, ಅವುಗಳ ಮೇಲೆ ಬೆಳಕು ಚೆಲ್ಲಿ ಇತರರ ಗಮನ ಸೆಳೆದು ಆ ಅನ್ಯಾಯಗಳ ವಿರುದ್ಧ ಹೋರಾಡುವಂತೆ ಜನರನ್ನು ಅಣಿಗೊಳಿಸುವುದು ಲೇಖಕರ ಕರ್ತವ್ಯ. ಅವರಲ್ಲಿ ಆ ಕಾಳಜಿ ಇಲ್ಲವಾದರೆ ಈ ಜಗತ್ತಿನಿಂದ ಮಾನವೀಯತೆ ಎಂಬ ಶಬ್ದ ಎಂದೋ ಮಾಯವಾಗುತ್ತಿತ್ತು. ತಸ್ಲೀಮಾ ನಸ್ರೀನಳ ಅಭಿಪ್ರಾಯವನ್ನು ನಾವೆಲ್ಲರೂ ಒಪ್ಪಬೇಕೆಂದೇನೂ ಇಲ್ಲ, ಅದು ನಮಗಿಷ್ಟವಾಗದಿದ್ದರೆ, ಅದೇ ರೀತಿಯಲ್ಲಿ ಬರೆದು, ವಿಮರ್ಶಿಸಿ, ಟೀಕೆ ಮಾಡಿ ಅದನ್ನು ಪ್ರತಿಭಟಿಸಬಹುದು. ನಮ್ಮ ಅಭಿಪ್ರಾಯವನ್ನು ಪ್ರಕಟಿಸಲು ನಾವೆಲ್ಲರೂ ಸ್ವತಂತ್ರರು. ಆ ಸ್ವಾತಂತ್ರ್ಯವನ್ನು ನಮ್ಮ ಸಂವಿಧಾನ ನಮಗೆ ನೀಡಿದೆ. ಆ ಸಂವಿಧಾನದಂತೆ ಲೇಖಕರನ್ನು ನಾವು ಪ್ರಶ್ನಿಸಬಹುದು. ಅದು ಬಿಟ್ಟು ಮಧ್ಯಯುಗದವರಂತೆ ಓರ್ವ ಮಹಿಳೆಯ ಮೇಲೆ ದೌರ್ಜನ್ಯವೆಸಗಿ ಪರಾಕ್ರಮ ಮೆರೆಯುವುದು ಈ ಸಮಾಜ ತಲುಪಿದ ಅಧೋಗತಿಯನ್ನು ಸೂಚಿಸುತ್ತಿದೆ.

ಇದೇ ಸಂದರ್ಭದಲ್ಲಿ 'ಆವರಣ' ಕೃತಿಯ ಕುರಿತು ಒಂದು ಮಾತು. ಈ ವಿಷಯದಲ್ಲಿ ನಾನು ಕರ್ನಾಟಕದ ಮುಸ್ಲಿಮರನ್ನು ಅಭಿನಂದಿಸುತ್ತೇನೆ. ಆ ಕೃತಿ ಮುಸ್ಲಿಮರನ್ನು ಬಹಳ ಕೆಟ್ಟದಾಗಿ ಚಿತ್ರಿಸಿದ್ದರೂ ಮುಸ್ಲಿಮರು ಅದರ ವಿರುದ್ಧ ಧ್ವನಿ ಎತ್ತಿ ಅದನ್ನು ಮುಟ್ಟುಗೋಲು ಹಾಕಬೇಕೆಂದು ಕೂಗಾಡಲಿಲ್ಲ, ಭೈರಪ್ಪನವರನ್ನು ಆಕ್ರಮಣ ಮಾಡಲೂ ಇಲ್ಲ, ಇದು ಒಂದು ಆದರ್ಶ ನಡವಳಿಕೆ. ಅದರ ವಿರುದ್ಧ ಮುಸ್ಲಿಮೇತರರೇ ಸಾಕಷ್ಟು ವಿಮರ್ಶೆ, ಟೀಕೆಗಳನ್ನು ಬರೆದು ಆ ಕುರಿತು ಒಂದು ಪುಸ್ತಕವನ್ನೇ ಗೌರಿಯವರು ಪ್ರಕಟಿಸಿದರು. ಇದು ನಿಜವಾದ ಪ್ರತಿಭಟನೆ. ಎಂತಹ ಪ್ರಚೋದನಾತ್ಮಕ ಕೃತಿ ಬಂದರೂ ಮುಸ್ಲಿಮರ ಈ ನಿರ್ಲಕ್ಷ್ಯವನ್ನು ಎಲ್ಲರೂ ನೆನಪಿಟ್ಟುಕೊಂಡರೆ ನಮ್ಮದು ಆದರ್ಶ ಸಮಾಜವೆನ್ನಿಸುತ್ತದೆ.

ಪುಸ್ತಕಗಳನ್ನು ನಿಷೇಧಿಸುವ ಪರಿಪಾಠ ಇಂದುನಿನ್ನೆಯದಲ್ಲ, ಭಾರತೀಯ ಸಂಸ್ಕೃತಿಯನ್ನು ತುಚ್ಛೀಕರಿಸಿದರೆಂಬ ಕಾರಣಕ್ಕೆ ನೆಹರೂ ಸರಕಾರ, 'ರಾಮನ ಬಳಿಗೆ ಒಂಭತ್ತು

ಇಶಾ ಕರು ಮಾತನಾಡಿಸಿದ್ದು

ಕನ್ನಂಬಾಡಿ ಕಟ್ಟೆಯ ಹಿಂಭಾಗದಲ್ಲಿರುವ ಚಿಕ್ಕರಾಯಳ್ಳಿಯಲ್ಲಿ 'ಅವ್ವ' ಚಿತ್ರದ ಶೂಟಿಂಗ್ ನಡೆಯುತ್ತಿದೆ. ಕನ್ನಂಬಾಡಿ ಕಟ್ಟೆಯ ಮುಳುಗಡೆಗೆ ಸಿಕ್ಕ ಜನರನ್ನು ಇಲ್ಲಿಗೆ ಸ್ಥಳಾಂತರಿಸಿದ ಕೃಷ್ಣ ರಾಜೇಂದ್ರ ಒಡೆಯರ್ ಆಡಳಿತ, ಒಂದು ಹಳ್ಳಿಯನ್ನು ನಿರ್ಮಿಸಿಕೊಳ್ಳಲು ಜಾಗ, ಹಣ ಮತ್ತು ವ್ಯವಸಾಯಕ್ಕೆ ಭೂಮಿಯನ್ನು ಕೊಟ್ಟ ಫಲವಾಗಿ ಇಲ್ಲೊಂದು ಸುಂದರ ಹಳ್ಳಿ ನಿರ್ಮಾಣಗೊಂಡಿದೆ. ಬಹುತೇಕ ಊರಿನ ಮನೆಗಳೆಲ್ಲಾ ತೊಟ್ಟಿ ಮನೆಗಳು, ಇದರಲ್ಲಿ ಕೈಯಂಚಿನ ಮನೆಗಳೂ ಇವೆ, ಸುಂದರವಾಗಿ ಕಾಣುವ ಮೂರು ದೇವಸ್ಥಾನಗಳು, ಊರನ್ನು ಬಳಸಿಕೊಂಡು ಹೋಗಿರುವ ಚಾನಲ್ ಮತ್ತು ಊರ ತುಂಬಾ ಇರುವ ಅರಳಿ ಮರಗಳು. ಕ್ಯಾಮರಾ ಕಣ್ಣಿನಿಂದ ನೋಡಿದರೆ ವೆಂಕಟಪ್ಪನವರ ಕಲಾಕೃತಿಯಂತೆ ಕಾಣುವ ಊರು. ಆ ಕಾರಣಕ್ಕಾಗಿ ಇಲ್ಲಿಗೆ ಸಿನಿಮಾ ತೆಗೆಯುವವರ ತಂಡಗಳು ದಂಡುಕಟ್ಟಿಬರುತ್ತವೆ. ಆದರೆ ಊರಜನ ಮಾತ್ರ ಸಿನಿಮಾ ತೆಗೆಯುವ ಜಾಗದ ಕಡೆ ತಿರುಗಿಯೂ ನೋಡುವುದಿಲ್ಲ.

ನಮಗೆ ರಂಗವ್ವನ ಮನೆ ಕೊಟ್ಟಿರುವ ಮನೆಯವರೂ ಕೂಡ ಇತ್ತ ತಿರುಗಿ ನೋಡದೆ ತಮ್ಮ ಕೆಲಸ ತಾವು ಮಾಡುತ್ತಾರೆ. ಅವರ ಬದುಕಿನ ಮುಂದೆ ಈ ಸಿನಿಮಾದವರ ಕೂಗಾಟ, ಓಡಾಟ ನನಗೆ ಹುಚ್ಚರ ಸಂತೆಯಂತೆ ಕಾಣಿಸಿತು. ನಾನು ಶೂಟಿಂಗ್ ನೋಡುವುದು ಬಿಟ್ಟು ಮನೆಯ ಯಜಮಾನ ತನ್ನ ಪತ್ನಿಯೊಡನೆ ಹಸು ಎಮ್ಮೆಯಿಂದ ಹಾಲು ಕರೆಯುವುದು, ದನದ ಗೋದಿಕ್ಕೆಗೆ ಹುಲ್ಲಾಕುವುದು, ಎಮ್ಮೆಗೆ ಮುಸುರೆ ಕುಡಿಸುವುದು, ಬಹುಬೆಲೆಯ ಎತ್ತುಗಳನ್ನು ಕಾಚಿ ಕಟ್ಟುವುದು ಇವನ್ನೇ ನೋಡುತ್ತ ಕುಳಿತೆ.

ಇದು ಒಂದು ಕಾಲದಲ್ಲಿ ಹೆಗ್ಗಳಿಕೆಯಾಗಿ ಬದುಕಿದ ಮನೆ. ನೂರ ಐವತ್ತು ಎಕರೆ ಗದ್ದೆ ಭೂಮಿ ಹೊಂದಿದ್ದ ತಿಮ್ಮಪ್ಪನವರು ಕನ್ನಂಬಾಡಿ ಕಟ್ಟುವಾಗ ಕೆಲಸದಾಳುಗಳಿಗೆ ಕೂಲಿ ಕೊಡಲಾಗದೆ ಮೈಸೂರಿನ ಖಜಾನೆ ತತ್ತರಿಸಿದಾಗ, ಮಹಾರಾಜರಿಗೇ ತಿಮ್ಮಪ್ಪ ಧನಸಹಾಯ ಮಾಡಿದ್ದರಂತೆ. ಆ ಕಾರಣಕ್ಕೆ ತಿಮ್ಮಪ್ಪನವರು ಸಾಹುಕಾರ್ ತಿಮ್ಮಪ್ಪನೆಂದು ಬಿರುದು ಸನ್ಮಾನಗಳನ್ನು ಶ್ರೀ ಕೃಷ್ಣರಾಜೇಂದ್ರ ಒಡೆಯರ್‌ರಿಂದ ಪಡೆದಿದ್ದರಂತೆ. ಎರಡು ಅವಳಿ ಮನೆಗಳಂತಿರುವ ಈ ತೊಟ್ಟಿ ಮನೆ ಎದುರೇ ಇನ್ನೆರಡು ಮನೆ ನಿರ್ಮಾಣ ಮಾಡಬೇಕೆಂಬ ಯೋಜನೆ ಕೈಗೂಡಲಿಲ್ಲ.

ಟೆನ್ನಿ ಆಕ್ಟ್ ಬಂದು ಗದ್ದೆ ಎಲ್ಲಾ ಹೋಯಿತು. ಆದರೂ ಹೃದಯ ಶ್ರೀಮಂತಿಕೆ ಉಳಿಸಿಕೊಂಡಿರುವ ಈ ಮಹಾಮನೆಯ ಜನಗಳು ಶ್ರೀಮಂತಿಕೆ ಕಳೆದುಕೊಂಡು ಬದುಕಿದವರು. ನಮ್ಮ ನಾಡಿನಲ್ಲಿ ಒಳ್ಳೆ ಜನಗಳಿಗೆ ಎಷ್ಟೇ ಶ್ರೀಮಂತಿಕೆ ಬಂದರೂ– ಜನಗಳು ಹೆದರುವುದಿಲ್ಲ, ಅದೇ ಕೆಟ್ಟ ಜನಗಳಿಗೆ ದಿಢೀರ್ ಶ್ರೀಮಂತಿಕೆ ಪ್ರಾಪ್ತಿಯಾದರೆ ಇಡೀ ಊರೇ ನಡುಗುತ್ತದೆ.

ನಮ್ಮ ಮೈಸೂರು ಪ್ರಾಂತ್ಯದ ಶ್ರೀಮಂತ ಜನಕ್ಕೆ ಎಷ್ಟೇ ಹಣ ಹರಿದುಬಂದರೂ ಧರ್ಮಛತ್ರ, ಪ್ರಯಾಣಿಕರ ತಂಗುದಾಣ, ಕಾಲುವೆ ಕೆರೆಕಟ್ಟೆ ಕಟ್ಟಿಸುವ ಮುಖಾಂತರ ಜನರ ವಿಶ್ವಾಸಕ್ಕೆ ಪಾತ್ರರಾಗಿ ಇಂದಿಗೂ ದಂತಕತೆಯಾಗಿ ಉಳಿದುಬಿಟ್ಟಿದ್ದಾರೆ. ತಿಮ್ಮಪ್ಪನವರು ಕೂಡ ಇಂತಹ ಹೆಸರನ್ನು ಬಿಟ್ಟುಹೋಗಿದ್ದಾರೆ.

ಅವರ ಮನೆಯೇ ಈಗ ದೊಡ್ಮನೆ ಭದ್ರವ್ವನ ಮಗಳಾದ ರಂಗವ್ವನ ಮನೆ. ಇಲ್ಲಿ ನಮಗೆ ಬೇಕಾದ ಎಲ್ಲವೂ ಇದೆ. ಪಕ್ಕದಲ್ಲೇ ನಂದ್ಯಪ್ಪನ ಮನೆ ಇದೆ. ನಿಮಗೆ ಗೊತ್ತಿರುವಂತೆ ನಂದ್ಯಪ್ಪನ ಪಾತ್ರ ಮಾಡುವ ಎಂ.ಪಿ. ಪ್ರಕಾಶ್ ಬಂದಾಗ ಮಾತ್ರ ಊರ ಜನ ನಿಜವಾದ ಸ್ಟಾರ್ ಪ್ರತ್ಯಕ್ಷವಾದಂತೆ, ಹಾರ ಹಾಕಿ, ಬ್ಯಾಂಡ್ ಸೆಟ್ ಮೆರವಣಿಗೆ ಮಾಡಿಕೊಂಡು ಹಳೆಕಾಲದ ಕುಸ್ತಿ ಪೈಲ್ವಾನ್‌ನನ್ನು ಕರೆದುಕೊಂಡು ಬಂದಂತೆ ಬಂದರು. ನಂತರ ಗಮನಿಸಿದಾಗ ಊರು ಕನ್ನಂಬಾಡಿ ಬೆನ್ನಿಗೇ ಇದ್ದರೂ ಕರೆಂಟ್ ವ್ಯವಸ್ಥೆ ಸರಿಯಿಲ್ಲ, ಊರ ಸೊಂಟ ಬಳಸಿಕೊಂಡು ಹೋಗಿರುವ ಚಾನಲ್ ಇದ್ದರೂ ಕುಡಿಯುವ ನೀರಿಗೆ ತೊಂದರೆ. ಇದಿಷ್ಟು ಬೇಡಿಕೆ ಕಾರಣಕ್ಕೆ ಪ್ರಕಾಶರನ್ನು ಗೌರವಿಸಿದ ಜನ ಶೂಟಿಂಗ್ ಸಮಯಕ್ಕೆ ಮಾಯವಾದರು. ನಿಜಕ್ಕೂ ಇದು ಮೆಚ್ಚಬೇಕಾದ ನಡವಳಿಕೆ. ನಮ್ಮ ಎಲ್ಲಾ ಹಳ್ಳಿಗಳ ಜನ ಹೀಗಿದ್ದರೆ, ಸಿನಿಮಾ ತೆಗೆಯುವ ಜನ ಎಷ್ಟು ನಿರಾಳವಾಗಿ ತಮ್ಮ ಕಸುಬನ್ನು ಮಾಡಿಕೊಂಡು ಹೋಗುತ್ತಾರಲ್ಲವೆ, ಎನ್ನಿಸಿತು.

ಅದೊಂದು ದಿನ ಕವಿತಾ ಮಗಳು ಇಶಾ ಬಂದಳು. ಮೂರೇ ವರ್ಷಕ್ಕೆ ಮಾತಿನ ಮಲ್ಲಿಯಾಗಿರುವ ಈಕೆಗೆ ಯಾವುದೇ ವಿಷಯ ಹೇಳದರೂ ಮತ್ತೆ ಮೂರು ಬಾರಿ ಹೇಳಿಸುತ್ತಾಳೆ. ಎಷ್ಟೇ ಆಗಲಿ ಸಿನಿಮಾ ನಿರ್ದೇಶಕಿ ಮಗಳಲ್ಲವೆ. ಕವಿತ ಕನಿಷ್ಠ ಐದು ಟೇಕ್‌ಗೆ ಓ.ಕೆ. ಎಂದರೆ, ಈಕೆಗೆ ಮೂರು ಟೇಕ್ ಸಾಕು.


ಇಶಾ ರಂಗವ್ವನ ಮನೆ ಕೊಟ್ಟಿಗೆ ನೋಡಿದಳು. ಮೂಲೆಯಲ್ಲಿ ಹಸುವಿನ ಕರು ಮಲಗಿತ್ತು, ಅದರ ಬಳಿ ಹೋದವಳೇ ಅತ್ಯಂತ ಸಹಜವಾಗಿ "ನಿನ್ನೆಸರೇನು" ಎಂದಳು. ಆ ಹಸುವಿನ ಕರು ಅಷ್ಟೇ ಸಹಜವಾಗಿ ಅವಳನ್ನು ನೋಡತೊಡಗಿತು. ಇಶಾ ಮತ್ತೆ "ನಿನ್ನೆಸರೇನು" ಎಂದಳು. ಕರುವಿನಿಂದ ಉತ್ತರ ಬರಲಿಲ್ಲ, ಕೇಳಿದ್ದಕ್ಕೆ ಉತ್ತರ ಹೇಳದ ಆ ಕರುವಿನ ಬಗ್ಗೆ ಇಶಾಗೆ ಒಂದಿಷ್ಟು ಸಿಟ್ಟು ಬಂತು. ಈ ಸಲ ಕೇಳಿದ ಅವಳ ಪ್ರಶ್ನೆಯಲ್ಲಿ ಜೋರಿನ ಸಿಟ್ಟಿತ್ತು, ಆದರೂ ಆ ಕರ ಉತ್ತರ ಕೊಡಲಿಲ್ಲ, ನನ್ನ ಕಡೆಗೆ ತಿರುಗಿ "ಅಂಬಾ ಪಾಪ ಮಾತಾಡಲ್ವ?" ಎಂದಳು. "ಅದಿನ್ನೂ ಮಗು, ಅದ್ಕೆ ಮಾತು ಬರಲ್ಲ" ಎಂದೆ. ನಾನು "ಅವು ಮಾತನ್ನೇ ಆಡುವುದಿಲ್ಲ ಬರೀ ಅಂಬಾ ಎನ್ನುತ್ತವೆ" ಎನ್ನಬಹುದಿತ್ತು, ಯಾಕೋ ಹಾಗೆ ಹೇಳುವುದಕ್ಕಿಂತ ಇದೇ ಸರಿ ಎನ್ನಿಸಿತು. ದೆವ್ವ ಇಲ್ಲವೇ ಇಲ್ಲ ಎನ್ನುವುದಕ್ಕಿಂತ ದೆವ್ವದ ಕೈಗೆ ಸಿಕ್ಕಿ ಪೇಚಾಡಿದ ಸುಳ್ಳು ಕತೆಯೇ ಚೆಂದ ಎಂದು ಈಚೆಗೆ ನನಗನ್ನಿಸಿದೆ. ಅದಕ್ಕೇ "ಕರುವಿನ್ನೂ ಮಾತು ಕಲಿತಿಲ್ಲ" ಎಂದೆ. ಪಕ್ಕದಲ್ಲೇ ಎಮ್ಮೆ ಕರುವಿತ್ತು, ನಾನು ಅದಕ್ಕೆ "ನಿನ್ನೆಸರೇನು ಕಂದಾ" ಎಂದೆ. ಕೂಡಲೇ ಇಶಾ "ಅಂಬಾ ಪಾಪಗೆ ಮಾತು ಬರಲ್ಲಾ ಅನ್ನದು



ಗಂಟೆ' ಎಂಬ ಕೃತಿಯನ್ನು ನಿಷೇಧಿಸಿತ್ತು. ಲೇಖಕರು, ಪತ್ರಕರ್ತರು ಹಾಗೂ ಕಲಾವಿದರನ್ನು ಕೊಲೆ ಮಾಡಿದ ಹಲವು ಘಟನೆಗಳು ನಮ್ಮ ದೇಶದಲ್ಲಿ ನಡೆದಿವೆ. ದೆಹಲಿಯಲ್ಲಿ ಸಫ್ದರ್ ಹಾಶ್ಮಿಯವರು ದಾರುಣವಾಗಿ ಕೊಲೆಗೈಯಲ್ಪಟ್ಟದ್ದು ಹಾಗೂ ಬೇಕನೂರ್ ಮೌಲವಿಯ ಮರಣ. ಇವಕ್ಕೊಂದು ಉದಾಹರಣೆ.

ಸೌದಿ ಅರೇಬಿಯಾದಲ್ಲಿ ಫ್ರಾಯ್ಡ್, ಕಾರ್ಲ್‌ಮಾರ್ಕ್ಸ್, ಚಾರ್ಲ್ಸ್ ಡಾರ್ವಿನ್ ಮುಂತಾದವರ ಕೃತಿಗಳನ್ನು ಓದುವುದಕ್ಕಾಗಲಿ, ಮಾರಾಟ ಮಾಡುವುದಕ್ಕಾಗಲಿ ಅವಕಾಶವಿಲ್ಲ. ಆ ದೇಶದ ಕುರಿತು ಮತ್ತು ಅವರ ಸಂಸ್ಕೃತಿಯ ಕುರಿತು ಬರೆದ 'ರೋಡ್ ಟು ಮಕ್ಕಾ' ಎಂಬ ಕೃತಿ ರಚಿಸಿದ ಮುಹಮ್ಮದ್ ಅಸದ್ ಎಂಬವರ ಖುರ್‌ಆನ್ ವ್ಯಾಖ್ಯಾನಕ್ಕೂ ಅಲ್ಲಿ ನಿಷೇಧವಿದೆ. ಆ ವ್ಯಾಖ್ಯಾನದಲ್ಲಿ ಈಸಾನೆಬಿ (ಯೇಸು ಕ್ರಿಸ್ತ) ಈಗ ಬದುಕಿಲ್ಲ ಎಂದು ಆತ ಬರೆದದ್ದು ಈ ನಿಷೇಧಕ್ಕೆ ಕಾರಣ. ಈಸಾನೆಬಿ ಶಿಲುಬೆಯಲ್ಲಿ ಮೃತರಾಗಲಿಲ್ಲ; ದೇವರು ಆಗ ಅವರನ್ನು ಆಕಾಶಕ್ಕೆ ಎತ್ತಿಕೊಂಡು ಹೋದರೆಂದೂ ಈಸಾನೆಬಿ ಈಗಲೂ ಅಲ್ಲಿ ಬದುಕಿದ್ದಾರೆಂದೂ ಹೇಳುವ ಮುಸ್ಲಿಮರ ವಿಶ್ವಾಸಕ್ಕೆ ಮುಹಮ್ಮದ್ ಅಸದ್‌ರ ವ್ಯಾಖ್ಯಾನ ವಿರುದ್ಧವಾಗಿರುವುದೇ ಈ ನಿಷೇಧಕ್ಕೆ ಕಾರಣವಾಗಿತ್ತು. ಅಲ್ಲಾಮಾ ಯೂಸುಫ್ ಅವರ ಖುರ್‌ಆನ್ ವ್ಯಾಖ್ಯಾನದ ಹಲವಾರು ಅಡಿ ಟಿಪ್ಪಣಿಗಳನ್ನು ಸೌದಿ ಅರೇಬಿಯಾ ನಿಷೇಧಿಸಿದೆ!

ಕೇರಳದಲ್ಲಿ 'ಕ್ರಿಸ್ತನ ಅಂತ್ಯ ಪ್ರಲೋಭನ' ಎಂಬ ಕೃತಿ, ಅದನ್ನಾಧರಿಸಿ ಪಿ.ಎಂ. ಆಂಟಣಿ ಬರೆದ 'ಕ್ರಿಸ್ತುವಿನ ಆರನೇ ಪವಿತ್ರ ಗಾಯ (ಕ್ರಿಸ್ತುವಿಂಡೆ ಆರಾಂ ತಿರುಮುರಿವು) ಎಂಬ



ನಾಟಕ, 'ಭಗವಾನ್ ಕಾಲು ಮಾರುನ್ನು' ಎಂಬ ನಾಟಕವೆಲ್ಲವೂ ಪ್ರತಿಭಟನೆಗೆ ತುತ್ತಾಗಿವೆ. ಕರ್ನಾಟಕದ ವಿಷಯವನ್ನು ಇನ್ನೊಮ್ಮೆ ವಿವರಿಸಬೇಕಾದ ದ್ದಿಲ್ಲವಲ್ಲ?

ಇಲ್ಲಿ ನಾನು ಇನ್ನೊಂದು ವಿಷಯವನ್ನು ಮುಸ್ಲಿಮರ ಗಮನಕ್ಕೆ ತರಲಿಚ್ಛಿಸುತ್ತೇನೆ. ನಾನು ಅಮೆರಿಕದಲ್ಲಿದ್ದಾಗ ಅಲ್ಲಿನ ಟಿವಿಯಲ್ಲಿ ವಿಶ್ವವಿದ್ಯಾಲಯದ ಕೆಲವು ಪ್ರಾಧ್ಯಾಪಕರ ಒಂದು ಚರ್ಚೆ ಪ್ರಸಾರವಾಯಿತು. ಅವರಲ್ಲೊಬ್ಬರು ಮುಸ್ಲಿಮರಾಗಿದ್ದರು. ಅವರೊಡನೆ ಇನ್ನೊಬ್ಬ ಪ್ರಾಧ್ಯಾಪಕರು ಒಂದು ಪ್ರಶ್ನೆ ಕೇಳಿದರು. "ಇಸ್ಲಾಂ ಧರ್ಮಸ್ಥಾಪನೆಯಾದ ಸುಮಾರು ನಾಲ್ಕು ಶತಮಾನಗಳಲ್ಲಿ ಜಗತ್ತಿನ ಸುಮಾರು ಅರ್ಧ ಭಾಗದಷ್ಟು ಪ್ರದೇಶದಲ್ಲಿ ಈ ಧರ್ಮ ಹರಡಿಕೊಂಡಿತ್ತು (ಸ್ಪೈನಿನಿಂದ ಏಷ್ಯಾದ ಪೂರ್ವಭಾಗದವರೆಗೆ ಹಾಗೂ ಆಫ್ರಿಕಾ ಖಂಡದ ಉತ್ತರ ಭಾಗ). ಇಂದು ಈ ಜನಸಮುದಾಯ ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಿಂದುಳಿಯಲು ಕಾರಣವೇನು?" ಅದಕ್ಕೆ ಅವರ ಉತ್ತರ ಹೀಗಿತ್ತು:

"ಈ ಜನತೆಯ ಮೇಲೆ ಧರ್ಮಗುರುಗಳ ಹಿಡಿತ ಬಲವಾಗತೊಡಗಿತು. ಹಲವಾರು ಮೂಢನಂಬಿಕೆಗಳಲ್ಲಿ ಇವರು ಮುಳುಗುವಂತಾಯಿತು. ಬಹಳ ಮುಖ್ಯವಾದ ವಿಷಯವೆಂದರೆ ಯೂರೋಪ್ ಖಂಡ ವೈಜ್ಞಾನಿಕವಾಗಿ ಮುಂದುವರಿಯ ತೊಡಗಿದರೆ ಮುಸ್ಲಿಮರು ಧರ್ಮಗುರುಗಳ ಬೋಧನೆಯಂತೆ ವೈಜ್ಞಾಕವಾಗಿ ತೀರಾ ಹಿಂದುಳಿದರು. ವಿಜ್ಞಾನವನ್ನು ನಿರ್ಲಕ್ಷಿಸಿದ್ದರ ಪರಿಣಾಮ ಇದಾಗಿದೆ" ಎಂದರು. ಪ್ರವಾದಿಗಳು ಜಗತ್ತಿನ ಭಾಷೆಯ ಎಲ್ಲ ಸಾಹಿತ್ಯ ಕೃತಿಗಳನ್ನೂ ಅರಬ್ ಭಾಷೆಗೆ ಭಾಷಾಂತರಿಸಲು (ರಾಮಾಯಣ, ಮಹಾಭಾರತ ಮುಂತಾದ ಧಾರ್ಮಿಕ ಗ್ರಂಥಗಳನ್ನು ಹೊರತುಪಡಿಸಿ) ಬೋಧಿಸಿದ್ದರು. ಕಾಳಿದಾಸನ ಶಾಕುಂತಲ ಕೂಡಾ ಅರಬ್ ಭಾಷೆಗೆ ಭಾಷಾಂತರಗೊಂಡಿತ್ತು. ಆದರೆ ಹದಿನೈದನೇ ಶತಮಾನದ ಹೊತ್ತಿಗೆ ಧರ್ಮಗುರುಗಳ ಬೋಧನೆಯಂತೆ ಇವುಗಳೆಲ್ಲವನ್ನೂ ಸಾಗರದಾಳಕ್ಕೆ ಎಸೆಯಲಾಯಿತು! ಇಂದು ವಿಜ್ಞಾನಿಗಳೂ ಕೂಡಾ ಮತಾಂಧತೆಯಲ್ಲಿ ಮುಳುಗಿ ಜಗತ್ತನ್ನು ವಿನಾಶದತ್ತ ಕೊಂಡೊಯ್ಯುತ್ತಿರುವುದು ಬಹುದೊಡ್ಡ ದುರಂತವಾಗಿದೆ.

-ಸಾರಾ ಅಬೂಬಕ್ಕರ್

ಗೊತ್ತಿಲವಾ" ಎಂದು ನನ್ನನ್ನೇ ಅಣಕಿಸಿದಳು. ನಾನು ಸುಮ್ಮನಾಗಬೇಕಾಯ್ತು.

ನನ್ನ ಬೆಟ್ಟು ಹಿಡಿದು ಊರಲ್ಲಿ ರೌಂಡ್ ಹೋಗಣ ಎಂದಳು. "ಅಬ್ಬಾ ಮಗುವೆ, ನಾವು ಅವಸಾನದ ಅಂಚಿಗೆ ಬಂದಿದ್ದರೂ ನಮ್ಮೂರುಗಳ ಕೆಲವರ ಕೇರಿಯನ್ನೇ ನೋಡಿಲ್ಲ, ಅಂತಾದ್ದರಲ್ಲಿ ಈ ಪುಟಾಣಿ ಮಗು ಊರನ್ನೇ ನೋಡುವ ಅಪೇಕ್ಷೆ ಹೊತ್ತಿದೆಯಲ್ಲ" ಎನ್ನುತ್ತಾ "ಆಯ್ತು, ನಡಿಯವ್ವಾ" ಎಂದೆ. ಅಲ್ಲೊಂದು ಮನೆಯ ಮುಂದೆ ಆಡು ಕುರಿ ಮೆಲಕು ಹಾಕುತ್ತ ಮಲಗಿದ್ದವು. ಅವನ್ನ ನೋಡಿದ ಕೂಡಲೇ ಅವಳ ಕಣ್ಣು ಕೌತುಕದಿಂದ ಮಿನುಗಿದವು. "ಅವುರೆಸರು ಕೇಳನಾ" ಎಂದಳು.

"ನೀನೆ ಕೇಳಿಕೊಂಡು ಬಾ, ನಾನಿಲ್ಲೆ ಕುಂತಿರತಿನಿ" ಎಂದು ಕಳಿಸಿದೆ. ಆಕೆ ಹೋಗಿ ಮೇಕೆ ಮುಂದೆ ನಿಂತು "ನಿನ್ನಸರೇನು" ಎಂದಳು. ದೂರದಲ್ಲಿ ನೋಡುತ್ತಿದ್ದ ಆಡು ಕುರಿ ಮಾಲೀಕ ದಂಪತಿಗಳು ನಗತೊಡಗಿದರು. ಆದರೂ ಇಶಾ ಸಂಕೋಚಗೊಳ್ಳದೆ ಎರಡು ಸಾರಿ ಆಡಿನ ಹೆಸರು ಕೇಳಿ ನನ್ನ ಬಳಿ ಬಂದಳು. "ಏನಂತೆ ಹೆಸರು?" ಎಂದೆ. ಇಶಾ ಯಾವ ಅಳುಕೂ ಇಲ್ಲದೆ "ಸಾಜನ" ಎಂದಳು. "ಪಕ್ಕದಲ್ಲಿದೆಯಲ್ಲಾ, ಅದರೆಸರು?" ಎಂದೆ. "ಅದರ ಹೆಸರು ರಾಕಿ" ಎಂದಳು. "ಪರವಾಗಿಲ್ಲ ಒಳ್ಳೆ ಹೆಸರಿಟ್ಟುಕೊಂಡವೆ" ಎಂದೆ, ಇಶಾ ನಕ್ಕಳು.


ಅವಳ ಕಾರ್ಟೂನ್ ಲೋಕದ ಪಶುಪಕ್ಷಿಗಳು ಮಾತನಾಡುತ್ತವೆ. ಅದಕ್ಕೆ ಅವು ನಿಜವಾಗಿ ಅಂದಾಗ ಅವುಗಳ ಹೆಸರು ಕೇಳಿರಬಹುದು ಎಂದುಕೊಂಡೆ. ಅದಕ್ಕಿಂತ ಮುಖ್ಯವಾಗಿ, ಕರಿ ಬಡಕಲು ಆಡಿನ ಹೆಸರು ಸಾಜನ, ಗೊಣ್ಣೆ ಬುರುಕ ಕುರಿ ಹೆಸರು ರಾಕಿ ಎಂದು ನೆನಸಿಕೊಂಡಾಗ ನಗು ಬಂತು. ಇವು ಅವಳ ಕಲ್ಪನೆಯ ಹೆಸರುಗಳೊ ಅಥವಾ ಅವಳ ಸ್ಕೂಲಿನ ಮಕ್ಕಳ ಹೆಸರೋ, ನನಗಿನ್ನು ತಿಳಿದಿಲ್ಲ.

ಆದರೆ ಅವಳ ಕಲ್ಪನಾ ಸಾಮ್ರಾಜ್ಯದಲ್ಲಿ 'ನಾಸರ' ಎಂಬ ಗೆಳತಿಯಿದ್ದಾಳೆ. ಅವಳ ಬಗ್ಗೆ ಇಶಾ ಈವರೆಗೆ ತುಂಬಾ ಹೇಳಿದ್ದಾಳೆ. ಆಗಾಗ್ಗೆ ಅವಳ ವಯಸ್ಸು, ಆಕೆಯ ಸ್ಕೂಲು, ಇಂದೊಮ್ಮೆಯ ಹೆಸರನ್ನು ಬದಲಿಸುತ್ತಾಳೆ. ಆ ನಾಸರ ಯಾರೆಂಬುದು ಇನ್ನೂ ಚಿದಂಬರ ರಹಸ್ಯವಾಗುಳಿದಿದೆ. ಬಹುಶಃ ಈ ರಾಕಿ, ಸಾಜನ ಆ ಲೋಕದವೇ ಇರಬೇಕು. ಮಕ್ಕಳಿಗೆ ನೀವು ಎಂತಹ ಆಟದ ಸಾಮಾನನ್ನಾದರೂ ತಂದುಕೊಡಿ ಆದರೆ ಅವು ಪಶು, ಪಕ್ಷಿ, ಕ್ರಿಮಿಕೀಟಗಳನ್ನು ನೋಡಿದಾಗಿನ ಬೆರಗನ್ನು ಮನುಷ್ಯ ನಿರ್ಮಿತ ಯಾವ ಆಟಿಕೆ ನೋಡಿದಾಗಲೂ ತೋರುವುದಿಲ್ಲ.

ಈ ವಯಸ್ಸಿಗೇ ಇಶಾ ಹಸು ಕರ ಈಯುವ ದೃಶ್ಯವನ್ನು ನೋಡಿದಳು. ಅದು ಕಾಗಿನ್ನ ಹಸ. ಲಂಗವಿಲ್ಲಗೆ ಬೀಡಿದ್ದುದು ಹೆಣ್ಣುಗರು. ಕವಿತಾ ಶೂಟಿಂಗ್‌ಗಾಗಿ ತರಿಸಿದ್ದ ಹಸು. ಕೂಡ ಹೆಣ್ಣುಗರುವನ್ನೇ ಹಾಕಿತು. ಇಶಾ ಆನಂದಕ್ಕೆ ಪಾರವೇ ಇರಲಿಲ್ಲ.

-ಬಿ. ಚಂದ್ರೇಗೌಡ

ತಂದೆಯ ನೆನಪುಗಳು 3




■ ಈಚಾರ ವಾರಿಯರ್

ಕನ್ನಡಕ್ಕೆ: ಸಾರಾ ಅಬೂಬಕ್ಕರ್

ಇತ್ತೀಚೆಗೆ ಶ್ರೀ ಕೆ. ಕರುಣಾಕರನ್ ಒಂದು ವೀರವಾದವನ್ನು (ಜಂಭಕೊಚ್ಚಿಕೊಳ್ಳುವುದು) ಹೊರಹಾಕಿದನು. ಕೇರಳದಲ್ಲಿ ಇಂದು ನಕ್ಸಲೈಟ್ ಚಟುವಟಿಕೆ ಇಲ್ಲವೇ ಇಲ್ಲ, ಅದಕ್ಕೆ ತಾನು ಮತ್ತು ತನ್ನ ಆಡಳಿತ ಕಾರಣರಾಗಿದ್ದೇವೆ ಎಂಬುದಾಗಿತ್ತು ಆತನ ವಾದ. ಕಾಯಣ್ಣ ಪೊಲೀಸ್ ಸ್ಟೇಷನ್ ಆಕ್ರಮಣ ಹಾಗೂ ಅದಕ್ಕೆ ಸಂಬಂಧಿಸಿದಂತೆ ನಡೆದ ಪೊಲೀಸ್ ನರಬೇಟೆ ಕರುಣಾಕರನ್ ಇಂತಹ ಹೇಳಿಕೆ ನೀಡಲು ಕಾರಣವೆಂದು ನನಗನ್ನಿಸಿತು.

1976 ಫೆಬ್ರವರಿ 28ರಂದು ಹಲವರು ಸೇರಿಕೊಂಡು ಕಾಯಣ್ಣ ಪೊಲೀಸ್ ಸ್ಟೇಷನ್ ಆಕ್ರಮಣ ಮಾಡಿ ಅಲ್ಲಿಂದ ಒಂದು ಕೋವಿಯನ್ನೆತ್ತಿಕೊಂಡು ಹೋದರು. ಈ ಘಟನೆಗೆ ನಕ್ಸಲೈಟ್‌ಗಳು ಕಾರಣವೆಂದು ಅನುಮಾನಿಸಲು ಅಧಿಕಾರಿಗಳಿಗೆ ಹೆಚ್ಚು ಹೊತ್ತೇನೂ ಬೇಕಾಗಲಿಲ್ಲ. ಪೊಲೀಸ್ ಸ್ಟೇಷನ್ ಆಕ್ರಮಣದ ಕುರಿತು ತನಿಖೆ ನಡೆಸಲು ಕಕ್ಕಯಂ ಕ್ಯಾಂಪನ್ನು ಸ್ಥಾಪಿಸಲಾಯಿತು. ಕಕ್ಕಯಂನಲ್ಲಿ ಟಿನ್ ಶೀಟ್ ಹೊದಿಸಿದ ಉದ್ದವಾದ ಒಂದು ಷೆಡ್ ಈ ಕ್ಯಾಂಪ್ ಆಗಿತ್ತು. ಕ್ಯಾಂಪಿನ ಮುಂಭಾಗದಲ್ಲಿ ಒಂದು ಜಲಾಶಯವಿತ್ತು. ಕ್ಯಾಂಪಿನಿಂದ ಒಂದೆರಡು ಫರ್ಲಾಂಗ್ ದೂರದಲ್ಲಿ ವಿದ್ಯುಚ್ಛಕ್ತಿ ಮಂಡಳಿಯ ಇನ್ಸ್‌ಪೆಕ್ಟರ್ ಬಂಗಲೆ ಇತ್ತು. ಹತ್ತಿರದಲ್ಲೇ ಒಂದು ಆರೋಗ್ಯ ಕ್ಯಾಂಪ್ ಕೂಡಾ ಇತ್ತು.

ಪೊಲೀಸ್ ಸ್ಟೇಷನ್ ಆಕ್ರಮಣದ ಬಳಿಕ 29ರಿಂದ ಕಾಯಣ್ಣ ಕೂರಾಚ್ಚುಂಡ್, ಕಕ್ಕಯಂ ಮುಂತಾದ ಗ್ರಾಮಗಳಿಂದ ನೂರಾರು ಯುವಕರನ್ನು ಹಿಡಿದುಕೊಂಡು ಬಂದು ಚಿತ್ರಹಿಂಸೆ ನೀಡತೊಡಗಿದರು. ಪೊಲೀಸರು ಸಾಧ್ಯವಿದ್ದಷ್ಟು ಯುವಕರನ್ನು



ಕಕ್ಕಯಂ ಕ್ಯಾಂಪ್

ಕರೆದುಕೊಂಡು ಬಂದು ಇಳಿಸುತ್ತಿದ್ದರು. ಪುನಃ ಹೋಗಿ ಮತ್ತಷ್ಟು ಜನರನ್ನು ಕರೆದುಕೊಂಡು ಬರುತ್ತಿದ್ದರು. ಈ ಪ್ರಕ್ರಿಯೆ ಕೆಲವು ದಿನಗಳವರೆಗೆ ಮುಂದುವರಿಯಿತು.

ಇಂಗ್ಲೆಂಡಿನ ಸ್ಕಾಟ್‌ಲ್ಯಾಂಡ್ ಯಾರ್ಡಿನಲ್ಲಿ ಅಪರಾಧ ತನಿಖೆಯ ಆಧುನಿಕ ತಂತ್ರಗಳಲ್ಲಿ ತರಬೇತಿ ಪಡೆದು ಹಿಂತಿರುಗಿದ ಡಿ.ಐ.ಜಿ. ಜಯರಾಮ ಪಡಿಕ್ಕಲ್ಲರಿಗೆ ಈ ತನಿಖೆಯ ಜವಾಬ್ದಾರಿ ವಹಿಸಲ್ಪಟ್ಟಿತು. ಈ ಇಡೀ ಮೊಕದ್ದಮೆ ಆತನ ಕೈಯೊಳಗಿತ್ತು.

ಇವರ ಅಪರಾಧ ತನಿಖೆಯ ರೀತಿಯ ಕುರಿತು ನಾನು ಚಿಕ್ಕದಾದ ಒಂದು ವಿವರ ನೀಡುವೆ. ಅಪರಾಧ ಸಾಬೀತುಪಡಿಸಲು ಆಧುನಿಕ ಸಂಪ್ರದಾಯಗಳೇನನ್ನೂ ಇವರು ಪರೀಕ್ಷಿಸಿ ನೋಡಲಿಲ್ಲ. ಚಿತ್ರಹಿಂಸೆಯೇ ಇವರ ಏಕ ರೀತಿಯಾಗಿತ್ತು. ಅದನ್ನಾತ ಧಾರಾಳವಾಗಿ ಉಪಯೋಗಿಸಿದನು.

ಚಾತ್ತಮಂಗಲಂ ರೀಜಿನಲ್ ಎಂಜಿನಿಯರಿಂಗ್ ಕಾಲೇಜಿನಲ್ಲಿರುವ ಅಪರಾಧಿಗಳನ್ನು ಬಂಧಿಸಲು ಮಾರ್ಚ್ 1 ರಂದು ಪೊಲೀಸರು ಜೀಪಿನಲ್ಲಿ ಹೋದರು. ಅದರ ಹಿಂದಿನ ದಿನ ಫರೂಕ್ ಕಾಲೇಜಿನಲ್ಲಿ ಕ್ಯಾಲಿಕಟ್ ವಿಶ್ವ ವಿದ್ಯಾಲಯದ ಡಿಸೋನ್ ಯೂತ್ ಫೆಸ್ಟಿವಲ್ ಎಂಬ ಯುವಜನ ಮೇಳವೊಂದು ನೆರವೇರಿತ್ತು. ನನ್ನ ಮಗ ರಾಜನು ಅದರಲ್ಲಿ ಮೊದಲಿನಿಂದ ಕೊನೆಯವರೆಗೂ ಅತ್ಯುತ್ಸಾಹದಿಂದ ಭಾಗವಹಿಸಿದ್ದನು. 28ರ ಇಡೀ ರಾತ್ರಿ, ರಾಜನು ಕಾಲೇಜಿನಲ್ಲಿದ್ದನು. ಕಾಲೇಜಿನಿಂದ 29ರ ಬೆಳಗ್ಗೆ ಆರ್.ಇ.ಸಿ. ಹಾಸ್ಟೆಲಿನ ಅಂಗಳದಲ್ಲಿ ಬಸ್ಸಿನಿಂದ ಸ್ನೇಹಿತರೊಡನೆ ಕೆಳಗಿಳಿದನು. ಕೂಡಲೇ ಪೊಲೀಸರು ಅವನನ್ನು ಬಂಧಿಸಿದರು.

ರಾಜನು ಅಪರಾಧಿಯೇ ಎಂದು ತಿಳಿಯಲು ಫಾರೂಕ್ ಕಾಲೇಜಿನಲ್ಲಿ ವಿಚಾರಿಸಿದ್ದರೆ ಸಾಕಾಗಿತ್ತು. ಕಾಯಣ್ಣ ಪೊಲೀಸ್ ಸ್ಟೇಷನ್ ಆಕ್ರಮಣ ನಡೆಯುತ್ತಿದ್ದಾಗ ರಾಜನು ಯುವಜನ ಮೇಳದಲ್ಲಿ ಭಾಗವಹಿಸುತ್ತಿದ್ದನು. ಕಾಲೇಜು ಬಸ್ಸಿನಲ್ಲಿ ಬಂದಿಳಿದ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ನನ್ನ ಈ ಮಾತಿಗೆ ಸಾಕ್ಷಿಗಳಾಗಿದ್ದಾರೆ.

ಆದರೆ ಪೊಲೀಸರು ಯಾರೊಡನೆಯೂ ಏನನ್ನೂ ವಿಚಾರಿಸಲಿಲ್ಲ. ಕಾಯಣ್ಣ ಪೊಲೀಸ್ ಸ್ಟೇಷನ್ ಆಕ್ರಮಣದಲ್ಲಿ ಯಾರ್‍ಯಾರು ಭಾಗವಹಿಸಿದ್ದರು, ಅಥವಾ ಎಷ್ಟು ಜನರಿದ್ದರು ಎಂದು ವಿಚಾರಿಸಿ ತಿಳಿದುಕೊಳ್ಳಲು ಪೊಲೀಸರಿಗೆ ಆಸಕ್ತಿ ಇರಲಿಲ್ಲ. ಯಾವ ರೀತಿಯ ನಿಯಮಗಳನ್ನೂ ಪಾಲಿಸದೆ ಪೊಲೀಸರು ರಾಜನನ್ನು ಮೊದಲು ಕೋಝಿಕ್ಕೋಡಿಗೂ ಆ ಬಳಿಕ ಕಕ್ಕಯಂಗೂ ಕೊಂಡೊಯ್ದರು.

ಕಕ್ಕಯಂ ಕ್ಯಾಂಪಿನಲ್ಲಿ ನನ್ನ ಮಗನು ಅನುಭವಿಸಿದ ದೌರ್ಜನ್ಯಗಳ ಕುರಿತು ಬರೆಯಲು ನನಗೆ ಶಕ್ತಿ ಇರುತ್ತದೆಯೇ ಎಂದು ತಿಳಿಯದು. ಕಕ್ಕಯಂ ಕ್ಯಾಂಪಿನಲ್ಲಿ ಹಿಟ್ಲರನ ಕ್ಯಾಂಪನ್ನು ನೆನಪಿಸುವಂತಹ ದೌರ್ಜನ್ಯವನ್ನು ಅವನ ಮೇಲೆ ಎಸಗಲಾಯಿತು. ಒಂದು ಪೀಳಿಗೆಯ ಚಿಂತನಾಪರವಾದ ನೈತಿಕತೆಯನ್ನು ಮುಷ್ಟಿಯಿಂದ ನಾಶಮಾಡಲು ಸಾಧ್ಯವೇ ಎಂಬ ಪೂರ್ಣ ಪ್ರಜಾಪ್ರಭುತ್ವ ವಿರುದ್ಧವೂ ಹೃದಯ ಶೂನ್ಯವೂ ಆದ ಒಂದು ಪರೀಕ್ಷೆ ಕ್ಯಾಂಪಿನಲ್ಲಿ ನೆರವೇರಿತು.

> ಪೊಲೀಸ್ ಸ್ಟೇಷನ್ ಆಕ್ರಮಣದ ಬಳಿಕ ಕಾಯಣ್ಣ, ಕೂರಾಚ್ಚುಂಡ್, ಕಕ್ಕಯಂ ಮುಂತಾದ ಗ್ರಾಮಗಳಿಂದ ನೂರಾರು ಯುವಕರನ್ನು ಹಿಡಿದುಕೊಂಡು ಬಂದು ಚಿತ್ರಹಿಂಸೆ ನೀಡತೊಡಗಿದರು. ಪೊಲೀಸರು ಸಾಧ್ಯವಿದ್ದಷ್ಟು ಯುವಕರನ್ನು ಕರೆದುಕೊಂಡು ಬಂದು ಇಳಿಸುತ್ತಿದ್ದರು. ಪುನಃ ಹೋಗಿ ಮತ್ತಷ್ಟು ಜನರನ್ನು ಕರೆದುಕೊಂಡು ಬರುತ್ತಿದ್ದರು.

ಜಯರಾಮ ಪಡಿಕ್ಕಲ್ ಎಂಬ ಪೊಲೀಸ್ ಅಧಿಕಾರಿ ಇದರಲ್ಲಿ ಎಂತಹ ಜಯಗಳಿಸಿದನು ಎಂದು ಚರಿತ್ರೆಯೇ ತೀರ್ಮಾನಿಸಲಿ.

ನನ್ನ ಮಗನ ಕುರಿತು ಹೇಳುವಾಗ ನನ್ನ ಮಾತುಗಳು ವಿಕಾರವಾದ ಒಂದು ಬಿರುಗಾಳಿಯಲ್ಲಿ ಸಿಕ್ಕಿಕೊಂಡು ನಡುಗಬಹುದು. ರಾಜನು ನನಗೆಂದೂ, ನನ್ನ ಕೈಗಳಿಗೆ ಜೋತು ಬಿದ್ದು, ತಪ್ಪು ಹೆಜ್ಜೆ ಇಟ್ಟು ಅಪ್ಪಾ ಎಂದು ನಗುತ್ತಿದ್ದ ಪುಟ್ಟ ಮಗುವಾಗಿದ್ದನು. ಆದುದರಿಂದ ನನ್ನ ವಿವರಣೆಯಲ್ಲಿ ಪಕ್ಷಪಾತದಂತಹ ಕೆಲವು ವಿವರಣೆಗಳು ಯಾರಿಗಾದರೂ ಗೋಚರಿಸಿದರೆ ಅದು ಮಗನನ್ನು ಕಳೆದುಕೊಂಡ ಓರ್ವ ತಂದೆಯ ಪ್ರಲಾಪವೆಂದು ತಿಳಿದುಕೊಂಡರೆ ಸಾಕು.

ಕಕ್ಕಯಂ ಕ್ಯಾಂಪ್ ಎಂದೊಡನೆ ಮುಂದಿನ ಜನಾಂಗಗಳು ಲಜ್ಜೆಯಿಂದ ತಲೆತಗ್ಗಿಸುವುದನ್ನು ನಾನು ಕಾಣುತ್ತಿದ್ದೇನೆ. ಪ್ರಜಾಸತ್ತೆಯ ಕೇರಳದ ತುದಿಯೊಂದರಲ್ಲಿ ಎಂದೆಂದೂ ಕಣ್ಣೀರಿನಲಿ ಬಿರಿದ ಹೂವೊಂದು ಅರಳಿ ನಿಲ್ಲಬಹುದೆಂಬ ವಿಶ್ವಾಸ ನನಗಿದೆ. ಹಲವಾರು ಹೇಳಿದ್ದರೂ ಕಕ್ಕಯಂ ಕ್ಯಾಂಪಿನ ಕುರಿತು ನನ್ನ ಮರಣಾನಂತರವೂ ಹೇಳದಿರಲು ನನ್ನಿಂದ ಸಾಧ್ಯವಿಲ್ಲ. ವಾರ್ಧಕ್ಯದ ಬಾಗಿಲಿನ ದೊರೆಯಲಿರುವ ಆಭೋಧಾವಸ್ಥೆಯಲ್ಲೂ ಕಕ್ಕಯಂ ಕ್ಯಾಂಪಿನ ಕುರಿತೇ ನಾನು ಹೇಳುವೆ. ■

ದ್ಯಾವೇಗೌಡ ಕಾಂಗ್ರೆಸ್ನೋರ ಮನೆ ಮ್ಯಾಲೆ ಕಲ್ಲುಸಿತಾಯಿದ್ದನಂತೆ

ಉಗ್ರಿ ಏನೋ ಮಾತನಾಡಲು ಅಣಿಯಾಗುತ್ತಿದ್ದು ದನ್ನು ನೋಡಿದ ಸೀರ ಅವನ ಕಡೆ ಬೆರಳು ಮಾಡಿ.

"ಉಗ್ರಿ ಏನ್ನಾರ ಮಾತಾಡು. ಅಧಿಕಾರ ಹಸ್ತಾಂತ್ರ ಹಸ್ತಾಂತ್ರ ಅಂತ ಮಾತ್ರ ಮಾತಾಡಬ್ಯಾಡ" ಎಂದ.

"ಇನ್ನೇನ್ನಾವ ಮಾತಿದ್ದವೊ?"

"ಬ್ಯಾರೆ ಏನಾರ ಮಾತಾಡು."

"ದ್ಯಾವೇಗೌಡನ ಸುದ್ದಿ ಮಾತಾಡು ಅತ್ಲಾಗೆ" ಎಂದಳು ಜುಮ್ಮಿ.

"ಅವುನ ಸುದ್ದಿ ಮಾತಾಡಿದ್ರೆ ನನಿಗೇ ಅವುಮಾನ ಕಣೆ" ಎಂದ ಉಗ್ರಿ.

"ಅವುಮಾನಾಗೋ ಅಂತದ್ದವುನೇನು ಮಾಡಿದ್ದುನ್ಲ?" ಎಂದ ಕಾಳಮಾವ ಅಸಹನೆ ದನಿಯಲ್ಲಿ.

ಬಯಲು ಸೀಮೆಯ ಕಟ್ಟೆಪುರಾಣ

ಬಿ. ಚಂದ್ರೇಗೌಡ

"ಕುಮಾರಸ್ವಾಮಿ ತನ್ನ ಕೈಮೀರಿ ಬಜೆಪಿ ಜ್ವತಿಗೆ ಕೈ ಸೇರಿಸಿಬುಟ್ಟಾ ಅಂತ ಹನ್ನರಡ ದಿನ ಹಾಸಗೆ ಹಿಡುದು ಮನಗಿರಲಿಲವೇನೊ ಮಾವ?"

"ಊ ಮನಗಿದ್ದ."

"ಈಗ ಮಗನಿಗೆ ಗ್ನಾನೋದಯಾಗ್ಯದೆ, ಇವುನಿಗೆ ತಲಿಕೆಟ್ಟೊಗ್ಯದೆ."

"ಅದ್ಯಾಕ್ಕೆಟ್ಟದೇ?"

"ಈ ಬಜೆಪಿಗಳ ಜ್ವತಿಗೆ ಸೇರಿ ನಮಿಗೆ ಮರಿಯಾದಿ ಕಡಿವ್ಯಾಗ್ಯದೆ ಅಂತ ಕುಮಾರಸ್ವಾಮಿ ಅಂದ್ರೆ ಅದಕವುನೇನನ್ನಬೇಕು, ಆತರ ತಿಳಕಬ್ಯಾಡ ಅಂಗೇನೂ ಆಗಿಲ್ಲ ಅನ್ನದೇನೊ ಮಾವ?"

"ಅಂಗನ್ನದ್ರಲ್ಲೆ ಏನೋ ದುಡಿಗ್ಯವುನೆ ಕಂಡ್ರ" ಎಂದ ಸೀರ.

"ಅಂಗೆ ಆಗ್ಯದಪ್ಪ ಈಗ. ದ್ಯಾವೇಗೌಡ ಏನಾರ ಮಾತಾಡಿದ್ರೆ ಅದರಿಂದೆ ಏನೋ ಅದೆ ಅನ್ನಂಗಾಗ್ಯದೆ."

"ಅದ್ಕೆ ನಾನು ಅವುರ ಸುದ್ದಿನೆ ಬ್ಯಾಡ ಅಂದಿದ್ದು."

"ನೀನ್ಯಾವ ಸುದ್ದಿ ತಗುದ್ರು ಅದು ದ್ಯಾವೇಗೌಡನ ಬದ್ದಿಗೇ ಹೋಯ್ತದಲ್ಲ ಇದಕೇನೇಳ್ತೀ?" ಎಂದ ಉಗ್ರಿ.

"ಅಂಗಂತಿಯಾ?"

"ಊ ಕಣೆ. ಆ ಹಾಳು ಬಜೆಪಿ ಸುದ್ದಿ ಮಾತಾಡನಾ ಅಂದಿಯಾ. ಆ ಮುಂಡೆ ಮಕ್ಕಳ ನಿದ್ದಿಲ್ಲದಂಗೆ ಮಾಡಿರೋನು ಇದೇ ದ್ಯಾವೇಗೌಡ. ಇನ್ನ ಕಾಂಗ್ರೆಸ್ಸಿನೋರು ಸುದ್ದಿ ಮಾತಾಡಿದ್ರೆ ರಾತ್ರಿವೊತ್ತು ಅವುರ ಮನೆಮ್ಯಾಕೆ ಕಲ್ಲುಸಿತಾಯಿ ರೋನು ದ್ಯಾವೇಗೌಡನೆಯ."

"ಕಾಂಗ್ರೆಸ್ಸಿನೋರ ಮನೆ ಮ್ಯಾಲ್ಯಾಕ್ಲ ಕಲ್ಲುಸ್ತಿನೊ?"

"ಈಗ ಕಾಂಗ್ರೆಸಿನೋರು ಬೇಕಾಗ್ಯದಂತೆ ಕಣೆ ಅವುನಿಗೇ. ಬಜೆಪಿಗಳಿಗೇನಾರ ಅಧಿಕಾರ ಕೊಟ್ರೆ ಆ ಮುಂಡೆಮಕ್ಕಳು ಮುಂದಕೆ ಇವುನ್ನ ಕ್ಯಾರೆ ಅನ್ನದಿಲವಂತೆ. ಅದೇ ಈ ಕಾಂಗ್ರೆಸ್ಸಿನವು ಹೇಳಿಕೇಳಿ ಗುಲಾಮಿ ಸಂತತಿಯವು, ಟೈಂಟು ಟೈ, ಅವುರ ಪಾಲು ಅವುರಿಗೆ ಬಂದ್ರು ಸಾಕು, ದ್ಯಾವೇಗೌಡ ಏನ್ನಾರ ಮಾಡ್ಲಿ ತೃಪ್ತಗಿರತವೆ, ಅದ್ಕೆ ದ್ಯಾವೇಗೌಡ ತಿರಗ ಒಂದು ಕಿತ ಕಾಂಗ್ರೆಸ್ ಮನೆ ಮ್ಯಾಲೆ ಕಲ್ಲು ಬೀರತ ಕುಂತವುನಂತೆ."

"ಕಲ್ಲು ಬೀರತನೆ ಅಂದ್ರೆ ಅರ್ಥಾಗಲಿಲ್ಲ."


"ಇದೇನೆ ಹಿಂಕೇಳ್ತಿ? ರಾತ್ರಿವೊತ್ತು ಯಾರಿಗೂ ಕಾಣದಂಗೆ ನಿನ್ನ ಏಳುಸಬೇಕವ್ವ. ಅದ್ಕೆ ನಿನ್ನ ಮನೆಮ್ಯಾ ಕ್ಕೊಂದು ಅಣ್ಣೆಕಲ್ಲಯಸ್ತರಾಯ್ತು. ನೀನೆ ಎದ್ದೀಚಗೆ ಬತ್ತಿ, ಆಗ ನನ್ನ ಕಷ್ಟ ಹೇಳಿ ಕಂಡ್ರಾಯ್ತು" ಎಂದ ಉಗ್ರಿ.

"ಓಹೊ ಅಂಗೆ, ಹಲ್ಕ ಸೂಳೆಮಗಲವೆ ನೀನು ಇನ್ನಂಗೆ ಮಾತಾಡಿ?" ಎಂದು ಜುಮ್ಮಿ ನಕ್ಕಳು.

"ಆಗಲೆ ಜಾಫರ್ ಶರೀಫ, ಧರಮಸಿಂಗ, ಕರಗೆ, ಮುನಿಯಪ್ಪ ಇಂತ ಲೀಡ್ರುನ್ನಲ್ಲ ಹಿಡದಾಕಿದ್ದನಂತೆ ದ್ಯಾವೇಗೌಡ."

"ಹಿಡದಾಕದೇನೋ? ಕೈಲೊಂದಿದಿ ಹುಲ್ಲಿದ್ರೆ ಅದೇ ಹತ್ರಕೆ ಬತ್ತವೆ ಕಣೊ ಉಗ್ರೀ" ಎಂದುಕೊಂಡು ವಾಟಸ್ಸೆ ಬಂದ.

"ಅದ್ಯಾಕ್ಲ ಸಂತಿಗೋದೋನು ಏನ್ನೂ ತರದೆ ಅಂಗೆ ಬಂದಿದ್ದಿಯಂತೆ?" ಎಂದು ಜುಮ್ಮಿ ಒಮ್ಮೆಲೆ ರೇಗಿದಳು.



"ಅಕ್ಕಾ ರೀಸೆಂಟಾಗಿ ಒಂದು ರೆಕಾರ್ಡಾಗಿದೆ ಕೇಳಿದಾ?"

"ಏನ್ ರಿಕಾಲ್ಡು."

"ಸಂತೆ ದಿನ ವೈನ್‌ಶಾಪಲ್ಲಿ ಯಪ್ಪತ್ತೈದು ಸಾವುರುಪಾಯಿ ಬರೀ ರಾಜಾ ವಿಸ್ಕಿ ಸೇಲಾಗ್ಯದೆ."

"ಏನ್ನಾ ಅಂಗಂದ್ರೇ?"

"ಈ ಮೊದ್ಲು ಶರಾಪು ಜಾರಿಲಿದ್ದಾಗ ಬ್ರಾಂಡಿ ಅಂಗಡಿಲಿ ಬರೀ ಮೂರು ಸಾವುರುಪಾಯಿ ವ್ಯಾಪಾರಾಯ್ತು, ಅದೇ ಈಗ ಕನಿಷ್ಠ ಅಂದ್ರೆ ಐವತ್ತು ಸಾವುರುಪಾಯಿ ವ್ಯಾಪಾರಾಯ್ತದೆ."

"ಅಂಗಾದ್ರೆ ಶರಾಪು ನಿಲ್ಸಿದ್ರಿಂದ ಏನೂ ಆಗೀ ಅನ್ನು?"

"ಏನಾಯ್ತು? ಆಟೋಮ್ಯಾಟಿಕ್ಕಾಗಿ ನಾವು ರಾಜಾ ವಿಸ್ಕಿಗೆ ಸಿಟ್ಟಾದೊ ಕಣಕ್ಕ, ಅಂಗಾಗಿ ಸಂತೆಯಿಂದ ಯಾವ ಸಾಮಾನು ತರಕ್ಕೂ ಆಯ್ತಾಯಿಲ್ಲ, ಪೈಸಾನ್ನು ಶಾರಟೇಜು..."

"ಥೂ ನಿನ್ನ ಸುಳಿ ಹಾಳಾಗಹೋಗು."

"ಅದೂ ರಾಜಾ ವಿಸ್ಕಿ ಈಜಿಯಾಗಿ ಸಿಗತಾಯಿ ಕಣಕ್ಕ. ರೇಶನ್ ಅಂಗಡಿಲಿ ನಿಂತಂಗೆ ಕ್ಯೂ ನಿಂತಗಬೇಕು. ಜಗಳಾಡಬೇಕು. ಪೈಟ್ ಮಾಡ ಬೇಕು. ಅದೇ ನಮ್ಮ ಶರಾಪು ಈಜಿಯಾಗಿ ಸಿಕ್ಕತಿತ್ತು, ಕ್ವಟ್ಟೆ ಚೀಲವ ಹಲ್ಲಲ್ಲಿ ಕುರು ಗಂಟಲಿಗೆ ಪಿಚಕಾರಿ ವಡಕಂಡು ಒಂದ ಉಪ್ಪ ಬಾಯಿಗಾಯ್ಕಂಡು ಬತ್ತಿದ್ದೊ, ಇಮ್ಮಿ ಯಟ್ಟು ಯಪೆಕ್ಟ್ ಆಗದು. ಅದೇ ಒಂದು ಬಾಟ್ಳ ರಾಜಾ ವಿಸ್ಕಿ ತಗೋಬೋಕಾದ್ರೆ ಅವು ತಗಳೋ ಪೇಶಂಟಂಗೆ ಕ್ಯೂ ನಿಂತಗಬೇಕು ಅದು ವರಕು ಮಾಡದು ಲೇಟು" ಎಂದು ವಾಟಸ್ಸೆ ಒಂದು ರಗಳೆ ವೃತ್ತಾಂತವನ್ನೇ ಹೇಳಿದ.

"ಇದೊಳ್ಳೆ ಹಾವ್ಬಿಡ್ಡು ಹದ್ದಿಗಾಕಿದಂಗಾ ಯ್ತಲ್ಲಾ?" ಎಂದ ಸೀರ.

"ರಾಜ ವಿಸ್ಕಿ ತಾನೆ ಏಟು ದಿನ ಕುಡದರೂ ಜೇಬು ಖಾಲಿಯಾದ ಮ್ಯಾಲೆ ಸುಮ್ಮನಾಯ್ತವೆ" ಎಂದ ಉಗ್ರಿ.

"ಕುಡಿಯೋರಿಗೆ ದುಡ್ಡು ಹುಟ್ಟತದೆ ಕಣೊ" ಎಂದ ವಾಟಸ್ಸೆ.

"ಅದೂ ನಿಜವೆ ಬುಡು. ಶರಾಪು ನಿಂತೋಯ್ತು ಅಂತ ನಿಮ್ಮ ಜೇಬಲ್ಲಿ ದುಡ್ಡಿದ್ದತೇ? ರಾಜಾ ವಿಸ್ಕಿ ಯಾಪಾರ ನೋಡಿದ್ರೆ ಸರಕಾರಕೆ ಶರಾಪಿನಿಂದ ಬತ್ತಿದ್ದ ರೆವಿನ್ಯೂ ರಾಜಾ ವಿಸ್ಕಿಯಿಂದ್ಲೆ ಬತ್ತದೆಅಂದಂಗಾಯ್ತು"ಎಂದ ಉಗ್ರಿ.

ಕಳ್ಳರದ್ವಾರವೋ ವೈಕುಂಠದ್ವಾರವೋ....

ಗಂಡಹೆಂಡತಿ ಅನ್ಯೋನ್ಯವಾಗಿದ್ದರು. ಇಬ್ಬರಿಗೂ ಹರಯ. ಮಕ್ಕಳಾಗದಂತಹ ಕಾಯಿಲೆ ಯಾವುದೂ ಇರಲಿಲ್ಲ. ಆದರೂ ಮಕ್ಕಳೇ ಆಗಲಿಲ್ಲ! ಎಲಎಲಾ ಯಾಕಿಂಗೆ ಆಗ್ತಿದೆ ಅಂತ ಸಮೀಪದಲ್ಲಿ ಇದ್ದವರು ಅವರ ಪರವಾಗಿ ಕಂಡಕಂಡ ದೇವರಿಗೆ ಹರಕೆ ಹೊತ್ತರೂ ಸಂತಾನ ಪ್ರಾಪ್ತಿಯಾಗಲೇ ಇಲ್ಲ! ಕೂಲಂಕಷವಾಗಿ ಈ ವಿಷಯವನ್ನು ಪರಿಶೀಲಿಸಿದಾಗ ತಿಳಿದುಬಂದದ್ದು ಏನೆಂದರೆ... ಸಂತಾನ ಯೋಗ ಆ ಪರಮಾತ್ಮನಲ್ಲಲ್ಲ ಗಂಡಹೆಂಡಿರ ಕೈಲೇ ಇದ್ದಿತ್ತಾದರೂ, ಆ ಗಂಡನೆಂಬ ಸಾರ್ವಜನಿಕ ವ್ಯಕ್ತಿ ಕಾರ್ಯಬಾಹುಳ್ಯದಿಂದಾಗಿ ಹೆಂಡತಿಯೊಂದಿಗೆ ಸರಸ ಆಡಲೂ ಸಮಯ ಸಿಗುತ್ತಿರಲಿಲ್ಲ!

ಇದನ್ನು ಯಾಕೆ ಪ್ರಸ್ತಾಪಿಸಬೇಕಾಯಿತು ಅಂದರೆ ಲೋಕಾಯುಕ್ತರು ನಮ್ಮ ಯುವ ಮಂತ್ರಿಗಳಾದ ಆಲ್ಕೋಡ್ ಹನುಮಂತಪ್ಪ ಹಾಗೂ ಶರಣಬಸಪ್ಪ ದರ್ಶನಾಪುರ ಅವರು ವೇಳೆಗೆ ಸರಿಯಾಗಿ ಆಸ್ತಿ ವಿವರ ಸಲ್ಲಿಸಿಲ್ಲ ಎಂದು ದೂರಿದ್ದರಲ್ಲ... ಪಾಪ ಅವರು ತಾನೆ ಯಾವ ಆಸ್ತಿ ಅಂತ ವಿವರ ಕೊಡೋಕೆ ಸಾಧ್ಯ. ಈ ಗಳಿಕೆಯಲ್ಲಿ ಇಷ್ಟೇ ನನ್ನ ಆಸ್ತಿ ಅಂತ ವಿವರ ನೀಡುತ್ತಾರೆ ಅನ್ನಿ, ಅದೇ ಸಮಯದಲ್ಲಿ ಯಾವುದೋ ಒಂದು ಡೀಲು ಬರುತ್ತೆ, ಕೋಟ್ಯಂತರ ರೂಪಾಯಿ ವ್ಯವಹಾರ ಅದು. ಲೋಕಾಯುಕ್ತರಿಗೆ ಆಸ್ತಿ ವಿವರ ಸಲ್ಲಿಸಿದ್ದೀನಿ ಅಂತ ಈ ಮುತ್ತಿನಂತಹ ವ್ಯವಹಾರ ಬಿಡಲು ಮನಸ್ಸು ಒಪ್ಪುವುದಿಲ್ಲ, ಡೀಲ್‌ನ ಕುದುರಿಸುತ್ತಾರೆ. ಆಗ ದಿಢೀರನೆ ಅಂತಸ್ಸಾಕ್ಷಿ ಪ್ರತ್ಯಕ್ಷ ಆಗಿ 'ಲೋ ಪಾಪಿ ಲೋಕಾಯುಕ್ತರಿಗೆ ಸುಳ್ಳು ಮಾಹಿತಿ ನೀಡಿದ್ದಿಯಲ್ಲೋ' ಎಂಬುದಾಗಿ ಗುದ್ದುತ್ತೆ. ಯಾವ ವಿವರವನ್ನು ಸಲ್ಲಿಸದೇ ಇದ್ದರೆ ಇಂತಹ ಪ್ರಶ್ನೆ ಉದ್ಭವಿಸುವುದಿಲ್ಲ, ಆದರೆ ಹಾಗೆ ಮಾಡಲು ಲೋಕಾಯುಕ್ತರು ಬಿಡುವುದಿಲ್ಲ, ಇಂತಹ ಸಂದಿಗ್ಧ ಪರಿಸ್ಥಿತಿಗೆ ಸಿಕ್ಕಿದ ಮಂತ್ರಿದ್ವಯರು ಅಳೆದು ಸುರಿದು ಆಸ್ತಿ ವಿವರ ಸಲ್ಲಿಸುವುದು ತಡವಾಗಿರಬಹುದು ಎಂದು ನಾವೆಲ್ಲ ಭಾವಿಸಿದ್ದೆವು. ಆದರೆ ನಮ್ಮ ಯುವ ಮುಖ್ಯಮಂತ್ರಿಗಳು ಇವು ತಪ್ಪು ಕಲ್ಪನೆಗಳೆಂದು ಸಾರಿ 'ಸಚಿವರು ಮತ್ತು ಜನಪ್ರತಿನಿಧಿಗಳು ಸದಾ ಸಾರ್ವಜನಿಕ ಸೇವೆಯಲ್ಲಿ ನಿರತರಾಗಿರುವುದರಿಂದ ಅವರಲ್ಲಿ ಕೆಲವರಿಗೆ ಆಸ್ತಿ ವಿವರ ಸಲ್ಲಿಸಲು ಪುರುಸೊತ್ತಾಗದೆ ವಿಳಂಬವಾಗಿ ಬಿಡುತ್ತದೆ' ಎಂಬ ಅಪೂರ್ವವಾದ ಒಳನೋಟ ಬೀರಿದ್ದಾರೆ.

ದಿನದ ಇಪ್ಪತ್ತು ನಾಲ್ಕು ಗಂಟೆಗಳೂ ಸಾರ್ವಜನಿಕ ಸೇವೆಯಲ್ಲೇ ತೊಡಗಿಸಿಕೊಂಡಿರುವ ಈ ಮಹಾಮಹಿಮರಿಗೆ ಯುವ ವಯಸ್ಸಿನಲ್ಲಿಯೂ ದಾಂಪತ್ಯ ಕರ್ತವ್ಯ ನಿರ್ವಹಿಸಲು ಸಮಯವೇ ದೊರಕುವುದಿಲ್ಲ! ಇಂತಹ ಕರ್ತವ್ಯವನ್ನು ಬೇರೆ ಕಡೆ ನಿಭಾಯಿಸಬಹುದೋ ಎಂದರೆ ಅದು ಸಾರ್ವಜನಿಕ ಸೇವೆ ಎಂದಾಗಬಹುದೇ ಪರಂತು ದಾಂಪತ್ಯ ಕರ್ತವ್ಯಕ್ಕೆ ಸಂಬಂಧಿಸಿದುದಲ್ಲ! ಅದು ಹಾಗಿರಲಿ.

ಇತ್ತೀಚೆಗೆ ರಾಮೇಶ್ವರ ಠಾಕೂರ್ ಅವರು ನೂತನ ರಾಜ್ಯಪಾಲರಾಗಿ ಪ್ರಮಾಣವಚನ ಸ್ವೀಕರಿಸಿದರಲ್ಲ, ಆಗ ಭಾರತೀಯ ಜನತಾ ಪಕ್ಷದ ಧುರೀಣರು ಸಮಾರಂಭ



ಮುಗಿದ ತಕ್ಷಣ ಅಲ್ಲಿಂದ ಕಾಲ್ಕಿತ್ತರಲ್ಲ, ಅದು ಯಾಕೆ ಅಂತೀರಿ... ಜಾತ್ಯತೀತ ಜನತಾದಳದ ಧುರೀಣ ಎಚ್.ಡಿ. ದೇವೇಗೌಡರು ಕಾಂಗ್ರೆಸ್ ಧುರೀಣರಾದ ಮಲ್ಲಿಕಾರ್ಜುನ ಖರ್ಗೆ, ಧರ್ಮಸಿಂಗ್ ಅವರೊಡನೆ ನಗುಮುಖದ ಸಂಭಾಷಣೆಯಲ್ಲಿ ತೊಡಗಿದ್ದಕ್ಕಲ್ಲ, ಭಾಜಪ ಧುರೀಣರಿಗೆ ಅದರಲ್ಲಿ ಯಾವ ಲೋಪವೂ ಕಂಡುಬಂದಿಲ್ಲ! ಈ ದೇಶದ ಪ್ರಗತಿ ಕುರಿತು ಯಾರೊಡನೆ ಚರ್ಚಿಸಿದರೂ ಒಳ್ಳೆಯದೇ ಅಂತೆ! ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ಸೆರೆಮನೆಗೆ ತಳ್ಳಿದ ದೇವರಾಜ ಅರಸು ಅವರ ಮನೆಗೇ ಊಟಕ್ಕೆ ಹೋಗಿದ್ದನ್ನು ಶಿಕ್ಷಣ ಸಚಿವ ಶಂಕರಮೂರ್ತಿಯವರು ನೆನೆಪಿಸಿಕೊಂಡಿದ್ದಾರೆ.

ಹಾಗಾದರೆ ಸಮಾರಂಭದಿಂದ ತುರ್ತು ನಿರ್ಗಮನಕ್ಕೆ ಕಾರಣವೇನು?

'ತುರ್ತು ಕಾರಣದಿಂದಾಗಿ ಬಜೆಪಿ ಮಂತ್ರಿಗಳು ಹೋಗಿದ್ದಾರೆ' ಕುಮಾರಸ್ವಾಮಿಯವರ ಲೇವಡಿ ಮಾತು!

ಮಂತ್ರಿಗಳು ಯಾಕೆ ನಿಗದಿತ ವೇಳೆಯ ಒಳಗೆ ಆಸ್ತಿ ವಿವರ ಸಲ್ಲಿಸಿಲ್ಲ ಅಂದರೆ ಸಾರ್ವಜನಿಕ ಸೇವೆಯಲ್ಲಿ ಮಗ್ನರಾಗಿದ್ದರು ಎಂದು ವಕಾಲತ್ತು ವಹಿಸುವ ಯುವ ಮುಖ್ಯಮಂತ್ರಿ ಪ್ರಮಾಣವಚನ ಸಮಾರಂಭದಿಂದ ಭಾಜಪ ಮಂತ್ರಿಗಳು ಯಾಕೆ ತುರ್ತಾಗಿ ನಿರ್ಗಮಿಸಿದರು ಎಂದರೆ ಲೇವಡಿ ಮಾಡುತ್ತಾರೆ!

ಇದೆಲ್ಲದರ ಅರ್ಥ ಏನು?

* * * * * * * * * * *

ಇನ್ನೂ ಯುವಕ. ಮುಖ್ಯಮಂತ್ರಿಯಾದ ಹುರುಪು. ಭಾಜಪದಲ್ಲಿ ಕಿಂಚಿತ್ತು ದೋಷವೂ ಗೋಚರಿಸಿರಲಿಲ್ಲ!

ಆದರೆ ಜನರಿಗೆ?

ಭಾಜಪ ಅಂದರೆ ಕೋಮುವಾದಿ ಪಕ್ಷ. ಜಾತ್ಯತೀತ ಜನತಾದಳ ಹಾಗೂ ಭಾಜಪ ಮೈತ್ರಿ ಅಪವಿತ್ರ ಸಂಬಂಧ!

ಈ ಮಾತನ್ನು ಕೇಳಿ ಕೆರಳಿದರು ಯುವ ಮುಖ್ಯಮಂತ್ರಿ.

'ಜಾತ್ಯತೀತತೆ ಎಂದರೇನು?' ಗುಡುಗಿದರು.

ಪಾಪ ಅವರು ಯಾವುಯಾವುದೋ ಪುಸ್ತಕಗಳನ್ನು ತಡಕಿದರಂತೆ. ಸಂವಿಧಾನವನ್ನು ಪರಾಮರ್ಶಿಸಿದರಂತೆ. ಜಾತ್ಯತೀತತೆಗೆ ಅರ್ಥಾನೆ ಸಿಗಲಿಲ್ಲವಂತೆ!

ಏನು ಮಾಡಿದರು ಅವರು?

'ನನಗೆ ಜಾತ್ಯತೀತತೆ ಎಂದರೆ ಏನು ಅನ್ನುವುದೇ ಗೊತ್ತಿಲ್ಲ' ಅಂದರು, ಜಾತ್ಯತೀತ ದಳದ ಮುಖ್ಯಮಂತ್ರಿ!

ಕಾಲ ಉರುಳಿತು. ಅಧಿಕಾರ ಹಸ್ತಾಂತರ ದಿನ ಹತ್ತಿರ ಬರುತ್ತಿದ್ದಂತೆ ಸಂಬಂಧ ಹಳಿಸಿತು. ಆಗ ಗೋಚರಿಸಿತು ಅಪವಿತ್ರ ಮೈತ್ರಿಯ ದುಷ್ಪರಿಣಾಮ!

ಏನಾಗಿದೆ ಜಾತ್ಯತೀತ ದಳಕ್ಕೆ?

ಜೆಡಿಎಸ್‌ನ ಜಾತ್ಯತೀತ ಸಿದ್ಧಾಂತಕ್ಕೆ ಧಕ್ಕೆಯಾಗಿದೆ!

(ಅಂದರೆ ಜಾತ್ಯತೀತ ಅನ್ನುವ ಪದದ ಅರ್ಥದ ಅರಿವಾಗಿದೆ ಮುಖ್ಯಮಂತ್ರಿಗಳಿಗೆ!)

ಅಲ್ಪಸಂಖ್ಯಾತರು ಪಕ್ಷದಿಂದ ದೂರವಾಗುತ್ತಿದ್ದಾರೆ!

(ಅಂದರೆ ಓಟಗಾಗಿ ಜಾತ್ಯತೀತತೆ! ಅದು ಇಲ್ಲದಿದ್ದರೆ ಇದೂ ಇಲ್ಲ!)

ಕುಟುಂಬದ ಘನತೆಗೆ ಕುಂದು ಉಂಟಾಗಿದೆ!

(ದೇಶದ ಘನತೆಗೆ ಏನಾದರೂ ಚಿಂತಿಲ್ಲ! ಮನೆಯ ಮರ್ಯಾದೆ ಹಾಳಾಗಬಾರದು!

ಕರ್ನಾಟಕದ ರಾಜಕೀಯ ಅಂದರೆ ದೇವೇಗೌಡರ ಮನೆತನದ ರಾಜಕೀಯ ತಾನೆ!

ಅಣಕ

ಎಚ್.ಎಲ್. ಕೇಶವಮೂರ್ತಿ

ಇಂತಹ ಜ್ಞಾನೋದಯದ ಅಣಿಮುತ್ತುಗಳು ಮುಖ್ಯಮಂತ್ರಿಯವರ ಬಾಯಿಂದ ಹೊರಬೀಳಲು ಏನು ಅರ್ಥ?

ಇದೆಲ್ಲದರ ಅರ್ಥ ಒಂದೇ-ಯಡಿಯೂರಪ್ಪ ಮುಖ್ಯಮಂತ್ರಿ ಆಗುವುದಿಲ್ಲ!

ಈಗೇನು ಮಾಡುತ್ತಿದ್ದಾರೆ ಯಡ್ಡಿ?

ಜ್ಯೋತಿಷಿಗಳ ಮರೆ ಹೋಗಿದ್ದಾರೆ. ಹೋಮ ಹವನ ಯಜ್ಞಗಳು ಸಾಂಗೋಪಾಂಗವಾಗಿ ನೆರವೇರಿಸುತ್ತಿದ್ದಾರೆ.

ಇದು ಅಂತರಂಗದ ವಿಚಾರ ಆಯಿತು. ಬಹಿರಂಗವಾಗಿ?

ಅಕ್ಟೋಬರ್ ಎರಡರವರೆವಿಗೆ ಅಧಿಕಾರ ಹಸ್ತಾಂತರದ ಬಗ್ಗೆ ಮೌನ ವಹಿಸಲು ನಿರ್ಧರಿಸಿದ್ದಾರೆ.

ಆನಂತರ?

ಶಾಶ್ವತ ಮೌನ!

ಹೌದು, ಭಾಜಪ ಶಾಸಕರು ಏನು ಮಾಡುತ್ತಿದ್ದಾರೆ?

ಚೀನಾ ಪ್ರವಾಸದ ಮೋಜಿನಲ್ಲಿದ್ದಾರೆ!

ಅಧ್ಯಯನ?

ಅದನ್ನೂ ಮಾಡುತ್ತಾರೆ. ಅಧ್ಯಯನ ಫಲಶ್ರುತಿ ಕುಮಾರಸ್ವಾಮಿಯವರ ಸರ್ಕಾರ ಅವರಿಗೆ ಒದಗಿಸಿರಬಹುದಾದ ಸೌಲಭ್ಯಗಳನ್ನು ಅವಲಂಬಿಸಿದೆ! ಹೇಗಿದ್ದರೂ ಈ ಸಮ್ಮಿಶ್ರ ಸರ್ಕಾರ ರೂಪುಗೊಂಡಿದ್ದೇ ಸ್ವದೇಶೀ ಸಂಚಾರದಿಂದ ತಾನೆ, ಈಗ ವಿದೇಶೀ ಸಂಚಾರದಿಂದ ಹೊಸ ಸರ್ಕಾರ ರೂಪುಗೊಳ್ಳುತ್ತೆ!

ಹಳ್ಳಿಗಳಲ್ಲಿ ಯಾರು ಬೇಕಾದರೂ ನೀತಿವಂತ ಬದುಕನ್ನು ನಡೆಸಬಹುದು - ಆಸ್ಕರ್ ವೈಲ್ಡ್

"ಮತ್ತೆ ಭಾಳ ದೃಢವಾಗಿ ಹೇಳಿಕತ್ತಿದ್ನ ಎಡೂರಪ್ಪ ಶರಾಪು ನಿಲ್ಸಿದ್ವಿವಿ ಬ್ಯಾಟ್ರಿ ನಿಲ್ಸಿದ್ವಿವಿ ಅಂತ" ಎಂದ ಪೀರ.

"ಲಾಟ್ರಿ, ಶರಾಪು ಈ ಕೈಬಿಟ್ಟಿಲ್ಲ ಎಡೂರಪ್ಪನಿಗೋದ್ರೆ ದ್ಯಾವೇಗೌಡ್ರ ಮಕ್ಕಳು ಮಾಡಿದ್ದೇನು ಅಂತ ಜನ ಕೇಳ್ತರೆ ಕಣೊ ಉಗ್ರಿ."

"ಅದ್ಸೆ ಅಲವೇನೊ, ದ್ಯಾವೇಗೌಡ ಕಾಂಗ್ರೆಸ್ ಮನೆ ಮ್ಯಾಲೆ ಕಲ್ಲುಸಿತಾಯಿರದು?"

"ಕಲ್ಲುಸಿಯದೇನು ಬೇಕಾಗಿಲ್ಲ ಕಣೊ ಉಗ್ರಿ, ಕಾಂಗ್ರೆಸಿನವು ಕರದೇಟಗೆ ಬತ್ತವೆ. ಹುವರ್ರಿಂದ ಬಾಳ ದಿನ ದೂರಯಿದ್ದು ಅಭ್ಯಾಸಿಲ್ಲ ಅವುಕೆ. ಅವು ಚಟುವಟಿಕೆ ಯಾಗಿರದು ಯರಡೇ ಸತಿ. ಒಂದು ಚುನಾವಣೆಲಿ ಓಡಾಡ್ತವೆ, ಅಮ್ಯಾಲೆ ಏನಾರ ಸಿಕ್ಕಿದ್ರೆ ಮೈಮಾಲೆ ನ್ಯದರಿಲ್ಲದಂಗೆ ತಿನ್ನುವಾಗ ಆಕ್ಟಿವಾಗಿರತವೆ."

"ನೀನೇಳದು ನಿಜ ಕಣೊ ವಾಟಿಸ್ಸೆ, ಆ ಬಡ್ಡೆತ್ತವು ಸರಿಯಾಗಿ ರಾಜಕಾರಣ ಮಾಡಿದ್ರೆ ಇದ್ಯಲ್ಲ ಸರಿಯಾಗಕ್ಕೆ ಏಟು ದಿನ ಬೇಕಾಗಿತ್ತೆ?" ಎಂದ ಉಗ್ರಿ.

"ಅವಂಗಿರದ್ಕೆ ಅಲವೆ ದ್ಯಾವೇಗೌಡ ಆಟ ಆಡ್ತಾಯಿರದು."

"ಹೋಗ್ಲಿ ದ್ಯಾವೇಗೌಡನ ಮರ್ಮೇನು ಅದ್ನಾರ ಹೇಳಿರ್ಲ?" ಎಂದ ಕಾಳಮಾವ.

"ಅವುನ ಮರ್ಮ ಏನು ಗೊತ್ತೆ ದ್ವಡಪ್ಪ?"

"ಹೇಳ್ಳ?"

"ಅವನು ಯಾವತ್ತೂ ಈ ಎಡೂರಪ್ಪನ್ನ ಮೆಚ್ಚದೋನಲ್ಲ ಅವುನಿಗೇನಾರ ಅಧಿಕಾರ ಕೊಟ್ರೆ ಇವುನ ಮಗನ ಇಪ್ಪತ್ತು ತಿಂಗಳ ಅಧಿಕಾರದಲ್ಲಾದ ಕ್ಯಲಸ ಮಾಸ್ಕೋಯ್ತವೆ. ಮುಂದೆ ಎಡೂರಪ್ಪ ಮುಖ್ಯಮಂತ್ರಿಯಾಗಿ ಚುನಾವಣೆಗೋಯ್ತನೆ. ಅವುರಿಂದೆ ದ್ಯಾವೇಗೌಡನ ಟೀಮು ಹೋಗಬೇಕು. ಇದು ನನ್ನ ಅಂದಾಜು. ದ್ಯಾವೇಗೌಡ ಈಗೊಂತರ ಹುತ್ತದಲ್ಲಿರೊ ಹಾವಿದ್ದಂಗೆ. ಅದ್ಯಂತ ಹಾವು, ಅದರ ವಿಷ ಏನು? ಏನು ಮಾಡ್ತದೆ ಅನ್ನದೆ ಗೊತ್ತಾಯ್ತಯಿಲ್ಲ" ಎಂದ ವಾಟಿಸ್ಸೆ.

"ಆ ಹುತ್ತ ಕಟ್ಟಿದೋರು ಯಾರೂ ಇಲ್ಲ, ಈ ಸಿಂಧ್ಯಾ, ವೈಜನಾಥ ಪಾಟೀಲ, ಸಿದ್ಧರಾಮಯ್ಯ, ಸುಬ್ಬಯ್ಯ, ಇಬ್ರಾಹಿಂ, ಪ್ರಕಾಶ್‌ಯಲ್ಲ ಸೇರಿ ಒಂದೊಂದು ಕ್ವಾಟೆ ಕಟ್ಟಿದ್ರು. ಈ ದ್ಯಾವೇಗೌಡ ಅದರಲ್ಲಿ ಮನಿಕಂಡು ಬುಸುಗುಡ್ತಾ ಅವುನೆ" ಎಂದ ಉಗ್ರಿ.

"ಏಟು ದಿನ ಬುಸುಗುಟ್ಯನ್ಲ? ಆಗ್ಲೆ ಪುರುಸಾಸು ನ್ಯಟ್ಟಗಾಗಿ ರಂಗದೆ" ಎಂದ ಪೀರ.

"ಇದ್ದೋಟ ದಿನವೆ ಆಗ್ಲಿ ಅಂತನವುನು."

" !?"

ದೇವರಿಗೇ ಭದ್ರತೆ ಕೊರತೆ!

ಛೇ ಹೀಗಾಗಬಾರದಿತ್ತು.

ದೇವೇಗೌಡರು ಅಂತ್ಯರಂಗನ ದರ್ಶನ ಮಾಡಿದರು.

ಅಲ್ಲಿಯ ಪೂಜಾರಿಗಳು ದಿಂಡಾದರು!

ಆದಿರಂಗನ ಗತಿ ನೋಡಿ.

ಅವನನ್ನು ನಂಬಿದ ಪೂಜಾರಿಗಳ ಹೊಟ್ಟೆಯ ಮೇಲೆ ಗೌಡರು ಹೊಡೆದರು. ಅದು ಹಾಳಾಗಲಿ ಅಂದರೆ ದೇವರ ಹುಂಡಿಗೇ ಯಾರೋ ಕನ್ನ ಹಾಕಿದ್ದಾರೆ!

ಯಾಕೋ ಏನೋ ಈ ಕಳ್ಳರಿಗೆ ದೇವಸ್ಥಾನಗಳೇ ತಮ್ಮ ಕೈಚಳಕ ತೋರಿಸಲು ಸೇಫ್ ಪ್ಲೇಸು ಅನ್ನಿಸುತ್ತೆ. ಮನೆಗಳಲ್ಲಾದರೆ ನಾಯಿಗಳ ಕಾಟ. ಸಾಲದ್ದಕ್ಕೆ ಒಂದುಚೂರು ಶಬ್ದ ಆದರೂ ಎದ್ದು ಕುಳಿತುಕೊಳ್ಳೋ ಮುದಿಯರ ಹಾವಳಿ. ದೇವಸ್ಥಾನಗಳಲ್ಲಾದರೆ ಇದು ಯಾವುದರ ತಾಪತ್ರಯವೂ ಇರೋಲ್ಲ. ಅದೂ ಅಲ್ಲದೆ ಮನೆಗಳಲ್ಲಾದರೆ ಒಳಗೆ ನುಗ್ಗಿದರೆ ಏನಾದರೂ ಐನಾತಿ ಕೊಳ್ಳೆ ಸಿಕ್ಕೇ ಸಿಗುತ್ತೆ ಅನ್ನುವ ಖಾತರಿ ಇರೋಲ್ಲ. ಲಾಕರ್ ಗೀಕರ್ ಅಂತ ಎಲ್ಲೆಲ್ಲೋ ಇಟ್ಟಿರ್ತಾರೆ. ಇಲ್ಲಿ ಆ ಸಮಸ್ಯೇನೇ ಇಲ್ಲ. ದೇವರ ಹುಂಡಿ ಇರುತ್ತೆ, ಒಡವೆ ಇದ್ದೇ ಇರ್ತವೆ ಅನ್ನೋ ಖಾತರಿ.

ಇಲ್ಲಿ ಏನಾಯಿತು ಅಂದರೆ ಶ್ರೀರಂಗಪಟ್ಟಣದ ರಂಗನಾಥಸ್ವಾಮಿ ಶೇಷಶಯನದ ಮೇಲೆ ಮಲಗೇ ಇದ್ದ. ವೈಕುಂಠದ್ವಾರ ಅಂತ ಇದೆ. ಅದನ್ನು ವರ್ಷಕ್ಕೆ ಒಮ್ಮೆ ಮಾತ್ರ ತೆಗೆದು ವೈಕುಂಠದರ್ಶನ ಮಾಡಿಸುತ್ತಾರೆ ಪೂಜಾರಿಗಳು. ಕಳ್ಳರು ಆ ವೈಕುಂಠದ್ವಾರದ ಮೂಲಕವೇ ಒಳಹೋದರಂತೆ. 'ವೈಕುಂಠ ದ್ವಾರ'ವನ್ನ 'ಕಳ್ಳರ ದ್ವಾರ' ಮಾಡಿದರಂತೆ! ದೇವರ ಹುಂಡಿ ದೋಚಿದರಂತೆ!

ಹೇಳಿಕೇಳಿ ಅದು ದೇವರ ಹುಂಡಿ. ಭಕ್ತರು ಹಾಕಿದ ಕಾಣಿಕೆ ಇರುವ ಹುಂಡಿ. ಅದನ್ನೇ ಕದ್ದಿದ್ದಾರೆ ಅಂದರೆ?

ಮುಗ್ಧರ ಶೋಷಣೆಯಿಂದ ಸಂಗ್ರಹಿಸಿದ್ದ ಹಣ ಅದು. ಕಳ್ಳರು ಅದನ್ನು ತೆಗೆದುಕೊಂಡಿದ್ದಾರೆ. ಅದೂ ಕಳ್ಳತನವೆ, ಇದೂ ಕಳ್ಳತನವೆ ಅನ್ನುವ ಪಾಷಂಡಿಗಳ ಮಾತು ಹಾಗಿರಲಿ.

ಈಗ ಪ್ರಶ್ನೆ-ದೇವರ ಒಡವೆ, ಹಣದ ಭದ್ರತೆ ಹೇಗೆ?

ದೇವರೇ ಇದ್ದಾನಲ್ಲ!

ಇದ್ದಾನೆ ನಿಜ. ಆದರೂ ಭದ್ರತೆ ಒದಗಿಸಬೇಕಲ್ಲ!

ದೇವರಿಗೆ ಒಡವೆ, ಹಣ ಒಂದನ್ನು ಹಾಕದೇ ಹೋದರೆ!


ಒಡವೇನೇ ಧರಿಸದ ದೇವಾನುದೇವತೆಗಳನ್ನು ಯಾವ ಮುಠ್ಠಾಳನೂ ಪೂಜಿಸುವುದಿಲ್ಲ. ಅಂದಮೇಲೆ ಒಡವೆ ಹಾಕಲೇಬೇಕು. ಹುಂಡಿಗೆ ಹಣ ಹಾಕಿದರೆ ಮನಸ್ಸಿಗೆ ಏನೋ ಒಂದು ರೀತಿಯ ತೃಪ್ತಿ. ಅಂದಮೇಲೆ ಅದೂ ಇರಬೇಕು.

ಮತ್ತೆ ಅಲ್ಲಿಗೇ ಬಂದಿತು-ದೇವರ ಭದ್ರತೆ ಹೇಗೆ?

ಅಂದಹಾಗೆ ಕಳ್ಳರನ್ನು ಪತ್ತೆಹಚ್ಚಲು ಶ್ವಾನದಳವನ್ನು ಕರೆದೊಯ್ಯಲಾಯಿತಂತೆ. ಅಲ್ಲ ದೇವಸ್ಥಾನದೊಳಕ್ಕೆ ನಾಯಿ ಹೋಯಿತು ಎಂದರೆ ಅಪವಿತ್ರ ಆಗಲ್ವಾ ಅಂದದಕ್ಕೆ ಯಾರೋ 'ಅದು ಬ್ರಾಹ್ಮಣ ನಾಯಿ ಇರಬೇಕು' ಅನ್ನೋದೆ... 'ಅಲ್ಲರೀ ಶೂದ್ರನಾಯಿ ಆದರೇನು ಮಾಡ್ತಾನ್ರಿ. ಹಾಳಾದವು ಎಲ್ಲಾ ಕಡೇನೂ ಮೂಸಿಮೂಸಿ ನೋಡ್ತಾವಲ್ರಿ, ಕಂಬ ಸಿಕ್ಕಿದ ಕಡೆ ಕಾಲು ಎತ್ತುತ್ತವಲ್ರಿ' ಅಂದದಕ್ಕೆ, ನಾಯಿಗಳು ಹೊರಕ್ಕೆ ಹೋದನಂತರ ದೇವಸ್ಥಾನದಲ್ಲಿ 'ಪುಣ್ಯ' ಮಾಡಿದ್ರಂತೆ... ಅಂದಹಾಗೆ ಆಯಿತು!


ಈ ನೆಲ, ಈ ಸಂಪತ್ತು

ಮರೆಯುವ ಮುನ್ನ



■ ಪಿ. ಲಂಕೇಶ್ ಜನವರಿ 1, 1989


ನಮ್ಮ ರಾಜಕಾರಣಿಗಳು ತಮ್ಮ ಕೆಲಸವನ್ನು ಸೀರಿಯಸ್ ಆಗಿ ತೆಗೆದುಕೊಳ್ಳುವುದಿಲ್ಲ. ಆದ್ದರಿಂದ ಅವರು ತಮ್ಮ ರಾಜ್ಯವನ್ನು ಪ್ರೀತಿಯಿಂದ ನೋಡುವುದಿಲ್ಲ; ಅಂದರೆ ವಿವರಗಳನ್ನು ಗಮನಿಸುವುದಿಲ್ಲ. ನನ್ನೆದುರು ಹಲವು ಪುಸ್ತಕಗಳಿವೆ. ಅವುಗಳಲ್ಲಿ ಒಂದರಲ್ಲಿ ಚೆನ್ನಗಿರಿ ತಾಲ್ಲೂಕಿನ ವರ್ಣನೆ ಇದೆ. ವರ್ಣನೆಗಳಲ್ಲಿ ಒಂದು ಸೂಳೆಕೆರೆಯ ವರ್ಣನೆ. ನಾನು ಈ ಕೆರೆಯನ್ನು ಸೂಳೆಗಾಗಿ ಕಟ್ಟಿಸಿದ ಕತೆ ಓದಲು ಕಾತರನಾಗಿದ್ದೆ. ಆದರೆ ಅದಕ್ಕೆ ಬದಲಾಗಿ ಬೇರೆ ವಿಷಯವಿತ್ತು. ಸಾವಿರದ ಇನ್ನೂರು ಚದುರ ಕಿಲೋಮೀಟರ್ ವಿಸ್ತೀರ್ಣದ ಚೆನ್ನಗಿರಿ ತಾಲ್ಲೂಕಿನ ಮಧ್ಯಭಾಗದಲ್ಲಿ



64 ಕಿ.ಮೀ. ಸುತ್ತಳತೆಯ ಬೃಹತ್ ಕೆರೆ ಇದು. ಏಳನೂರು ವರ್ಷದ ಹಿಂದೆ ಕಟ್ಟಿದ ಕೆರೆ; ಶಾಂತವ್ವೆ ಎಂಬ ವಿಕ್ರಮರಾಯನ ಮಗಳ ವ್ಯಭಿಚಾರದಿಂದ ಹುಟ್ಟಿದ ಕೆರೆ. ಎಲ್ಲಕ್ಕಿಂತ ಮುಖ್ಯವಾಗಿ, ಇಡೀ ದಕ್ಷಿಣ ಭಾರತದ ಎರಡು ಮಹಾನ್ ಕೆರೆಗಳಲ್ಲಿ ಒಂದು ಈ ಸೂಳೆಕೆರೆ-ಆಂಧ್ರಪ್ರದೇಶದ "ಕುಂಭಂ" ಕೆರೆ ಮತ್ತು ಸೂಳೆಕೆರೆ ಇವೆರಡೂ ಸರೋವರಗಳಂಥ ಕೆರೆಗಳು.

ಇನ್ನೊಂದು ತಾಲ್ಲೂಕು ಗುಂಡ್ಲುಪೇಟೆ. ಸೆರಗಿಗೆ ಬಂಡೀಪುರ ಅರಣ್ಯ, ಸ್ತನವಾಗಿ ಗೋಪಾಲಸ್ವಾಮಿ ಬೆಟ್ಟ (ಇದು ಐದು ಸಾವಿರ ಅಡಿ ಎತ್ತರ). ಈ ಬೆಟ್ಟದ ತಪ್ಪಲಲ್ಲಿ ಅಷ್ಟ ತೀರ್ಥಗಳು- ಅಂದರೆ ಎಂಟು ಪುಟ್ಟ ಸರೋವರಗಳು. ಆದರೆ ಗುಂಡ್ಲುಪೇಟೆ ಅತ್ಯಂತ ಬಡ ತಾಲ್ಲೂಕುಗಳಲ್ಲಿ ಒಂದು; ಒಣಗಿದ ನೆಲದ, ಕಂದಿನ ಮುಖದ ಜನರ ತಾಲ್ಲೂಕು ಇದು. ಇದು ಬಡ ತಾಲ್ಲೂಕೆಂಬುದು ನಮ್ಮ ದುಷ್ಟ ರಾಜಕಾರಣಿಗಳ ದೃಷ್ಟಿಯಲ್ಲಿ ಮಾತ್ರ. ಯಾಕೆಂದರೆ ಕರ್ನಾಟಕದ ಅನೇಕ ಬೆಟ್ಟಗುಡ್ಡಗಳ ತಾಲ್ಲೂಕಿನಂತೆ ಗುಂಡ್ಲುಪೇಟೆ ಕೂಡ ಖನಿಜಗಳ, ಅಮೂಲ್ಯ ಕಲ್ಲುಗಳ ಕಣಜ. ಸುಮಾರು ಇನ್ನೂರು ಕೋಟಿ ವರ್ಷಗಳಿಂದ ಅರ್ಥ ಪಡೆದುಕೊಂಡ ಡಜನ್‌ಗಟ್ಟಲೆ ಜಾತಿಯ ಶಿಲೆಗಳು ಇಲ್ಲಿವೆ. ಅಮೃತಶಿಲೆ, ಮ್ಯಾಂಗನೀಸ್ ಕ್ವಾರ್ಟ್ಸ್‌ಗಳೆಲ್ಲ ಇಲ್ಲಿವೆ. ಇದೊಂದು ಶ್ರೀಮಂತ ತಾಲ್ಲೂಕು, ನೋಡುವ ಕಣ್ಣುಗಳಿದ್ದರೆ.

ಸಲಾಂ ಮೀರಾ ನಾಯರ್



ಎಲ್ಲರೂ 'ಸಲಾಂ ಬಾಂಬೆ' ಕುರಿತು ಬರೆದಿರುವುದರಿಂದ ಇಲ್ಲಿ ನಾನು ಈ ಚಲನಚಿತ್ರದ ಬಗೆಗಿನ ನಿಮ್ಮ ಗ್ರಹಿಕೆಯನ್ನು ಮಾತ್ರ ಕೆದಕುತ್ತೇನೆ. ಕರ್ನಾಟಕದಿಂದ ತಪ್ಪಿಸಿಕೊಂಡು ಬಂದ ಪುಟ್ಟ ಪಡ್ಡೆ ಹುಡುಗ. ಮುಂಬೈನ ಬೀದಿಯಲ್ಲಿ ತನ್ನಂಥವರೊಂದಿಗೆ ಈತನ ಜೀವನ. ತನ್ನನ್ನು ಬಲ್ಲ ಒಬ್ಬನೇ ಗೆಳೆಯ, ಆತ ಬಡತನದಿಂದ ಹುಚ್ಚೆದ್ದು ಸಾಯುತ್ತಾನೆ. ತನ್ನ ಕೆಲಸ ಹೋಗುತ್ತದೆ. ವರ್ಷಗಟ್ಟಲೆ ದುಡಿದ ಹಣವನ್ನು ಯಾರೋ ಲಪಟಾಯಿಸಿದ್ದಾರೆ. ಅವತ್ತು ರಾತ್ರಿ ದುಡಿದ ಇಪ್ಪತ್ತು ರೂಪಾಯಿ. ತನ್ನ ಪ್ರೀತಿಯ ಹುಡುಗಿ ಹೋಗುತ್ತಾಳೆ. ಇಲ್ಲಿ ನೆಮ್ಮದಿ, ಪ್ರೀತಿ, ನೆಲೆ ಇಲ್ಲದಾಗ ಪೊಲೀಸರು ಪ್ರಜಾಪ್ರಭುತ್ವದ ಕೊನೆಯ ಹರಣ ಮಾಡುತ್ತಾರೆ- ಆತನ ಸ್ವಾತಂತ್ರ್ಯದ ಹರಣ. ಮತ್ತೆ ಸ್ವಾತಂತ್ರ್ಯ ಪಡೆದರೂ ಅದೇ ಅಸಹಾಯಕತೆ, ನೋವು.

ಅದ್ಧೂರಿಯ ಗಣೇಶನ ಉತ್ಸವ ನಡೆಯುತ್ತಿದ್ದರೆ, ಪಾಪ ಮತ್ತು ಪುಣ್ಯ ಭೀಕರ ಸದ್ದಿನಲ್ಲಿ ಒಂದಾಗುತ್ತಿದ್ದರೆ, ಈ ಪುಟ್ಟ ಹುಡುಗ ಇನ್ನೊಬ್ಬ ತಬ್ಬಲಿ ಹೆಂಗಸಿನ ಕೈ ಹಿಡಿದು ಗುರಿ ಇಲ್ಲದೆ ನಡೆಯುತ್ತಿದ್ದಾನೆ. ಆಕೆ ಕೂಡ ಇನಿಯನ ಪ್ರೀತಿ, ಮಗುವಿನ ಪ್ರೇಮ, ಸೂರಿನ ನೆರಳು ಕಳೆದುಕೊಂಡಿದ್ದಾಳೆ.

ಮಕ್ಕಳ ದೃಷ್ಟಿಯಲ್ಲಿ, ವೇಶ್ಯೆಯರ ದೃಷ್ಟಿಯಲ್ಲಿ 'ಜೀವನ'ವಾದ ಇದರಲ್ಲಿ ರೋಗ, ಹುಚ್ಚುಗಳೆಲ್ಲ ಇವೆ; ಇವು ಇಲ್ಲಿ ಉಳಿಯುವ ಹಕ್ಕನ್ನು ಕೂಡ ಪಡೆದಿಲ್ಲ. ಆದರೆ ನಮ್ಮ ಸರ್ಕಾರಗಳು ಎಷ್ಟು ಭೀಕರವೆಂದರೆ, ಇದನ್ನು ಸರಿಪಡಿಸುವ ಆರೋಗ್ಯವನ್ನು ಹೊಂದಿಲ್ಲ. ಭಾರತದ ದಾರಿದ್ರ್ಯ ನೂರಾರು ಚಲನಚಿತ್ರಗಳನ್ನು, ಕಾದಂಬರಿಗಳನ್ನು ತನ್ನ ಹೊಟ್ಟೆಯಲ್ಲಿ ಇಟ್ಟುಕೊಂಡಿದೆ; ಆದರೆ ಒಂದೇ ಒಂದು ಪರಿಹಾರವನ್ನು ಇಟ್ಟುಕೊಂಡಿಲ್ಲ.



'ರೆಕ್ಸ್' ಹೊರಗೆ

ಚಿತ್ರ ನೋಡಿ ದಂಗಾಗಿ ಹೊರಗೆ ಬಂದಾಗ ಕಣ್ಣುಜ್ಜಿಕೊಂಡು ನೋಡಿದೆವು. ಅಲ್ಲಿ 'ಸಲಾಂ ಬಾಂಬೆ' ಚಿತ್ರದ ಪುಟ್ಟ ಹುಡುಗ ನಿಂತಿದ್ದ. ಈತನ ಬಗ್ಗೆ ಪತ್ರಿಕೆಗಳಲ್ಲಿ ಓದಿದ್ದೀರಿ. ಇವನು ಕರ್ನಾಟಕದ ಹುಡುಗ. ಇವನನ್ನು ಮೀರಾ ನಾಯರ್ ಮುಂಬೈನಲ್ಲಿ ಗುರುತಿಸಿ ಚಿತ್ರದಲ್ಲಿ ಬಳಸಿಕೊಂಡಳು; ಈತನ ಮುಖದಲ್ಲಿ ವೈವಿಧ್ಯಮಯ ಭಾವನೆ ಹೊರಡುವಂತೆ ಮಾಡಿದಳು. ಬೆಂಗಳೂರಿನ ಕನಕಪುರ ರಸ್ತೆಯಲ್ಲಿರುವ ಈತ ತನ್ನ 'ಹೀರೋ'ಯಿಸಂನ್ನು ಅನುಭವಿಸಲು ಚಿತ್ರ ನಡೆಯುವಲ್ಲಿಗೆ ಬಂದಿದ್ದ; ನಿಂತು ವಿಚಾರಿಸಿದೆವು. ಮೀರಾ ಈತನಿಗೆ ಹಣ, ಮನೆ ಕೊಟ್ಟಿದ್ದಾಳಂತೆ, ಆದರೆ ಈತ ಚಿತ್ರದ ಹುಡುಗನಂತೆಯೇ ನಿಂತಿದ್ದಾನೆ. ಅದೆಲ್ಲ ಇರಲಿ. 'ಸಲಾಂ'ಬಾಂಬೆ' ಇನ್ನು ಕೆಲವೇ ವಾರಗಳಲ್ಲಿ ಹೋಗುತ್ತದೆ. ಈತ ಚಿತ್ರಮಂದಿರದ ಹೊರಗೆ ನಿಂತರೂ ಪೂರ್ತಿ ಅನಾಮಿಕನಾಗುತ್ತಾನೆ. ಕೆಲವು ತಿಂಗಳ ನವಿರೇಳಿಸುವ ಜೀವನ ತಣ್ಣಗಾಗಿ ಬೇಸರ, ನಿರರ್ಥಕತೆ ತಲೆದೋರುತ್ತವೆ. ಈತ ಏನು ಮಾಡುತ್ತಾನೆ?

ವೈಭವ ಜೀವನದಷ್ಟೇ ಕ್ಷಣಿಕವೆನ್ನುವುದು ಈತನಿಗೆ ಹೇಗೆ ಗೊತ್ತಾಗಬೇಕು. ಜೀವನವೆಂಬ ಹೋಲ್‌ಸೇಲ್ ವಿಷಯವನ್ನು ನಿಭಾಯಿಸುವ ಕಲೆ ಗೊತ್ತಿಲ್ಲದಿದ್ದರೆ ಚಿಲ್ಲರೆಚಿಲ್ಲರೆಯಾಗಿ ಹಾಳಾಗುತ್ತದೆ.

ಹಿಂದೂಗಳು ಯಾರು?

ಕಣ್ಣುಗಳೇ ಕಾಣಿಸದಿರುವ, ಹೃದಯಗಳೇ ಸ್ಪಂದಿಸದಿರುವ ಜನ. ಕೇಳುವ ಆ ಸಣ್ಣ ಬಡವರ ಗುಂಪಿಗೆ ಏನೆನ್ನಿಸಬಹುದು ಎಂಬ ಪರಿವೆಯೂ ಇವರಿಗಿಲ್ಲ. 'ಹಿಂದೂಸ್ತಾನ್ ಹಮಾರಾ' ಎಂದು ಕೂಗುತ್ತಿದ್ದಾರೆ; ಗೋಡೆಗಳ ಮೇಲೆಲ್ಲ ಮುಸ್ಲಿಮರನ್ನು ಬೆಚ್ಚಬೀಳಿಸುವಂಥ ವಾಕ್ಯಗಳು. ನನಗೆ ಕೂಗುತ್ತಿರುವ ಹುಡುಗರ ಬಗ್ಗೆ ಕೆಂಡದಂಥ ಕೋಪ ಬರುವುದಿಲ್ಲ. ನನ್ನ ಕೋಪದಲ್ಲಿ ಕರುಣೆ ಕೂಡ ಇದೆ. ಅಮಾಯಕ ಹುಡುಗರು; ದುಷ್ಟ ಬೊಬ್ಬೆಗೆ ಶರಣಾದ ತರುಣರು. ಇಂಥವರನ್ನು ಈಚೆಗೆ ಅನೇಕ ಹಳ್ಳಿಗಳಲ್ಲಿ ನೋಡಿದ್ದೇನೆ; ತಪ್ಪು ದಾರಿಯಲ್ಲಿ ನಿಂತು ಕೂಗುವವರನ್ನು ನೋಡಿದ್ದೇನೆ. ನಾನು ಕೂಡ ಹಿಂದೂ ಅಂದುಕೊಂಡಿದ್ದೇನೆ; ನನ್ನ ಹಿಂದೂತ್ವ ಪ್ರೀತಿ, ಕರುಣೆ, ನಿಷ್ಠುರ ಕ್ರಿಯೆಗಳ ಮೂಲಕ ನನ್ನನ್ನು ಬೆಳೆಸಬೇಕೆಂದು ಆಶೆಪಡುತ್ತೇನೆ. ಛಿದ್ರಛಿದ್ರಗೊಂಡ ಭಾರತ, ಒಗ್ಗಟ್ಟನ್ನರಿಯದ ಭಾರತ ಸೋಲನ್ನಪ್ಪಿತು; ಇವತ್ತು ನಮ್ಮ ಜನತೆಯ ಮಾನಸಿಕ, ದೈಹಿಕ ಒಗ್ಗಟ್ಟನ್ನು ಮುರಿಯುತ್ತಿರುವುದು ಜಾತೀಯತೆ, ದ್ವೇಷವನ್ನು ಸಾರುವ ನೀಚ ಸಿದ್ಧಾಂತಗಳು. ಇಲ್ಲಿ ಹೆಮ್ಮೆಯಿಂದ ಹೇಳಿಕೊಳ್ಳುವಂಥ ಅಂಶಗಳು ವಿರಳವಾಗುತ್ತಿವೆ; ಹಿಂದೂಗಳಲ್ಲಿ ಪುರೋಹಿತರ ದಬ್ಬಾಳಿಕೆಯಿಲ್ಲ, ಅಸ್ಪೃಶ್ಯತೆ ಇಲ್ಲ, ವರ್ಣಬೇಧ, ಆಶ್ರಮಬೇಧ ಇಲ್ಲ, ಇಬ್ಬಂದಿತನವಿಲ್ಲ... ಎಂದು ಧೈರ್ಯವಾಗಿ ಹೇಳಲಾಗುತ್ತಿಲ್ಲ. ಅವೆಲ್ಲ ಇವೆ. ಆದ್ದರಿಂದಲೇ ಕೊನೆಗೆ ಬ್ರಾಹ್ಮಣರು ಮಾತ್ರ ಹಿಂದೂಗಳಾಗಿ ಮಿಕ್ಕವರೆಲ್ಲ ಮಾನವ ಕುಲಕ್ಕೆ ಸೇರುವ ಪರಿಸ್ಥಿತಿ ಉಂಟಾಗುತ್ತದೆ. ಆದ್ದರಿಂದ ಮೊನ್ನೆ ಆರೆಸೆಸ್‌ಗಳು ನಮ್ಮ ಕಚೇರಿಗೆ ಬಂದು ಹೆಡಗೇವಾರ್ ಜನ್ಮೋತ್ಸವಕ್ಕೆ ಪ್ರಚಾರ ಕೊಡಬೇಕೆಂದು ಕೇಳಿದಾಗ ಪ್ರಶ್ನಿಸಿದೆ, "ತಮ್ಮ ನಂಬಿಕೆ ಏನು?"



"ಭಾರತವನ್ನು ಪ್ರೀತಿಸುವವರೆಲ್ಲ ಹಿಂದೂಗಳು."

"ಅಕಸ್ಮಾತ್ ನಾನು ಪ್ರೀತಿಸದಿದ್ದರೆ?"

ಅವರು ತಬ್ಬಿಬ್ಬಾದರು. ಅವರ ಪ್ರೀತಿ, ನಿಷ್ಠೆಯ ಮಾತೆಲ್ಲ ಮುಸ್ಲಿಮರು, ಕ್ರಿಶ್ಚಿಯನ್ನರಿಗೆ ಅನ್ವಯಿಸುತ್ತದೆಂದು ಅವರು ತಿಳಿದಿದ್ದರು.

ನಾನು ಮುಂದುವರಿಸಿ ಹೇಳಿದೆ, "ಕ್ಷಣಕಾಲ ಜಾತಿಯ ಯೋಚನೆ ಬಿಡಿ. ಸುಮ್ಮನೇ ಯೋಚಿಸಿ. ನಮಗೆಲ್ಲ ಗೊತ್ತಿದೆ. ಈ ನಮ್ಮ ದೇಶ ರಿಪೇರಿಯ ಹಂತವನ್ನೂ ಮೀರಿ ಹೋಗುತ್ತಿದೆ. ಇಲ್ಲಿ ಬ್ರಾಹ್ಮಣರು, ಲಿಂಗಾಯತರು ತಮ್ಮ ಜಾತಿ ಸಮ್ಮೇಳನ ನಡೆಸುವ ಹಂತ ತಲುಪಿದ್ದಾರೆ; ದೇಶದ ಸಂಪತ್ತಿನ ಮುಕ್ಕಾಲು ಭಾಗ ಮುಕ್ಕುವವರು ಒಗ್ಗಟ್ಟಾಗಿ ಇನ್ನಷ್ಟು ಮುಕ್ಕುವ ತರಾತುರಿಯಲ್ಲಿದ್ದಾರೆ. ಇಲ್ಲಿ ಅಸ್ಪೃಶ್ಯತೆ ಜನರಿಗೆ ಆಘಾತವನ್ನುಂಟು ಮಾಡದಿರುವ ಹಂತವನ್ನು ಜನ ತಲುಪುತ್ತಿದ್ದಾರೆ. ಸತೀ ಸಹಗಮನ, ಯಜ್ಞಯಾಗಾದಿಗಳೆಲ್ಲ ಸಾಂಗವಾಗಿ ನಡೆಯುತ್ತಿವೆ. ಇದರ ನಡುವೆ ತಬ್ಬಲಿಗಳಾದ ಜನ ಆರ್ಥಿಕವಾಗಿ ಬಸವಳಿದಿದ್ದಾರೆ, ಆತ್ಮಗೌರವ ಕಳೆದುಕೊಳ್ಳುವ ಅಪಾಯದಲ್ಲಿದ್ದಾರೆ. ಇವನ್ನೆಲ್ಲ ನೋಡಿ ಈ ದೇಶವನ್ನು ಪ್ರೀತಿಸಲಾಗದೆ ಇವನ್ನೆಲ್ಲ ಸರಿಪಡಿಸುವ ಚಿಂತೆಯಲ್ಲಿರುವ ನನ್ನಂಥವರೂ ಈ ದೇಶದಲ್ಲಿದ್ದಾರೆ. ಹಾಗೆಯೇ ದೇಶಪ್ರೇಮದ ಬೊಗಳೆ ಬಿಡುತ್ತಾ ವಿದೇಶಕ್ಕೆ ಹೋಗಿ ನೆಲೆಸುವ ಅವಕಾಶ ಸಿಕ್ಕರೆ ಹಿಗ್ಗಿ ಹಾರಾಡುವ ಜನರೂ ಇದ್ದಾರೆ. ಜನರನ್ನು ಶೋಷಿಸುತ್ತಲೇ ಜನರನ್ನು ಹಾದಿತಪ್ಪಿಸಿ ನಾಯಕರಾಗುವ ಜನರೂ ಇದ್ದಾರೆ. ಈ ನಮ್ಮ ದೇಶದ ಬಗ್ಗೆ ತಾತ್ಸಾರ, ಪ್ರೇಮ, ದ್ವೇಷ, ಅರೆಬರೆ ಪ್ರೇಮ, ಕೋಪ ಎಲ್ಲವನ್ನೂ ಇಟ್ಟುಕೊಂಡವರು ಇಲ್ಲಿದ್ದಾರೆ. ಇದು ಸಹಜ ಕೂಡ. ನಿಮ್ಮ ದೇಶಪ್ರೇಮ, ಧರ್ಮ ಪ್ರೇಮದ ಮಾತೆಲ್ಲ ಹೇಡಿತನದಿಂದ, ಸಣ್ಣತನದಿಂದ ಬಂದದ್ದು..."

ಗ್ರಾಮೀಣ ಬದುಕಿನ ಸರಳತೆ ಮತ್ತು ಅಲ್ಲಿನ ಸಂಭ್ರಮವನ್ನು ಚಿತ್ರಿಸದ ಒಬ್ಬನೇ ಒಬ್ಬ ಬರಹಗಾರ ಇರಲಿಕ್ಕಿಲ್ಲ - ಸ್ಯಾಮ್ಯುಯಲ್ ಜಾನ್ಸನ್

ಅಕ್ಟೋಬರ್ 3 + ದೇವೇಗೌಡ = ?

ಎಚ್. ಕಿ. ಭಾಗ್ಯಕುಮಾರ್, ಬೆಂಗಳೂರು
ಕಾನೂನು ರೀತ್ಯವು ಗಂಡಿಗಿಂತ ಹೆಣ್ಣಿಗೆ ಮದುವೆ ವಯಸ್ಸು ಮೂರುವರ್ಷ ಮುಂಚೆ ಏಕೆ?
◆ ಅದು 'ಮೆಚೂರಿಟಿ' ಪ್ರಶ್ನೆ ಗೊತ್ತಾ?

ಹರಳಹಳ್ಳಿ ಪುಟ್ಟರಾಜು, ದೊಡ್ಡಬ್ಯಾಡರಹಳ್ಳಿ
ನಿಮಗೆ ತುಂಬಾ ದುಃಖವಾದಾಗ ನೆನಪಾಗುವ ವ್ಯಕ್ತಿ ಯಾರು?
◆ ಲಂಕೇಶ್ ಮೇಷ್ಟ್ರು.

ಎಸ್.ಶಶಿಧರ, ದಾವಣಗೆರೆ
ಎಲ್‌ಟಿಟಿಗೂ, ಶ್ರೀಲಂಕಾ ಸರ್ಕಾರಕ್ಕೂ, ಸುಗುಣೇಂದ್ರ ತೀರ್ಥಸ್ವಾಮಿಗೂ ಎತ್ತಣಿಂದೆತ್ತ ಸಂಬಂಧ?
◆ ಚೆಡ್ಡಿ ಪತ್ರಕರ್ತರೆಂಬ ಧೂರ್ತ ಧೂತರ ಮೂಲಕ.

ಕೆ.ವಿ.ರಾಘವೇಂದ್ರ, ಮೈಸೂರು
ಯೋಚನೆಗೂ, ಕಲ್ಪನೆಗೂ ಇರುವ ವ್ಯತ್ಯಾಸ?
◆ ಕಡ್ಡಾಯ ತೆರಿಗೆಗೂ. ಪುಕ್ಕಟೆ ಮನರಂಜನೆಗೂ ಇರುವಷ್ಟೇ ವ್ಯತ್ಯಾಸ.

ಗಾನಾ ಸುಮಾ, ಪಟ್ಟಸೋಮನಹಳ್ಳಿ
ಗದ್ದುಗೆ ಎಂಬ ಕನಸಿನ ಗಂಟು ಯಡ್ಡಿಗೆ ಭಂಟನಾಗುವುದೋ? ನೆಂಟನಾಗುವುದೋ? ಇಲ್ಲಾ ಕಂಟಕನಾಗುವುದೋ?
◆ ಸಿಕ್ಕಿದರೆ ತಾನೆ ಅಂಟ್ವಾಳಕಾಯಿ.

ಎ.ಕೆ. ಪಟ್ಟಾಭಿ, ಬೆಂಗಳೂರು
ಬೆಂಗಳೂರು ನಗರದ ಗಲ್ಲಿಗಲ್ಲಿಗಳಲ್ಲೂ ಮುಖ್ಯಮಂತ್ರಿಗಳು ವಾಸ್ತವ್ಯ ಹೂಡಿದಲ್ಲಿ ನಗರಮಾಲಿನ್ಯ, ನೈರ್ಮಲ್ಯ ಆಗಬಹುದಲ್ಲವೇ?
◆ ನಗರದ ಬಡವರ ಮೇಲೆ ನಿಮಗ್ಯಾಕೆ ಇಷ್ಟು ದ್ವೇಷ.

ಕಣ್ಣಾ ಮುಚ್ಚಾಲೆ

ಚೆ

ನಾಗೇಶ್, ಕಲ್ಲಗೋಪಳ್ಳಿ
ಚಡ್ಡಿ ಯಡ್ಡಿಗೂ ನಕಲಿ ಜಾತ್ಯತೀತ ದೇವುಗೂ ಇರುವ ವ್ಯತ್ಯಾಸ?
◆ ಒರಿಜಿನಲ್‌ಗೂ. ಜೆರಾಕ್ಸ್ ಕಾಪಿಗೂ ಇರುವಷ್ಟೇ ವ್ಯತ್ಯಾಸ.

ಬಸವರಾಜ್ ಬೆಸ್ತರ್, ಗುಲ್ಬರ್ಗಾ
ಅಕ್ಟೋಬರ್ ಒಂದು ಯಡ್ಡಿ ಜನನ, ಅಕ್ಟೋಬರ್ ಎರಡು ಗಾಂಧಿ ಜನನ, ಅಕ್ಟೋಬರ್ ಮೂರು.....?
◆ ಚೆಡ್ಡಿ ಕನಸುಗಳ ಮರಣ!

ಪಿ.ಎನ್. ಶ್ರೀವತ್ಸ, ಬೆಂಗಳೂರು
ರಾಜ್ಯದಲ್ಲಿ ಬಹುಜನ ಸಮಾಜ ಪಕ್ಷಕ್ಕೆ ಬ್ರಾಹ್ಮಣರಲಗ್ಗೆ?
◆ ಈ ವಾರ ಯಾಹೂರವರು 'ಥೂತ್ತೇರಿ'ಯಲ್ಲಿ ಏನೆಂದು ಉತ್ತರ ಕೊಟ್ಟಿದ್ದಾರೆ. ನೋಡಿ.

ಕಾಳೀಹುಂಡಿ ಶಿವಕುಮಾರ್, ಮೈಸೂರು
ಪ್ರೀತಿ ಮಾಡುವಾಗ ಸಿಗುವಷ್ಟು ಆನಂದ, ನಂತರ ಇರುವುದಿಲ್ಲ ಏಕೆ?
◆ ದಣಿಸುವ ಕೆಲಸಗಳೇ ಹಾಗೆ.

ಎಂ. ನಿಸರ್ಗ, ದಾವಣಗೆರೆ
ಹೆಣ್ಣಿನ ಕಡೆಯಿಂದ ಇನ್ನೂ ಒಪ್ಪಿಗೆನೇ ಇಲ್ಲದಿರುವಾಗ ಯಡ್ಡಿ ಮಾತ್ರ ಮದುವೆ ಪುಸ್ಥ ಅಂತೆಲ್ಲಾ ಸಂಭ್ರಮಿಸುತ್ತಿದ್ದಾರಲ್ಲ?
◆ ಪಾಪ ಮುದಿಯ. ಅವೆಲ್ಲ ತನಗೆ ಸಿಗುತ್ತೆ, ತನ್ನ ಕೈಯಿಂದ ಆಗುತ್ತೆ ಎಂದೆಲ್ಲಾ ಭ್ರಮಿಸುತ್ತಿದ್ದಾನೆ ಬಿಡಿ.

ರಾಮು. ಕೆ.ಎಸ್., ತೀರ್ಥಹಳ್ಳಿ
'ಅವ್ವ' ಸಿನಿಮಾಕ್ಕೆ ಎಂ.ಪಿ.ಪ್ರಕಾಶ್ ಬದಲು ದೇವೇಗೌಡ್ರನ್ನ ಹಾಕ್ಕೊಂಡಿದ್ರೆ?
◆ ಆಗ '*action*' ನಂತರ '*cut*' ಅನ್ನುತ್ತಿದ್ದದ್ದು ಅವ್ವಗೌರಮ್ಮ.

ಬಿ. ಎಸ್. ನಾರಾಯಣಸ್ವಾಮಿ, ಬೋಧನ ಹೊಸಹಳ್ಳಿ
ನಾವು ಸುಮ್ಮನೆ ಇದ್ದರೂ ನಮ್ಮನ್ನು ಪ್ರೀತಿ ಸುಮ್ಮನೆ ಇರಲು ಬಿಡುವುದಿಲ್ಲವಲ್ಲ?
◆ ಚಂದಿರ ಸುಮ್ಮನಿರುವಾಗಲೂ ಬೆಳಕು ಚೆಲ್ಲುತ್ತಾನೆ. ಹಾಗೇನೇ ಅದೂ ಕೂಡ!

ಡಿ.ಎಲ್. ನಾಗರಾಜ್, ಹರಪನಹಳ್ಳಿ
ಅಧಿಕಾರದಲ್ಲಿದ್ದಾಗ ಯೋಜನೆ ರೂಪಿಸಿ, ಮಾಜಿಯಾದಾಗ ವಿರೋಧಿಸುವುದು ಯಾಕೆ?
◆ ಅದನ್ನೇ ರಾಜಕೀಯ ಅಂತ ಕರೆಯೋದು.

ಬಹುಮಾನಿತ ಪ್ರಶ್ನೆ

ಇಂದಿರಾ ಶ್ರೀಧರ್, ದಾವಣಗೆರೆ
ಅಕ್ಟೋಬರ್ 3+ ದೇವೇಗೌಡ=?
◆ ಚೆಡ್ಡಿಗಳ ಪಾಲಿಗೆ ಸೆಪ್ಟೆಂಬರ್ 11.

ಮಾರ್ಕಂಡೇಶ್, ಕಮಲಾಪುರ
ಎಸ್. ನಾರಾಯಣ್ ಯಾವಾಗಲೂ ಕುಂಕುಮ ಇಟ್ಟಿರುತ್ತಾರಲ್ಲಾ?
◆ ಅವರು ಚಪ್ಪಾಳೆ ಹೊಡಿಯೋ ಶೈಲಿಯನ್ನು ನೋಡಬೇಕು ನೀವು!

ಮಂಚಾಲಿ ಗುರುರಾಜಚಾರು, ಬಳ್ಳಾರಿ
ಕಲುಷಿತ ಸಮ್ಮಿಶ್ರ ಸರ್ಕಾರ ಶುದ್ಧಿಯಾಗುವುದು ಯಾವಾಗ?
◆ ಚುನಾವಣೆ ಎಂಬ ಮತದಾರರ ಹೋಮದಲ್ಲಿ ಇವರೆಲ್ಲಾ ಭಸ್ಮವಾದಾಗ.

ಅಕ್ಕಿ ಕೊಟ್ರೇಶ, ಉಪನಾಯಕನಹಳ್ಳಿ
ಪ್ರಜೆಗಳಿಗೆ ರಕ್ಷಣೆ ಕೊಡಬೇಕಾದವರೆ ತಮ್ಮ ಸುತ್ತ ಸೆಕ್ಯುರಿಟಿ ಗಾರ್ಡ್ ಇಟ್ಟುಕೊಂಡಿರುತ್ತಾರಲ್ಲಾ ಸರಿಯೇ?
◆ ಪಾಪ. ಪ್ರಜೆಗಳ ಬಗ್ಗೆ ಹೆದರಿಕೆ ಅವರಿಗೆ!

ಸರ್‌ಫರಾಜ್ ಸಲೀಮ್ ಗಡ್ಯಾಲ್, ಗೋಕಾಕ್
ಲವರ್ಸ್ ಡೇ ಇದ್ದ ಹಾಗೆ ಭಗ್ನ ಪ್ರೇಮಿಗಳ ದಿನ ಇದ್ದಿದ್ದರೆ?
◆ ಇದೆಯಲ್ಲ ಮಿಕ್ಕ *364* ದಿನಗಳು.

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ಪ್ರಶ್ನೆ ನಂ: 25
'ಶ್ರೀರಮೇಶ್'ಗೆ ಬೈ, 'ಗೌಡ'ಗೆ ಹಾಯ್ ಎಂದಿರುವ ತೇಜಸ್ವಿನಿಯ ಹೊಸ ಆಟವೇನು?


ಪ್ರಶ್ನೆ ನಂ. 23ರ ನಮ್ಮ ಪ್ರಶ್ನೆ: ಬಂಜಗೆರೆಗೂ. ತಸ್ಲೀಮಾ ನಸ್ರೀನ್‌ಗೂ ಇರುವ ವ್ಯತ್ಯಾಸ?
ನಿಮ್ಮ ಉತ್ತರ: ಬಂಜಗೆರೆ ತೆಂಗಿನಮರ. ತಸ್ಲೀಮಾ ಈಚಲ ಮರ.

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಬಸವರಾಜ್ ಬೆಸ್ತರ್, ಗುಲ್ಬರ್ಗಾ

ತಿರುಕನ ಕನಸು ಓದಿ ನಗು ಬಂತು

ಹೊಗಳಿಕೆ ತೆಗಳಿಕೆ

ಈ ವಾರದ ಸಂಚಿಕೆ ಮುಖಪುಟದಲ್ಲಿ ತಿರುಕನಕನಸು ಎಂಬ ಯಡಿಯೂರಪ್ಪನ ಫೋಟೋ ನೋಡಿ ನಗೆ ಮೂಡಿದೆ. ತಿರುಕನೋರ್ವ ಊರ ಮುಂದೆ ಮುರುಕ ಧರ್ಮಶಾಲೆಯಲ್ಲಿ ಕನಸು ಕಂಡೆ ಎಂಬಂತೆ ಯಡಿಯೂರಪ್ಪ ಸಿ.ಎಂ. ಪಟ್ಟಕ್ಕಾಗಿ ಕಾದು ಕುಳಿತದ್ದು ಅಯೋಗ್ಯತನದ ಪರಮಾವಧಿ. ಚೆಡ್ಡಿ ತೊಟ್ಟ



ಬಡ್ಡಿಮಗ ಯಡ್ಡಿ ಮುಂದಿನ ಮುಖ್ಯಮಂತ್ರಿ ನಾನೇ ಎಂದು ಬೊಗಳುತ್ತಿರುವುದು ನೋಡಿದರೆ ಅಧಿಕಾರ ಹಸ್ತಾಂತರ ಎಂಬುದು ಗಾಳಿಪಾಟ ಆಗುವುದರಲ್ಲಿ ಸಂದೇಹವೇ ಇಲ್ಲ.

-ಆರ್.ಕೆ. ಕೊರ್ತಿ, ಬಾದಾಮಿ

ಮುಂಬೈನ ಟಾಡಾ ನ್ಯಾಯಾಲಯ ನಟ ಸಂಜಯ ದತ್‌ಗೆ ವಿಧಿಸಿರುವ ಶಿಕ್ಷೆ ಸಮರ್ಪಕವೆ? ಈ ಹಿಂದೆ ಜೈಲು ವನವಾಸ ಅನುಭವಿಸಿಯೂ ಇದೀಗ ಸಾಕಷ್ಟು ಜೀವನ ಮಾರ್ಪಾಡು ಹೊಂದಿಯೂ ಬದಲಾಗಿದ್ದ ಸಂಜಯ್‌ಗೆ ಆರು ವರ್ಷಗಳ ಈ ಶಿಕ್ಷೆ ನ್ಯಾಯ ಸಮ್ಮತವೇ? ಗುಜರಾತಿನ ನರಮೇಧಕ್ಕೆ ಕಾರಣ ಯಾರು, ಹೇಗೆ ಯಾರಿಂದ ಎಂಬುದು ತಿಳಿದಿದ್ದೂ ಮೌನವಾಗಿರುವ ನ್ಯಾಯ ಕುರುಡೇ ಅಲ್ಲವೇ? ಅಪರಾಧಿಗಳೆಲ್ಲಾ ರಾಜಾರೋಷವಾಗಿಲ್ಲವೇ? ಲಗೇ ರಹೋ ಮುನ್ನಾಭಾಯಿ ಚಿತ್ರದ ತುಣುಕಿನಂತೇ ಅದೇ ನಾಯಕನಿಗೆ ಶಿಕ್ಷೆ ನಿಜಕ್ಕೂ ದೊರೆತದ್ದು ವಿಪರ್ಯಾಸವೇ ಅಲ್ಲವೇ?

-ಆ.ರಾ. ಮಂಜುನಾಥ. ಗೆದರೆ

ಆರೋಗ್ಯ ಮಂತ್ರಿ 1500 ಎಕರೆ ದರೋಡೆ ಎಂಬ ವರದಿ ಪ್ರಕಟಿಸಿದ್ದಕ್ಕೆ, ಹ್ಯಾಟ್ಸ್ ಆಫ್ ಲೋಕಾಯುಕ್ತರಿಗೆ, ಎ.ಟಿ. ರಾಮಸ್ವಾಮಿ ಕಮಿಟಿಗೆ ನಿಮ್ಮ ವರದಿ ಸವಾಲು.

ಜನಪರ ಕಾಳಜಿ, ಸಾಮಾಜಿಕ ಕಳಕಳಿ, ಅಧಿಕಾರ, ಧ್ಯೇಯ ಇದ್ದರೆ ಲೋಕಾಯುಕ್ತರು ಈ ಭೂಕಂಟಕರನ್ನು ಬಂಧಿಸಲಿ. ರಾಜಕೀಯದಲ್ಲಿರುವಷ್ಟು ದಿನ



ಬಾಚಿಕೊಂಡು ರಾಜ್ಯವನ್ನು ಕೊಳ್ಳೆ ಹೊಡೆಯುವರಿಗೆ ಕಡಿವಾಣ ಯಾರಿಂದ ಆಗಬೇಕು? ಇದರಲ್ಲಿ ಸಿಎಂಗೆ ಎಷ್ಟು ಕೋಟಿ ಹಣ ತಲುಪಿದೆ? ಇದರಲ್ಲಿ ಪಾಲು ಇರದಿದ್ದರೆ ಇವರೇಕೆ ಸುಮ್ಮನಿರುತ್ತಾರೆ? ಇವರು ಇಲ್ಲಿವರೆಗೆ ತಿಂದು, ತೇಗಿದ್ದು ಜನರಿಗೆ ಗೊತ್ತಿಲ್ಲವೇ? ಈ ಭ್ರಷ್ಟಾತಿಭ್ರಷ್ಟರಿಂದ ರಾಜ್ಯಕ್ಕೆ ಮುಕ್ತಿ ಎಂದು?

-ಡಿ.ಎಲ್. ಚಂದ್ರಿಕಾ. ಹರಪನಹಳ್ಳಿ

ಸ್ಪಷ್ಟೀಕರಣ

ನಮ್ಮ ಆಗಸ್ಟ್ 22, 2007 ರ ಸಂಚಿಕೆಯಲ್ಲಿ 'ಓಂಕಾರಾಶ್ರಮ ಸ್ವಾಹ' ಎಂಬ ಮುಖಪುಟ ವರದಿಯಲ್ಲಿ ಆಕಸ್ಮಿಕವಾಗಿ ರಾಜರಾಜೇಶ್ವರಿ ನಗರದ ಕಾಂಗ್ರೆಸ್ ನಾಯಕ ಎಂ. ರಾಜಕುಮಾರ್‌ರವರ ಚಿತ್ರ ಪ್ರಕಟಗೊಂಡಿತ್ತು.



ರಾಜಕುಮಾರರಿಗೂ, ಮಠದಲ್ಲಿನ ಆಗುಹೋಗುಗಳಿಗೂ ಯಾವುದೇ ಸಂಬಂಧ ಇಲ್ಲ ಎಂದು ಈ ಮೂಲಕ ಸ್ಪಷ್ಟಪಡಿಸುತ್ತೇವೆ.

-ಸಂ


ಮಾತೆ ಕ್ಯಾತೆ

(10 ನೇ ಪುಟದಿಂದ)

ಈ ಮಾತೆ ಈಗ ತನ್ನ ಭಾಗದ ಕುಂಬಳಗೋಡು ಜಮೀನು ದಾಟಿ ಬಂದು ಕಂಬೀಪುರದ ಪುಟ್ಟಯ್ಯನ ಜಮೀನನ್ನು ಒತ್ತರಿಸಲು ನೋಡುತ್ತಿದ್ದಾರೆ. ಪುಟ್ಟಯ್ಯನಿಗೆ ಸೇರಿರುವ ಎರಡು ಎಕರೆ ಜಾಗ ನುಂಗಲು ಅವನ ಜಮೀನಿನಲ್ಲಿ ಜುಲೈ 29 ರಂದು ರಾತ್ರೋರಾತ್ರಿ ಉದ್ಭವ ಬಸವಣ್ಣನನ್ನು ಸೃಷ್ಟಿಸಲಾಗಿದೆ. ಆದರೆ ಮೂರಡಿ ಅಗಲದ ಒಂದು ಟೆಂಪರರಿ ಶೆಡ್ ನಿರ್ಮಿಸಿ ಅದರೊಳಗೆ ಬಸವಣ್ಣನ ವಿಗ್ರಹ ತಂದಿರಿಸಲಾಗಿದೆ. ಪುಟ್ಟಯ್ಯ ಮತ್ತವರ ಮಗನಾದ ಲೋಕೇಶ್ ಬಂದು 'ಇದೇನು ಅನ್ಯಾಯ ನಮ್ ಹೊಟ್ಟೆ ಮೇಲೆ ಹೊಡೀಬೇಡಿ' ಅಂದರೆ ಈ ಮಾತೆ 'ಈ ಜಾಗ ನಮ್ದು, ಬಸವಣ್ಣನ ವಿಗ್ರಹ ಮುಟ್ಟೀರಾ ಜೋಕೆ' ಎಂದು ಅವಾಜ್ ಹಾಕುತ್ತಿದ್ದಾರೆ. ಹೀಗೆ ಸಾಕ್ಷಾತ್ ಬಸವಣ್ಣನನ್ನೇ ವಾಚ್‌ಮನ್‌ನಂತೆ ತಂದು ಕೂರಿಸಿರುವುದೇ ಅಲ್ಲದೆ ಪುಟ್ಟಯ್ಯನ ಜಮೀನಿನ ಉತ್ತರದ ತುದಿಯಲ್ಲಿ ತನ್ನ ವೃದ್ಧಾಶ್ರಮದಲ್ಲಿದ್ದು ಮೃತಪಟ್ಟಿರುವ ಒಂದಿಬ್ಬರ ಸಮಾಧಿ ನಿರ್ಮಿಸಿ ಆ ಜಾಗವೂ ನನ್ನದೇ ಎನ್ನುತ್ತಿದ್ದಾರೆ.

ಹೀಗೆ ನಿರ್ಜೀವ ವಸ್ತುಗಳನ್ನಿಟ್ಟುಕೊಂಡು ಪರರ ಭೂಮಿ ನುಂಗಲು ಹೊರಟಿರುವ ಮಾತೆ ಮಹಾದೇವಿ ದುರಾಶೆಗೆ ಅದೇ ಬಸವ ಗಂಗೋತ್ರಿಯಲ್ಲಿ ಸೈಟು ಖರೀದಿಸಿ ಮನೆ ಕಟ್ಟಿಕೊಂಡಿರುವ ಶ್ರೀಕಂಠಪ್ಪ ವಿಶ್ವನಾಥ್ ಮತ್ತಿತರರು ಬೆಂಬಲಕ್ಕೆ ನಿಂತಿದ್ದಾರೆ. ಬಡ ರೈತ ಪುಟ್ಟಯ್ಯನಿಗೆ ಭೀತಿ ಹುಟ್ಟಿಸಲು ಬಿಡದಿ ಪೊಲೀಸರನ್ನು ಬಳಸುತ್ತಿರುವ ಮಾತೆ ಈ ಘನ ಕಾರ್ಯಕ್ಕಾಗಿ ಇನ್ನೊಬ್ಬ ಶರಣ ಉಪಮುಖ್ಯಮಂತ್ರಿ ಯಡಿಯೂರಪ್ಪನ ಪ್ರಭಾವವನ್ನೂ ಬಳಸುತ್ತಿದ್ದಾರೆ.

ವಾಸ್ತವವಾಗಿ ಬಿಡದಿ ಪೊಲೀಸ್ ಠಾಣೆ ವ್ಯಾಪ್ತಿಗೆ ಕುಂಬಳಗೋಡು ಬರುತ್ತದೆಯೇ ಹೊರತು, ಅದರ ಪಕ್ಕದ ಕಂಬೀಪುರ ಬರುವುದಿಲ್ಲ, ಅದು ತಲಘಟ್ಟಪುರ ಪೊಲೀಸ್ ಠಾಣೆಗೆ ಸೇರಿದೆ. ಆದರೂ ಕೂಡ ಮಾತೆ ಮಹಾದೇವಿ ಬಿಡದಿ ಪೊಲೀಸರನ್ನು ಮುಂದಿಟ್ಟುಕೊಂಡು ತನ್ನ ಭೂಸ್ವಾಹ ಯಜ್ಞ ಮುಂದುವರೆಸಿದ್ದಾರೆ.




1. ಕುಂಬಳಗೋಡು ಗ್ರಾಮದ ಬಸವ ಮಂಟಪ ಜಾಗ
2. ಕಂಬಿಪುರ ಗ್ರಾಮದ ಪುಟ್ಟಯ್ಯನ ಜಮೀನು
3. ಪುಟ್ಟಯ್ಯನ ಜಮೀನಿನಲ್ಲಿ ಉದ್ಭವ ಬಸವಣ್ಣ

ಮಾತೆ ಮಹಾದೇವಿ ಈಗ ಹಂದಿಗೂಡಿನಂಥ ಶೆಡ್‌ನೊಳಗೆ ಬಸವಣ್ಣ ವಿಗ್ರಹ ಸ್ಥಾಪಿಸಿರುವ ಜಾಗ ಕಂಬೀಪುರ ಗ್ರಾಮಕ್ಕೆ ಸೇರಿದ್ದೆಂಬುದು ರೆವಿನ್ಯೂ ದಾಖಲೆ ಹಾಗೂ ಸ್ಕೆಚ್‌ಗಳಲ್ಲಿ ಸ್ಪಷ್ಟವಾಗೇ ಗೊತ್ತಾಗುತ್ತಿದೆ. ಆದರೂ ಕನಿಷ್ಠ ಎರಡು ಕೋಟಿ ರೂ. ಬಾಳುವ ಈ ಜಮೀನಿನ ಮೇಲೆ ಆಕೆಯ ಕಣ್ಣು ಬಿದ್ದಿರುವುದು ಏಕೆಂದರೆ ಈ ಜಾಗ ಮಾತೆ ನಿರ್ಮಿಸುತ್ತಿರುವ ಲೇಔಟಿನ ಪಕ್ಕದಲ್ಲೇ ಇದೆ. ಪುಟ್ಟಯ್ಯನ ಜಮೀನನ್ನು ಲಪಟಾಯಿಸಿಬಿಟ್ಟರೆ ಅಲ್ಲೂ ಕನಿಷ್ಠ 40 ಸೈಟುಗಳಾಗುತ್ತವೆ. ಸೈಟಿಗೆ 10 ಲಕ್ಷ ಎಂದಿಟ್ಟುಕೊಂಡರೂ ನಾಲ್ಕು ಕೋಟಿಯಾಯಿತು.

ಮಾತೆಯ ಈ ದುರಾಶಪೀಡಿತ ಲೋಭಕ್ಕಾಗಿ ಸಾಕ್ಷಾತ್ ಬಸವಣ್ಣ ಈಗ ವಾಚ್‌ಮನ್ ಕೆಲಸ ಮಾಡಬೇಕಾಗಿ ಬಂದಿದೆ. ಸಾರ್ವಜನಿಕ ಪಾರ್ಕ್, ರಸ್ತೆಗಳಲ್ಲಿ ಚೆಡ್ಡಿಗಳು ರಾತ್ರೋರಾತ್ರಿ ಉದ್ಭವಮೂರ್ತಿಗಳನ್ನು ಸ್ಥಾಪಿಸಿ ಕಿತಾಪತಿ ಎಬ್ಬಿಸುವುದನ್ನು ಜನ ನೋಡಿದ್ದಾರೆ. ಆದರೆ ವೀರಶೈವ ಧರ್ಮಗುರು ಎಂದು ಹೇಳಿಕೊಳ್ಳುವ ಮಾತೆ ಮಹಾದೇವಿಯೂ ಈಗ ಇಂಥ ಚಿಲ್ಲರೆ ಕೆಲಸಕ್ಕೆ ಕೈ ಹಾಕಿದ್ದಾರೆ.

ಬಸವಣ್ಣನ ಅನುಯಾಯಿಗಳು ಮಾಡುವ ಕೆಲಸವಾ ಇದು.

ರಂಗೀಲಾ ರಾಧಿಕಾ!




ನಟಿ ರಾಧಿಕಾ ಹತ್ತು ಕೋಟಿಯ ಮನೆ ಖರೀದಿಸಿದಳಂತೆ. ಡುಂ.. ಡುಂ...!

ಹತ್ತು ಮತ್ತೊಂದು ಸಿನಿಮಾಗಳಲ್ಲಿ ನಟಿಸಿರುವ ಈಕೆ ಇಷ್ಟೊಂದು ದುಬಾರಿ ಮನೆ ಖರೀದಿಸಿದ್ದು ಹೇಗೆಂದು ವಿಚಾರಿಸಲು ಆಕೆಯ ಮನೆ ಮೇಲೆ ಆದಾಯ ತೆರಿಗೆ ಇಲಾಖೆಯವರು ರೈಡ್ ಮಾಡಿದರಂತೆ. ಡುಂ.. ಡುಂ...!!

ಹಾಗೆ ರೈಡ್ ಮಾಡಲು ಹೋದಾಗ ಅವಳ ಮನೆಯಿಂದ ಸಾಕ್ಷಾತ್ ಸುಮಾರು ಸ್ವಾಮಿಯೇ ಎದ್ದುಬಿದ್ದು ಓಡಿಹೋದರಂತೆ, ಡುಂ.. ಡುಂ....!!!

ಇದೆಲ್ಲ ಹಳೆ ಕತೆ. ಈಗ ರಾಧಿಕಾಳ ಹೊಸ ಕತೆಗಳನ್ನು ಕೇಳುತ್ತಾ ಇಡೀ ಗಾಂಧಿನಗರವೇ ಡುಂ, ಡುಂ, ಡುಂ, ಡುಂ, ಡುಂ, ಎಂದು ಬಾರಿಸತೊಡಗಿದೆ. ಯಾಕೆಂದರೆ, ಹತ್ತು ಕೋಟಿ ಅಲ್ಲ, ಐದು ಕೋಟಿಯ ಮನೆಯನ್ನೂ ಖರೀದಿಸುವ ತಾಕತ್ತು ಇಲ್ಲದ ಈ ಬೋಂಡಾ, ಕಬಾಬು ಸಂತತಿಯ ರಾಧಿಕಾ ಇತ್ತೀಚೆಗೆ ಗಾಂಧಿನಗರದಲ್ಲಿ ಕೈಗೆ ಸಿಕ್ಕಿದ್ದನ್ನೆಲ್ಲ ಖರೀದಿಸಲಾರಂಭಿಸಿದ್ದಾಳೆ ಮಾತ್ರವಲ್ಲ, ಕಳಪೆ ಮಾಲುಗಳಿಗೂ ದುಪ್ಪಟ್ಟು ಬೆಲೆ ಕೊಟ್ಟು ತನ್ನ ವಶಕ್ಕೆ ತೆಗೆದುಕೊಳ್ಳುತ್ತಿದ್ದಾಳೆ.

ಇಂತಹ ಯಾರದೋ ದುಡ್ಡು ರಾಧಿಕಮ್ಮನ ಜಾತ್ರೆಯಲ್ಲಿ ಉದ್ಧಾರವಾಗಿರುವ ಪ್ರಥಮರು ಓಂ ಪ್ರಕಾಶ್‌ರಾವ್ ಮತ್ತು ಮುನಿರತ್ನ. ಈ ಕರಾವಳಿಯ ಕನ್ಯೆ ಈಗ ಗಾಂಧಿನಗರದಲ್ಲಿ ಹಂಚಿಕೆದಾರಳಾಗಿ ಅವತಾರ ಹೊತ್ತಿದ್ದಾಳೆ ಮಾತ್ರವಲ್ಲ, ಖ್ಯಾತ ವಜ್ರೇಶ್ವರಿ ಮತ್ತು ಈಶ್ವರಿ ಕಂಬೈನ್ಸ್ ಸಂಸ್ಥೆಗಳ ಕಚೇರಿಗಳಿರುವ ರಸ್ತೆಯಲ್ಲೇ ತನ್ನದೊಂದು ಕಚೇರಿ ತೆರೆದಿರುವ ಈಕೆ ಇವರಿಬ್ಬರ ಹೊಸ ಚಿತ್ರಗಳ ರಾಜ್ಯಾದ್ಯಂತ ಹಂಚಿಕೆ ಹಕ್ಕುಗಳನ್ನೂ ಖರೀದಿಸಿದ್ದಾಳೆ.




ಹೇಳಿಕೇಳಿ, ಓಂ ಪ್ರಕಾಶ್‌ರಾವ್ ನಿರ್ದೇಶನದ 'ಈಶ್ವರ್' ಚಿತ್ರ ಮುಗಿದು ಹತ್ತಿರ ಒಂದು ವರ್ಷವಾಗಿದ್ದರೂ ಅದನ್ನು ಕೊಳ್ಳಲು ಯಾರೂ ಮುಂದೆ ಬಂದಿರಲಿಲ್ಲ. ರವಿಚಂದ್ರನ್ ಸಹೋದರ ಬಾಲಾಜಿ ಜೊತೆ ಸ್ವತಃ ರಾಧಿಕಾ ಈ ಚಿತ್ರದಲ್ಲಿ ನಟಿಸಿದ್ದು ಇದು ಬಿಡುಗಡೆಯಾಗುವ ಮುನ್ನವೇ ಗಾಂಧಿನಗರದವರೇ ಇದನ್ನು ರಿಜೆಕ್ಟ್ ಮಾಡಿದ್ದರು. ಇದರಿಂದಾಗಿ ತಲೆ ಮೇಲೆ ಕೈಹೊತ್ತು ಕೂತಿದ್ದ ಓಂ ಪ್ರಕಾಶ್ ಪಾಲಿಗೆ ಮೊನ್ನೆ ವರಮಹಾಲಕ್ಷ್ಮಿಯಂತೆ ಬಂದ ರಾಧಿಕಾ ಅದಕ್ಕೆ ಸಖತ್ ಹಣ ನೀಡಿ ಖರೀದಿಸಿದ್ದಾಳೆ. ಅಲ್ಲಿಗೆ ಓಂ ಪ್ರಕಾಶ್‌ಗೆ ಬಂಪರ್ ಲಾಟರಿ ಹೊಡೆದಂತಾಗಿದೆ.

ಇದೇರೀತಿ 'ಅನಾಥರು' ಚಿತ್ರದ ನಿರ್ಮಾಪಕ ಮುನಿರತ್ನ ಪಾಲಿಗೂ ಈಕೆ ಅದೃಷ್ಟ ಲಕ್ಷ್ಮಿಯಾಗಿದ್ದಾಳೆ. ಉಪೇಂದ್ರ ಮತ್ತು ದರ್ಶನ್ ನಟಿಸಿರುವ ಈ ಚಿತ್ರದ ಬಗ್ಗೆಯೂ ಗಾಂಧಿನಗರದಲ್ಲಿ ಅಂತಹ ಒಳ್ಳೆಯ ಮಾತು ಕೇಳಿಬರುತ್ತಿಲ್ಲ. ಇದನ್ನು ಮಾರಲೆಂದು ಮುನಿರತ್ನ ಗಾಂಧಿನಗರದುದ್ದಗಲಕ್ಕೂ ಓಡಾಡಿದ್ದೇ ಬಂತು, ಜೇಬು ತೆರೆದವರು ಮಾತ್ರ ಸಿಕ್ಕಿರಲಿಲ್ಲ. ಈಗ ನೋಡಿದರೆ ಇದರ ಕರ್ನಾಟಕದ ಹಕ್ಕನ್ನೂ ರಾಧಿಕಾಳೆ ಪರ್ಚೇಸ್ ಮಾಡಿದ್ದಾಳೆ. ಇನ್ನು ಮುಂದೆಯೂ ಈಕೆ ಇನ್ನೆಷ್ಟು ಡಬ್ಬಾ ಚಿತ್ರಗಳನ್ನು ಖರೀದಿಸುತ್ತಾಳೆ ನೋಡಬೇಕು.

ರಾಧಿಕಾ ಪುರಾಣ ಇಲ್ಲಿಗೇ ಮುಗಿಯುವುದಿಲ್ಲ. ಇಲ್ಲಿಯ ತನಕ ಜಯಮಾಲಾ, ಶೃತಿ, ತಾರಾ, ಸೌಂದರ್ಯ, ಆರತಿ ತರಹದ ನಟಿಯರು ನಲವತ್ತೊ, ಐವತ್ತೊ ಲಕ್ಷ ರೂಪಾಯಿಗಳಲ್ಲಿ ಒಂದು ಕಲಾತ್ಮಕ ಚಿತ್ರವನ್ನು ನಿರ್ಮಿಸಿ ಅಲ್ಲೊಂದು ಇಲ್ಲೊಂದು ಪ್ರಶಸ್ತಿ ಪಡೆದು ತೃಪ್ತರಾಗುತ್ತಿದ್ದರು. ಆದರೆ ಈಗ ರಾಧಿಕಾ ಆ ಮಹಿಳೆಯರನ್ನು ಮಾತ್ರವಲ್ಲ, ಕೋಟಿ ನಿರ್ಮಾಪಕ ಎಂಬ ಬಿರುದಾಂಕಿತದ ರಾಮು ತರಹದ ಪುರುಷರನ್ನೇ ಹಿಂದೆ ತಳ್ಳುವತ್ತ ಹೆಜ್ಜೆ ಹಾಕುತ್ತಿದ್ದಾಳೆ.

ಆಕೆ ನಿರ್ಮಿಸಲು ಹೊರಟಿರುವ ಹೊಸ ಚಿತ್ರದ ಬಜೆಟ್ ಕನಿಷ್ಠವೆಂದರೂ ನಾಲ್ಕೂವರೆಯಿಂದ ಐದೂವರೆ ಕೋಟಿ ಮೀರಬಹುದಂತೆ. ಆದರೆ ಇಷ್ಟೊಂದು ಹಣ ಚೆಲ್ಲಲಿರುವ ರಾಧಿಕಾ ಆ ಚಿತ್ರಕ್ಕೆ ಆರಕ್ಕೇರದ, ಮೂರಕ್ಕಿಳಿಯದ ಎಂ.ಡಿ. ಶ್ರೀಧರ್ ಎಂಬಾತನನ್ನೇ ನಿರ್ದೇಶಕನಾಗಿ ಆಯ್ಕೆಮಾಡಿದ್ದಾಳೆ. ಇಡೀ ಚಿತ್ರವನ್ನು ದುಬೈನಲ್ಲೇ ಚಿತ್ರೀಕರಿಸುವ ಮಾತೂ ಕೇಳಿಬರುತ್ತಿದೆ.




ರಾಧಿಕಾ ತನ್ನ ಈ ಎಲ್ಲ ಹೊಸ ವ್ಯವಹಾರಗಳನ್ನು ತನ್ನ ಸಹೋದರ ರವಿರಾಜ್ ಹೆಸರಿನಲ್ಲಿ ಮಾಡುತ್ತಿದ್ದಾಳೆ. ಅಂತೂಇಂತೂ ಗಾಂಧಿನಗರದಲ್ಲಿ ಕಳೆದ ಎರಡು ತಿಂಗಳಿನಿಂದ 'ರಾಧಿಕಾ ಹವಾ' ಜೋರಾಗಿಯೇ ಬೀಸುತ್ತಿದೆ.

ಈಕೆಗೆ ಇಷ್ಟೆಲ್ಲ ಹಣ ಎಲ್ಲಿಂದ ಬಂತು? ಎಂಬ ಪ್ರಶ್ನೆಗೆ ಉತ್ತರ ಎಲ್ಲರಿಗೂ ಗೊತ್ತು. ಆದರೆ ಅಷ್ಟೊಂದು ಹಣವನ್ನು ಈಗ ಗ್ಯಾರಂಟಿ ಫ್ಲಾಪ್ ಆಗಲಿರುವ ಸಿನಿಮಾಗಳನ್ನು ಖರೀದಿಸುವುದಕ್ಕೆ, ಹಂಡ್ರೆಡ್ ಪರ್ಸೆಂಟ್ ಫ್ಲಾಪ್ ಆಗುವ ಚಿತ್ರವನ್ನು ನಿರ್ಮಿಸುವುದಕ್ಕೆ ವೆಚ್ಚ ಮಾಡುತ್ತಿರುವುದೇಕೆ? ಎಂಬ ಪ್ರಶ್ನೆ ಮಾತ್ರ ಎಲ್ಲರನ್ನೂ ಕಾಡುತ್ತಿದೆ.

ಇದರ ಮರ್ಮ ಏನಿರಬಹುದು? ಆಕೆ ಯಾರದ್ದೋ ಕಪ್ಪು ಹಣವನ್ನು ಬಿಳಿಯಾಗಿಸಲೆಂದೇ ಇಂತಹ ದಂಧೆಯಲ್ಲಿ ತೊಡಗಿರಬಹುದೇ? ಇದೆಲ್ಲದರಿಂದ ಯಾರಿಗೆ ಲಾಭ? ಇಂತಹ ಪ್ರಶ್ನೆಗಳಿಗೆ ಗಾನಿಷ್ಟಾದ ಆವರಣದಿಂದ ಹತ್ತು ಮತ್ತೊಂದು ಊಹೆಗಳೇ ಕೇಳಿಬರುತ್ತಿರುವುದು ಮಾತ್ರ ನಿಜ!!

ಪ್ರಶಸ್ತಿ ಸಮಾರಂಭದ ಮೇಲೂ ಅಧಿಕಾರ ಹಸ್ತಾಂತರದ ಕರಿನೆರಳು




ಬರುವ ಆ. 30 ರಂದು ಜ್ಞಾನಗಂಗೋತ್ರಿಯಲ್ಲಿ ರಾಜ್ಯ ಸರ್ಕಾರದ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಇಡೀ ಸಮಾರಂಭವನ್ನು ಅತ್ಯಂತ ಹರಿಬರಿಯಲ್ಲಿ ಆಯೋಜಿಸಿರುವಂತೆ ಕಾಣುತ್ತಿದೆ. ಅಧಿಕಾರ ಹಸ್ತಾಂತರದ ಗೊಂದಲ ಮತ್ತು ಯಾವುದೇ ಕ್ಷಣದಲ್ಲಿ ಚುನಾವಣೆ ಘೋಷಣೆಯಾಗುವ ಸಾಧ್ಯತೆಯಿರುವುದರಿಂದ ಸಿನಿಮಾ ನಿರ್ಮಾಪಕ ಕೂಡ ಆಗಿರುವ ಕುಮಾರಸ್ವಾಮಿ ಇದನ್ನು ಬೇಗನೇ ಮುಗಿಸಿದರಾಯಿತು ಎಂದು ನಿರ್ಧರಿಸಿದಂತಿದೆ.



ಆದ್ದರಿಂದ ಈ ಬಾರಿ ಯಾವುದೇ ಜಿಲ್ಲಾ ಕೇಂದ್ರದಲ್ಲಿ ಇದನ್ನು ನಡೆಸುವ ಬದಲಾಗಿ ಬೆಂಗಳೂರಿನಲ್ಲೆ ನಡೆಸಿ ಕೈತೊಳೆದುಕೊಳ್ಳಲಿದೆ ಸರಕಾರ.

ನಿರ್ದೇಶಕ ಬಿ. ಸುರೇಶ್ ಮತ್ತು ನಟಿ ಸುಧಾರಾಣಿ ಈ ಕಾರ್ಯಕ್ರಮವನ್ನು ನಿರೂಪಿಸಲಿದ್ದಾರೆ. ಗಾಂಧಿನಗರದ ಸಂಪ್ರದಾಯದಂತೆ ಈ ಬಾರಿಯೂ ಪ್ರಶಸ್ತಿ ವಿಜೇತರು ಮಾತ್ರ ಹಾಜರಿದ್ದು, ಪ್ರಶಸ್ತಿ ಸಿಗದಿದ್ದವರ ಅಭೂತಪೂರ್ವ ಗೈರುಹಾಜರಿಯಲ್ಲಿ ಇದೂ ನಡೆಯಲಿದೆ ಎಂಬುದು ಮಾತ್ರ ಗ್ಯಾರಂಟಿ ಆಗಿದೆ.

ಮೂವರು ಮಡದಿಯರ ಪಾಪದ ಗಂಡ!



ಇವರಿಗೆ ಮೂವರು 'ಹೆಂಡಂದಿರು'. ಮೊದಲನೆಯವಳು ಪೊಲೀಸ್, ಎರಡನೆಯವಳು ನಟಿ, ಮೂರನೆಯವಳು ರಾಜಕಾರಣಿ. ಮೊದಲನೆಯವಳು ಇವರಿಗೆ ಶೋ ಕಾಸ್ ಎಂಬ ಸೋಡಾ ಚೀಟಿ ನೀಡಿ ಹುದ್ದೆಯಿಂದಲೇ ವಜಾಗೊಳಿಸಿದ್ದಳು. ಎರಡನೆಯವಳು 'ಇಷ್ಟವಾದರೆ ಇರು, ಬೇಡವಾದರೆ ಹೋಗು' ಎಂಬ ತಟಸ್ಥ ನಿಲುವನ್ನು ತಾಳಿದ್ದಳು. ಮೂರನೆಯವಳು ಇವರನ್ನು ಮುದ್ದಾಡುತ್ತಲೇ 'ನೀನು ಆಟಕ್ಕುಂಟು ಲೆಕ್ಕಕ್ಕಿಲ್ಲ' ಎಂದು ಹೇಳಿ ಮೂಲೆಯಲ್ಲಿ ಕೂರಿಸಿದ್ದಳು. ಪಾಪು, ಈಗ ಇವರೇನು ಮಾಡಬೇಕು?

ಡೈವರ್ಸ್ ನೀಡಿದ್ದ ಮೊದಲನೆಯವಳಿಗೆ ಶತಾಯಗತಾಯ ಹಿಂದಿರುಗುವಂತಿಲ್ಲ, ಅದೇನೇನೋ ಪ್ರಾಮಿಸ್ ಮಾಡಿ ವಂಚಿಸಿರುವ ಹಾಲಿ ಮೂರನೆಯವಳೊಂದಿಗೂ ಮರ್ಯಾದೆ ಬಿಟ್ಟು ಇರುವಂತಿಲ್ಲ. ಅದಕ್ಕೆ 'ಹಳೇ ಗಂಡನ ಪಾದವೇ ಗತಿ' ಎಂಬ ನಾಣ್ನುಡಿಯನ್ನು ರೀರೈಟ್ ಮಾಡಿ 'ಎರಡನೆ ಮಡದಿಯ ಸಖ್ಯವೇ ಗತಿ' ಎಂಬಂತೆ ನಟಿಯ ಮಡಿಲಿಗೆ ವಾಪಸ್ಸು ಬಂದಿದ್ದಾರೆ.

ಯಾರಪ್ಪಾ ಈ ಮೂವರು ಮಡದಿಯರಿಂದ ತಿರಸ್ಕೃತಗೊಂಡ ಪುಣ್ಯಾತ್ಮ ಎಂದು ಚಿಂತಿಸುತ್ತಿದ್ದೀರಾ?

ಇವರು ಬೇರೆ ಯಾರೂ ಅಲ್ಲ, ಪೊಲೀಸ್ ಅಧಿಕಾರಿಯಾಗಿದ್ದಾಗ ಒಂದು ದಿನವೂ ನೆಟ್ಟಗೆ ಕೆಲಸ ಮಾಡದಿದ್ದ, ಆನಂತರ ಹೀರೊ ಆಗಿ ನಟ 'ಭಯಂಕರ' ಎನಿಸಿಕೊಂಡ, ಕೊನೆಗೆ ಕುಮಾರಸ್ವಾಮಿ ತನ್ನನ್ನು ಮಂತ್ರಿ ಮಾಡುತ್ತಾರೆಂದು ನಂಬಿ ಅವರ ಹಿಂದೆ ಸುತ್ತು ಹೊಡೆದು ಸುಸ್ತಾಗಿರುವ ತ್ರಿಮೂರ್ತಿ ಬಿ.ಸಿ. ಪಾಟೀಲ್!

ಕುಮಾರಸ್ವಾಮಿ ತನಗೆ ಮಂತ್ರಿಗಿರಿ ನೀಡುತ್ತಾರೆಂದು ನಂಬಿ ಹತ್ತೊಂಬತ್ತು ತಿಂಗಳಾಯಿತು. ಈಗ ಯಡಿಯೂರಪ್ಪನಿಗೇ ಅಧಿಕಾರ ಸಿಗುತ್ತೋ ಇಲ್ಲವೋ ಎಂಬಂತಹ ಪರಿಸ್ಥಿತಿ ನಿರ್ಮಾಣವಾಗಿರುವಾಗ ಇನ್ನು ತನಗೆಲ್ಲಿಂದ ಬರುತ್ತೆ ಗೂಟದ ಕಾರು ಎಂದು ಕೊನೆಗೂ ಅರಿತಿರುವ ಪಾಟೀಲ್ ಸಾಹೇಬರು ಚಿತ್ರರಂಗಕ್ಕೆ ಹಿಂದಿರುಗಿದ್ದಾರೆ. ಈ ಬಾರಿ ತಮ್ಮ ಆತ್ಮಕತೆಯನ್ನೇ ಆಧರಿಸಿರುವ ಸಿನಿಮಾವೊಂದನ್ನು ನಿರ್ಮಿಸಿ, ನಟಿಸಲಿದ್ದಾರಂತೆ (ಅದರಲ್ಲಿ ತಮಗೆ ಕೈಕೊಟ್ಟ ಮೂವರು ಪತ್ನಿಯರನ್ನು ಹೇಗೆ ಚಿತ್ರಿಸುತ್ತಾರೆ ಎಂಬುದನ್ನು ನೋಡಲಂತೂ ಜನ ಕುತೂಹಲದಿಂದಿರುತ್ತಾರೆ ಎಂಬುದನ್ನು ಮಾತ್ರ ಗ್ಯಾರಂಟಿಯಾಗಿ ಹೇಳಬಹುದು!)

ಅದೇನೆ ಇರಲಿ, ಪಾಟೀಲರ ಮರು ಆಗಮನವನ್ನು ರಾಜಕೀಯದ ಪುಣ್ಯ ಎನ್ನಬೇಕೋ, ಕನ್ನಡ ಚಿತ್ರ ಪ್ರೇಕ್ಷಕರನ್ನು ಪಾಪ ಎನ್ನಬೇಕೋ ಗೊತ್ತಾಗುತ್ತಿಲ್ಲ!

RANJANE BODHANE PRACHODANE LANKESH, Kannada Weekly Price Rs. 10/- 5-9-2007 RNI No. KARKAN2005/14648 Regd.No.KA/BG(S)/2036/2005-07

ವರಲಕ್ಷ್ಮಿಯೋ ಬರಲಕ್ಷ್ಮಿಯೋ?

ಮೂರು ವರ್ಷಗಳ ಹಿಂದೆ ವರಮಹಾಲಕ್ಷ್ಮಿ ಹಬ್ಬದ ದಿನದಂದು ವಿಷ್ಣುವರ್ಧನ್ ನಟಿಸಿದ್ದ 'ಆಪ್ತಮಿತ್ರ' ತೆರೆಕಂಡು ಬಾಕ್ಸಾಫೀಸಿನಲ್ಲಿ ಸೂಪರ್‌ಹಿಟ್ ಆಗಿತ್ತು. ಆನಂತರ ಶಿವರಾಜ್‌ಕುಮಾರ್ ನಟನೆಯ 'ಜೋಗಿ' ಕೂಡಾ ವರಮಹಾಲಕ್ಷ್ಮಿ ಹಬ್ಬದ ದಿನದಂದೇ ತೆರೆಕಂಡು ಸೂಪರ್ ಡೂಪರ್ ಹಿಟ್ ಆಗಿತ್ತು.

ಮೊದಲೇ ಚಿತ್ರರಂಗದವರಿಗೆ ಮೂಢನಂಬಿಕೆಗಳಲ್ಲಿ ಎಲ್ಲಿಲ್ಲದ ನಂಬಿಕೆ. ಅದರಲ್ಲೂ ಇಂತಹ ಕಾಕತಾಳೀಯ ಗೆಲುವುಗಳನ್ನು ಕಂಡರೆ ಅವರಿಗೆ ಮತ್ತಷ್ಟು ನಂಬಿಕೆ. ಗದ್ದ ಚಿತ್ರ ಚೆನ್ನಾಗಿತ್ತೋ ಇಲ್ಲವೋ ಎಂಬುದನ್ನು ನೋಡುವ ಬದಲಾಗಿ ವರಮಹಾಲಕ್ಷ್ಮಿಯ ದಯೆ ಎಂದೇ ಅವರು ನಂಬಿದರು.

ಇಲ್ಲವಾದರೆ ಮೊನ್ನಿನ ವರಮಹಾಲಕ್ಷ್ಮಿ ಹಬ್ಬದ ದಿನದಂದೇ ತಮ್ಮ ಚಿತ್ರಗಳನ್ನು ಬಿಡುಗಡೆ ಮಾಡಬೇಕೆಂದು ಇಬ್ಬರು ನಿರ್ಮಾಪಕರು ಹಟ ತೊಡುತ್ತಿದ್ದರೇ? ಹೇಳಿಕೇಳಿ ಬಿಡುಗಡೆಗೆ ಸಿದ್ಧಗೊಂಡಿದ್ದ ಅವೆರಡು ಚಿತ್ರಗಳಲ್ಲಿ ವಿಷ್ಣು (ಮಾತಾಡ್ ಮಾತಾಡು ಮಲ್ಲಿಗೆ) ಮತ್ತು ಶಿವಣ್ಣ (ಗಂಡನ ಮನೆ) ನಟಿಸಿದ್ದರು. ಹಬ್ಬ ಬೇರೆ ಹತ್ತಿರ ಬಂದಿತ್ತು. ಆದ್ದರಿಂದ ಅಂದೇ ಅವುಗಳನ್ನು ಬಿಡುಗಡೆ ಮಾಡಿದರೆ ಅವೆರಡೂ ಸೂಪರ್‌ಹಿಟ್ ಆಗುತ್ತವೆ ಎಂಬ




ನಂಬಿಕೆ ನಿರ್ಮಾಪಕರಾದ ಕೊಬ್ರಿ ಮಂಜು ಮತ್ತು ಆರ್.ಎಸ್. ಗೌಡರದ್ದು.

ಆದ್ದರಿಂದ ಅವರಿಬ್ಬರೂ ಪೈಪೋಟಿಗೆ ಬಿದ್ದವರಂತೆ ಥಿಯೇಟರ್ ಹಿಡಿಯಲು ಪ್ರಾರಂಭಿಸಿದರು. ಹೀಗೆ ಜಿದ್ದಿಗೆ ಬಿದ್ದು ಅದೆಷ್ಟೋ ಜಿಲ್ಲಾ ಕೇಂದ್ರಗಳಲ್ಲಿ ಡಬ್ಬಾ ಚಿತ್ರಮಂದಿರಗಳಲ್ಲೇ ತಮ್ಮ ಸಿನಿಮಾಗಳನ್ನು ಬಿಡುಗಡೆ ಮಾಡಿದರು. ಅಂತಹ ಶುಭ ದಿನದಂದು ಬಿಡುಗಡೆ ಮಾಡುವಲ್ಲಿ ಯಶಸ್ವಿಯಾದ ತಮಗೆ ವರಮಹಾಲಕ್ಷ್ಮಿ ಒಲಿಯುತ್ತಾಳೆ ಎಂದೇ ನಂಬಿದ್ದರು.

ಆದರೆ ಕೆಲ ವರ್ಷಗಳ ಹಿಂದೆ ಪ್ರಸನ್ನಳಾಗಿದ್ದ ಲಕ್ಷ್ಮಿ ಈ ಬಾರಿ ಯಾಕೋ ಮುನಿಸಿಕೊಂಡಂತೆ ಕಾಣಿಸುತ್ತಿದೆ. ಮೂಢನಂಬಿಕೆಯ ಇವರಿಬ್ಬರ ಪಾಲಿಗೆ ವರಲಕ್ಷ್ಮಿ ಈ ಬಾರಿ 'ಬರ ಲಕ್ಷ್ಮಿ'ಯಾಗುವುದು ಗ್ಯಾರೆಂಟಿ ಅನಿಸುತ್ತಿದೆ. ಇದನ್ನು ಕಂಡಾದರೂ ಇನ್ನು ಮುಂದೆ ಗುಣಮಟ್ಟದ ಸಿನಿಮಾಗಳನ್ನು ಮಾಡುವತ್ತ ಕನ್ನಡ ಚಿತ್ರರಂಗದವರು ಗಮನ ನೀಡಲಿ, ಇಂತಹ ಮೂಢನಂಬಿಕೆಗಳನ್ನೇ ನಂಬದಿರಲಿ ಎಂದು ಆಶಿಸೋಣ. ■

ಸಿಂಹದ ಗುಹೆಗೆ ಗುಡ್ ಬೈ ಅರಮನೆಗೆ ಹಾಯ್!





'ಮಾತಾಡ್ ಮಾತಾಡು ಮಲ್ಲಿಗೆ' ಮಾತಾಡುತ್ತಾಳೋ, ಜೋರಾಗಿ ಅಳುತ್ತಾಳೋ ಅಥವಾ ನಿಟ್ಟುಸಿರು ಬಿಟ್ಟು ಜಾಗ ಖಾಲಿ ಮಾಡುತ್ತಾಳೋ ಇನ್ನೂ ಸ್ಪಷ್ಟವಾಗಿಲ್ಲ. ಆದರೆ ಅದರ ನಿರ್ಮಾಪಕ ಕೊಬ್ರಿ ಮಂಜು ಮಾತ್ರ ತಮ್ಮ ಹೆಸರಿನ ಮುಂದಿರುವ 'ಗಂಡುಗಲಿ' ಪದಕ್ಕೆ ತಕ್ಕಂತೆ ಹೊಸ ಚಿತ್ರಗಳಿಗೆ ಆಗಲೇ ಕೈ ಹಾಕಿದ್ದಾರೆ.

ಗಾಂಧಿನಗರದ ಸದ್ಯದ ಸೆನ್ಸೇಷನ್ ಗಣೇಶ್ ಮಂಜುರವರ 'ಅರಮನೆ' ಚಿತ್ರದಲ್ಲಿ ನಟಿಸುತ್ತಿದ್ದು, ನಾಗಶೇಖರ್ ಎಂಬ ಕಾಮಿಡಿ ನಟ ಇದರ ಮುಖಾಂತರ ಸ್ವತಂತ್ರ ನಿರ್ದೇಶಕರಾಗುತ್ತಿದ್ದಾರೆ. ಇದಕ್ಕೂ ಮುನ್ನ ರವಿಚಂದ್ರನ್ ಸಹೋದರ ಬಾಲಾಜಿಯನ್ನು ಹಾಕಿಕೊಂಡು 'ರಾಜಕುಮಾರಿ' ಎಂಬ ಚಿತ್ರವನ್ನು ಕೈಗೆತ್ತಿಕೊಂಡಿರುವ ಮಂಜು ಸದ್ಯದಲ್ಲೇ ಅದನ್ನೂ ಮುಗಿಸಲಿದ್ದಾರೆ. 'ರಾಜಕುಮಾರಿ'ಯ ಜೊತೆಜೊತೆಗೇ 'ಅರಮನೆ'ಯನ್ನೂ ನಿರ್ಮಿಸುತ್ತಿರುವ ಮಂಜು ಹೊಸಬರನ್ನು ಹಾಕಿಕೊಂಡು ದಿಢೀರ್ ಚಿತ್ರ ಮಾಡುವತ್ತ ಹೊರಟಿದ್ದಾರೆ ಎಂಬುದರ ಬಗ್ಗೆ ಈಗ ಅನುಮಾನಗಳಿಲ್ಲ.

ಆದರೂ ಒಂದು ಅನುಮಾನವಂತೂ ಇದೆ. '....ಮಲ್ಲಿಗೆ' ಸೊಗಸಾಗಿ ಮಾತನಾಡಿದರೆ ಮಾತ್ರ ಕೊಬ್ರಿ ಮಂಜು ಮತ್ತೆ ಸಾಹಸಸಿಂಹನ ಜಯನಗರದ 'ಗುಹೆ' ಕಡೆಗೆ ಹೋಗಬಹುದು. ಇಲ್ಲದಿದ್ದರೆ ಗಣೇಶನ ಸುತ್ತಲೇ ಕಾಲ ಕಳೆಯಬಹುದು ಎನ್ನುತ್ತಿದ್ದಾರೆ ಗಾಂಧಿನಗರದವರು.



■ ವಿಜಯ್,ಸ್ಮಿತಾ 'ಅವ್ವ'

ಹೆವಿವೈಟ್‌ಗಳ ಧಾರಾವಾಹಿ!



ಈಟಿವಿ ಚಾನೆಲ್ಲಿನಲ್ಲೊಂದು 'ರಾಧಾ' ಎಂಬ ಧಾರಾವಾಹಿ ಪ್ರಸಾರಗೊಳ್ಳುತ್ತಿದೆ. ಇದನ್ನು ನೀವು ನೋಡಿರಲೂಬಹುದು. ಇದರ ವಿಶೇಷತೆಯೆಂದರೆ, ಇದರಲ್ಲಿ ನಟಿಸುತ್ತಿರುವ ರವಿ ಬೆಳಗೆರೆಯ ದೈಹಿಕ ತೂಕ ನೂರು ಕೆಜಿಗಳಿಗಿಂತ ಒಂದೆರಡು ಗ್ರಾಮ್ ಕಡಿಮೆ ಇರಬಹುದು. ಬೆಳಗೆರೆಯೊಂದಿಗೆ ನಟಿಸುತ್ತಿರುವ ಅನನ್ಯ ಕಾಸರವಳ್ಳಿ ಎಂಬ ಯುವತಿ ಮತ್ತು ಗಿರಿಜಾ ಲೋಕೇಶ್ ಎಂಬ ಮಾಜಿ ಯುವತಿ ಕೂಡ ಕಡಿಮೆಯೇನಿಲ್ಲ. ಅವರಿಬ್ಬರನ್ನು ಜೊತೆಯಾಗಿ ತೂಕ ಹಾಕಿದರೆ ಬೆಳಗೆರೆಯೇ ನಾಚುವಂತೆ 120 ಕೇಜಿ ಮೀರಬಹುದು...

ಆದ್ದರಿಂದ ಇದನ್ನು ಧಾರಾವಾಹಿ ಎನ್ನದೆ ಭಾರಾವಾಹಿ ಎಂದರೆ ಸರಿ ಇರುತ್ತದಲ್ಲವೇ?

ಪ್ರೇಮ್‌ನ ಐತಿಹಾಸಿಕ ಚಿತ್ರ



'ಪ್ರೀತಿ ಏಕೆ ಭೂಮಿಮೇಲಿದೆ?' ಒಂದು 'ಐತಿಹಾಸಿಕ' ಚಿತ್ರವಾಗುವ ಹಾದಿಯಲ್ಲಿದೆ. ಅಂದ ಮಾತ್ರಕ್ಕೆ ಅದೊಂದು ದಾಖಲೆ ಸ್ಥಾಪಿಸುವ ಚಿತ್ರವಾಗುತ್ತದೆ ಎಂದು ಇಲ್ಲಿ ಹೇಳುತ್ತಿಲ್ಲ. ಬದಲಾಗಿ ಅದು ಬಿಡುಗಡೆಯಾಗುವ ಹೊತ್ತಿಗೆ ಅದೆಷ್ಟು ಕಾಲ ಕಳೆದಿರುತ್ತದೆಂದರೆ ಅದು ಐತಿಹಾಸಿಕ ಚಿತ್ರದಂತೆ ಭಾಸವಾದರೆ ಅಚ್ಚರಿಯೇನಿಲ್ಲ.

ಈ ಮಾತನ್ನು ಯಾಕೆ ಹೇಳುತ್ತಿದ್ದೇವೆಂದರೆ ವರಮಹಾಲಕ್ಷ್ಮಿ ಹಬ್ಬದ ದಿನದಂದೇ ಇದನ್ನು ಬಿಡುಗಡೆ ಮಾಡುವುದಾಗಿ ನಿರ್ಮಾಪಕ ಅಶ್ವಿನಿ ರಾಮಪ್ರಸಾದ್ ಮತ್ತು ನಾಯಕ ಕಂ ನಿರ್ದೇಶಕ ಪ್ರೇಂ ಹೋದ ವರ್ಷದ ವರಮಹಾಲಕ್ಷ್ಮಿ ಹಬ್ಬದಂದು ನಡೆದ ಮುಹೂರ್ತದ ಸಂದರ್ಭದಲ್ಲಿ ಹೇಳಿದ್ದರು. ಆದರೆ ಒಂದು ವರ್ಷ ಮುಗಿದು ಈ ವರ್ಷದ ಹಬ್ಬ ಬಂದು ಹೋದರೂ ಚಿತ್ರ ಮಾತ್ರ ಬರುವ ಸೂಚನೆಯೇ ಇಲ್ಲ.

ಅಂದಹಾಗೆ, ಈ ಚಿತ್ರದೊಂದಿಗೆ ಅವತ್ತು ಇನ್ನೂ ನಾಲ್ಕು ಚಿತ್ರಗಳೂ ಸೆಟ್ಟೇರಿದ್ದವು. ಆ ನಾಲ್ಕೂ ಚಿತ್ರಗಳು ಈಗಾಗಲೇ ತೆರೆಕಂಡು ಪುನಃ ಡಬ್ಬ ಸೇರಿವೆ. ಆದರೆ 'ಪ್ರೀವಿಭೂಮೇ' ಮಾತ್ರ ಇನ್ನೂ ಚಿತ್ರೀಕರಣವನ್ನೇ ಮುಗಿಸಿಲ್ಲ. ಇನ್ನು ಬಿಡುಗಡೆಯಾಗುವುದೆಂದು? ಅದಕ್ಕೆ ಇದನ್ನು 'ಐತಿಹಾಸಿಕ' ಚಿತ್ರ ಎಂದು ಕರೆದದ್ದು. ತಪ್ಪೇನಿಲ್ಲ ತಾನೆ? ■

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44